ಸುದ್ದಿಗಳ ಹೊನಲು
# ಸಂಜೆ ಮುಗಿಲು
ಕನ್ನಡ ಪ್ರಾದೇಶಿಕ ಸಂಜೆ ದಿನಪತ್ರಿಕೆ
ಸಂಪುಟ: 22, ಸಂಚಿಕೆ: 79, ಪುಟಗಳು: 8, ಭಾನುವಾರ, 29 ಡಿಸೆಂಬರ್ 2024 RNI NO. KARKAN/2002/08054
epaper: www.sanjemugilu.com
ಬೆಂಗಳೂರು। ಬೆಂಗಳೂರು ಗ್ರಾಮಾಂತರ। ಕೋಲಾರ। ಚಿಕ್ಕಬಳ್ಳಾಪುರ। ರಾಮನಗರ। ಮಂಡ್ಯ। ಮೈಸೂರು। ಚಾಮರಾಜನಗರ
₹3



ವೇಣು ಸಾರಥ್ಯದಲ್ಲಿ...

ಸುಭಾಷಿತ

ಅಧ್ಯಕ್ಷನೋ ಸೇನಾನಿಯೋ,
ಕಮ್ಮಾರನೋ ಚಮ್ಮಾರನೋ, ಎಲ್ಲರ
ಕಾಯಕವೆಲ್ಲವೂ ಪೂಜ್ಯ.
। ಕುವೆಂಪು

## ಪಂಚಾಂಗ

(ಭಾನುವಾರ 29, ಡಿಸೆಂಬರ್-2024)

- ಸಂವತ್ಸರ: 1946, ಕ್ರೋಧಿ
- ಋತು: ಹೇಮಂತ • ಅಯನ: ದಕ್ಷಿಣಾಯನ
- ಮಾಸ: ಮಾರ್ಗಶಿರ • ಪಕ್ಷ: ಕೃಷ್ಣ
- ತಿಥಿ: ಚತುರ್ದಶಿ • ನಕ್ಷತ್ರ: ಜೇಷ್ಠಾ
- ರಾಹುಕಾಲ: 04:37 - 06:02
- ಗುಳಿಕಕಾಲ: 03:12 - 04:37
- ಯಮಗಂಡಕಾಲ: 12:21 - 01:47



# ದಶಪ್ರಮತಿ ಮುದ್ರಣಾಲಯ
dashapramathi mudranalaya
PRE-PRESS PRINTERS
Contact: +91 9483589085 | e-mail: dashapramathimudranalaya@gmail.com
We Undertake Printing of Newspapers | Tabloids | Magazines



## ಸಂಕ್ಷಿಪ್ತ ಸುದ್ದಿ

### ಅಕ್ರಮ ವಾಣಿಜ್ಯ ಮಳಿಗೆ ತೆರವು



**ಕಾರವಾರ:** ಉತ್ತರ ಕನ್ನಡ ಜಿಲ್ಲೆಯ ಭಟ್ಕಳ ತಾಲೂಕಿನ ವಿಶ್ವವಿಖ್ಯಾತ ಮುರುಡೇಶ್ವರ ಕಡಲ ತೀರದಲ್ಲಿ CRZ ನಿಯಮ ಉಲ್ಲಂಘಿಸಿ ಅಕ್ರಮವಾಗಿ ನಿರ್ಮಿಸಿದ್ದ ವಾಣಿಜ್ಯ ಮಳಿಗೆಗಳನ್ನು ಗ್ರಾಮಪಂಚಾಯ್ತಿ ಅಧಿಕಾರಿಗಳು ಬೆಳ್ಳಂಬೆಳಗ್ಗೆ ತೆರವುಗೊಳಿಸುವ ಕಾರ್ಯಾಚರಣೆಗಿಳಿದಿದ್ದಾರೆ.

» **ಬೆಳ್ಳಂಬೆಳಗ್ಗೆ ಮುರುಡೇಶ್ವರ ಕಡಲ ತೀರದಲ್ಲಿ ಕಾರ್ಯಾಚರಣೆ**

ಪೊಲೀಸರ ಬಿಗಿ ಬಂದೋಬಸ್ತ್‌ನಲ್ಲಿ ಕಡಲ ತಡಿಯಲ್ಲೇ ನಿರ್ಮಾಣವಾಗಿದ್ದ ವಾಣಿಜ್ಯ ಮಳಿಗೆಯನ್ನು ತೆರವುಗೊಳಿಸಲಾಯಿತು. ಕಳೆದ 19 ದಿನದಿಂದ ಮುರುಡೇಶ್ವರ ಕಡಲ ತೀರದಲ್ಲಿ ಪ್ರವಾಸಿಗರಿಗೆ ನಿರ್ಬಂಧ ವಿಧಿಸಲಾಗಿತ್ತು. ಈ ಕುರಿತು ಭಟ್ಕಳ ಎಸಿ ಡಾ.ನಯನಾ ಅವರು ಆದೇಶ ಮಾಡಿದ್ದರು. ಇನ್ನು ಕಡಲ ತೀರಕ್ಕೆ ನಿರ್ಬಂಧ ತೆರವುಗೊಳಿಸಲು ಸ್ಥಳೀಯ ಜನರ ಒತ್ತಡವು ಪುಟ 2

### ಸಿಲಿಂಡರ್ ಸ್ಫೋಟ ಕೇಸ್; ಮತ್ತೊಬ್ಬ ಅಯ್ಯಪ್ಪ ಮಾಲಾಧಾರಿ ಸಾವು



**ಹುಬ್ಬಳ್ಳಿ:** ಸಿಲಿಂಡರ್ ಸೋರಿಕೆಯಿಂದ ಅಗ್ನಿ ಅವಘಡ ಪ್ರಕರಣಕ್ಕೆ ಸಂಬಂಧಿಸಿದಂತೆ ಮತ್ತೋರ್ವ ಅಯ್ಯಪ್ಪ ಮಾಲಾಧಾರಿ ಸಾವಿಗೀಡಾಗಿದ್ದಾರೆ. ಮೃತರ ಸಂಖ್ಯೆ 5 ಕ್ಕೆ ಏರಿಕೆಯಾಗಿದೆ.

» **ಮೃತರ ಸಂಖ್ಯೆ 5 ಕ್ಕೆ ಏರಿಕೆ**

ಹುಬ್ಬಳ್ಳಿಯ ಉಣಕಲ್ ನಿವಾಸಿ ಮಾಲಾಧಾರಿ ಶಂಕರ ಚವ್ಹಾಣ್ (30) ಮೃತಪಟ್ಟವರು. ಗಂಭೀರ ಸ್ಥಿತಿಯಲ್ಲಿದ್ದ ಇವರು ಕಳೆದ ಏಳು ದಿನಗಳಿಂದ ಹುಬ್ಬಳ್ಳಿಯ ತೀವ್ರ ನಿಗಾ ಘಟಕದಲ್ಲಿ ಪುಟ 2

ಮಹಿಳೆಯ ಖಾಸಗಿ ಫೋಟೋ ಇಟ್ಕೊಂಡು ಹಣ ಸುಲಿಗೆ

## ರೌಡಿ ಶೀಟರ್ ಕುಣಿಗಲ್ ಸೂರಿ ವಿರುದ್ಧ ದೂರು ದಾಖಲು!



**ಬೆಂಗಳೂರು:** ಮಹಿಳೆಯ ಖಾಸಗಿ ಫೋಟೋ ಇಟ್ಟುಕೊಂಡು ರೌಡಿ ಶೀಟರ್ ಒಬ್ಬ ಸುಲಿಗೆ ಮಾಡಿರುವ ಆರೋಪ ಕೇಳಿಬಂದಿದೆ. ರೌಡಿಶೀಟರ್ ಸುರೇಶ್ ಅಲಿಯಾಸ್ ಕುಣಿಗಲ್ ಸೂರಿ ಎಂಬಾತ ಖಾಸಗಿ ಫೋಟೋ ಇಟ್ಟುಕೊಂಡು ಹಣ ಸುಲಿಗೆ ಮಾಡುತ್ತಿದ್ದಾನೆ ಎಂದು ಮಾಜಿ ಯೋಧನ ಪತ್ನಿ ದೂರು ನೀಡಿದ್ದಾರೆ. ಘಟನೆಗೆ ಸಂಬಂಧಿಸಿದಂತೆ ರೌಡಿಶೀಟರ್ ಕುಣಿಗಲ್ ಸೂರಿ ವಿರುದ್ಧ ಬೆಂಗಳೂರಿನ ಬ್ಯಾಡರಹಳ್ಳಿ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

**ಫೋಟೋ ವೈರಲ್ ಮಾಡುವುದಾಗಿ ಬೆದರಿಕೆ:** ಖಾಸಗಿ ಫೋಟೋ ಇಟ್ಟುಕೊಂಡು ಬ್ಲಾಕ್ ಮೇಲ್ ಮಾಡುತ್ತಿದ್ದ ರೌಡಿಶೀಟರ್ ಕುಣಿಗಲ್ ಸೂರಿ, ಹಣ ನೀಡದಾಗ ಆ ಫೋಟೋ ವೈರಲ್ ಮಾಡುವುದಾಗಿ ಬೆದರಿಕೆ ಹಾಕಿದ್ದಾನೆ ಎಂದು ಮಹಿಳೆ ಆರೋಪಿಸಿದ್ದಾರೆ.

**ಕ್ಯಾಬ್ ಡ್ರೈವರ್ ಎಂದು ಪರಿಚಯ:** ಕೆಲ ವರ್ಷದ ಹಿಂದೆ ಅಂಧ್ರಹಳ್ಳಿಯಲ್ಲಿ ವಾಸವಿದ್ದ ಕುಣಿಗಲ್ ಸೂರಿ, ಸಂತ್ರಸ್ತ ಮಹಿಳೆಯ ಬಿಲ್ಡಿಂಗ್‌ನಲ್ಲಿ ಲೀಸ್‌ಗೆ ಇದ್ದ. ಕ್ಯಾಬ್ ಡ್ರೈವರ್ ಎಂದು ಪರಿಚಯ ಮಾಡಿಕೊಂಡಿದ್ದ ಈತ, ಮಹಿಳೆಯ ಜೊತೆ ಸಲುಗೆ ಬೆಳೆಸಿಕೊಂಡಿದ್ದ. ನಂತರ ಮನೆಯನ್ನು ಖಾಲಿ ಮಾಡಿದ್ದ ಕುಣಿಗಲ್ ಸೂರಿ, ಮಹಿಳೆಯ ಖಾಸಗಿ ಫೋಟೋವನ್ನು ಸೆರೆ ಪುಟ 2

## ದೆಹಲಿ ಗಣರಾಜ್ಯೋತ್ಸವ ಪರೇಡ್‌ಗೆ ಗದಗನ ಬ್ರಹ್ಮ ಜಿನಾಲಯ ದೇವಾಲಯ ಆಯ್ಕೆ



**ಗದಗ:** ಕಲೆ, ಸಂಸ್ಕೃತಿಗೆ ಹೆಸರುವಾಸಿ ಮುದ್ರಣ ಕಾಶಿ ಗದಗ ಜಿಲ್ಲೆ. ಗದಗ ಜಿಲ್ಲೆಗೆ ಮತ್ತೊಂದು ಹಿರಿಮೆ ಒಲಿದು ಬಂದಿದೆ. ಹೌದು, ಈ ಭಾರಿಯ ಗಣರಾಜ್ಯೋತ್ಸವ ಪರೇಡ್‌ನಲ್ಲಿ ಗದಗ ಜಿಲ್ಲೆಯ ಲಕ್ಕುಂಡಿಯ ಬ್ರಹ್ಮ ಜಿನಾಲಯ ದೇವಸ್ಥಾನ ಐತಿಹಾಸಿಕ ದೇವಾಲಯ ಆಯ್ಕೆಯಾಗಿದೆ. ಈ ದೇವಾಲಯದ ಮಾದರಿಯ ಸ್ತಬ್ಧಚಿತ್ರ ರಾಷ್ಟ್ರ ರಾಜ್ಯಧಾನಿ ದೆಹಲಿಯಲ್ಲಿ ಕಂಗೊಳಿಸಲಿದೆ. ನಮ್ಮ ರಾಜ್ಯದ ಸಂಕೇತವಾಗಿ ಬ್ರಹ್ಮ ಜಿನಾಲಯ ಇಡೀ ದೇಶದಲ್ಲಿ ಸದ್ದು ಮಾಡಲಿದೆ.

101 ಬಾವಿ 101 ದೇವಸ್ಥಾನ ಹೊಂದಿರುವ ಅಪರೂಪದ ಗ್ರಾಮ ಅಂದ್ರೆ, ಅದು ಗದಗ ತಾಲೂಕಿನ ಲಕ್ಕುಂಡಿ ಗ್ರಾಮ. ಲಕ್ಕುಂಡಿ ಗ್ರಾಮ ವಿವಿಧ ಶಿಲ್ಪಕಲೆ, ವಾಸ್ತುಶಿಲ್ಪ ದೇವಾಲಯಗಳನ್ನು ಒಳಗೊಂಡಿದೆ. ಸಾಂಸ್ಕೃತಿಕ, ಐತಿಹಾಸಿಕ, ಶಿಲ್ಪಕಲಾ ನೈಪುಣ್ಯತೆಗೆ ತನ್ನದೆಯಾದ ಛಾಪು ಮೂಡಿಸಿದೆ. ಈ ಬಾರಿಯ ದೆಹಲಿಯ ಗಣರಾಜ್ಯೋತ್ಸವ ಪರೇಡ್‌ಗೆ ಕರ್ನಾಟಕ ರಾಜ್ಯದಿಂದ ಐತಿಹಾಸಿಕ ಲಕ್ಕುಂಡಿಯ ಬ್ರಹ್ಮ ಜಿನಾಲಯದ ಸ್ತಬ್ಧಚಿತ್ರವು ಆಯ್ಕೆಯಾಗಿದೆ. ಪುಟ 2

## ದಕ್ಷಿಣ ಕೊರಿಯಾದಲ್ಲಿ 170 ಪ್ರಯಾಣಿಕರಿದ್ದ

# ವಿಮಾನ ಪತನ




**ದಕ್ಷಿಣ ಕೊರಿಯಾ:** ದಕ್ಷಿಣ ಕೊರಿಯಾದಲ್ಲಿ 170 ಪ್ರಯಾಣಿಕರಿದ್ದ ವಿಮಾನ ಪತನಗೊಂಡಿದ್ದು, ಇದುವರೆಗೆ 47 ಮಂದಿ ಮೃತಪಟ್ಟಿರುವ ಕುರಿತು ಮಾಹಿತಿ ಲಭ್ಯವಾಗಿದೆ. ದಕ್ಷಿಣ ಕೊರಿಯಾದ ನಗರವಾದ ಮುವಾನ್‌ನಲ್ಲಿರುವ ವಿಮಾನ ನಿಲ್ದಾಣದಲ್ಲಿ ಭಾನುವಾರ ಜೆಜು ಏರ್ ವಿಮಾನವು ಲ್ಯಾಂಡಿಂಗ್ ಮಾಡುವಾಗ ಬೆಂಕಿ ಕಾಣಿಸಿಕೊಂಡಿದೆ. ವಿಮಾನವು ಬ್ಯಾಂಕಾಕ್‌ನಿಂದ ಹಿಂತಿರುಗುತ್ತಿತ್ತು. ಬೋಯಿಂಗ್ 737-800 ವಿಮಾನದಲ್ಲಿದ್ದ ಪ್ರಯಾಣಿಕರಿಗಾಗಿ ರಕ್ಷಣಾ ಕಾರ್ಯಾಚರಣೆ ನಡೆಯುತ್ತಿದೆ.

ಕಳೆದ ವಾರ ಕಜಾಕಿಸ್ತಾನದ ಅಕ್ಟೌ ಬಳಿ ಸಂಭವಿಸಿದ ಅಜೆರ್‌ಬೈಜಾನ್ ಏರ್‌ಲೈನ್ ವಿಮಾನ ಅಪಘಾತದ ಬೆನ್ನಲ್ಲೇ ಈ ಸುದ್ದಿ ಕೇಳಿಬಂದಿದೆ. ದಕ್ಷಿಣ ಕೊರಿಯಾದ ಮುವಾನ್ ಅಂತರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ 175 ಪ್ರಯಾಣಿಕರು ಮತ್ತು 6 ಸಿಬ್ಬಂದಿ ವಿಮಾನದಲ್ಲಿದ್ದರು.

ರಕ್ಷಣಾ ಮತ್ತು ಅಗ್ನಿಶಾಮಕ ದಳದ ತಂಡ ಕಾರ್ಯಾಚರಣೆ ನಡೆಸುತ್ತಿದೆ. ವಿಮಾನವು ಥೈಲ್ಯಾಂಡ್‌ನಿಂದ ಹಿಂತಿರುಗುತ್ತಿದ್ದಾಗ ಪುಟ 2



## ಆಂಟಿಗಾಗಿ ಯುವಕರ ಫೈಟಿಂಗ್!

### ಒಬ್ಬನ ಎದೆಗೆ ಚಾಕು ಇರಿದು ಮತ್ತೋರ್ವ ಎಸ್ಕೇಪ್



**ಬೆಳಗಾವಿ:** ಹುಡುಗಿಗಾಗಿ ಇಬ್ಬರು ಹುಡುಗರ ನಡುವಿನ ಜಗಳ, ಪ್ರೀತಿಗಾಗಿ ಮನೆಯಲ್ಲಿ ಕಿರಿಕಿರಿ ಹೀಗೆಲ್ಲಾ ಸುದ್ದಿಯನ್ನು ನಾವೆಲ್ಲಾ ಕೇಳಿರುತ್ತೇವೆ. ಆದ್ರೆ ಇಲ್ಲೊಂದು ವಿಚಿತ್ರ ಪ್ರಕರಣವೊಂದು ಬೆಳಕಿಗೆ ಬಂದಿದೆ. ಓರ್ವ ಆಂಟಿಗಾಗಿ ಇಬ್ಬರ ನಡುವೆ ಗಲಾಟೆ ನಡೆದಿರುವ ಪ್ರಕರಣ ಇದೀಗ ಬೆಳಗಾವಿಯಲ್ಲಿ ಬೆಳಕಿಗೆ ಬಂದಿದೆ.

ಹೌದು, ಆಂಟಿಗಾಗಿ ಇಬ್ಬರ ಯುವಕರ ನಡುವೆ ಮಾರಾಮಾರಿ ನಡೆದಿರುವ ಘಟನೆ ಬೆಳಕಿಗೆ ಬಂದಿದೆ. ಇದೀಗ ಆಂಟಿ ಸಹವಾಸದಿಂದ ಇಬ್ಬರು ಆಸ್ಪತ್ರೆ ಸೇರುವ ಪರಿಸ್ಥಿತಿ ಎದುರಾಗಿದೆ.

**ಆಂಟಿ ಪ್ರಿಯರು ಆಸ್ಪತ್ರೆಗೆ ದಾಖಲು!:** ಆಂಟಿಗಾಗಿ ಇಬ್ಬರು ಯುವಕರ ನಡುವೆ ಮಾರಾಮಾರಿ ನಡೆದಿದೆ. ಗೋಕಾಕ್ ನಗರದಲ್ಲಿ ನಿನ್ನೆ ರಾತ್ರಿ ಈ ಘಟನೆ ಬೆಳಕಿಗೆ ಬಂದಿದ್ದು, ಆನಂದ್ ಎಂಬಾತನ ಜೊತೆಗೆ ಗೋಕಾಕ್ ಆಂಟಿಯೊಬ್ಬರು ಲಿವಿಂಗ್ ರಿಲೇಷನ್‌ಶಿಪ್‌ನಲ್ಲಿದ್ದರಂತೆ. ಇನ್ನು ಈ ಆನಂದ ಬೆಂಗಳೂರಿನಲ್ಲಿ ಡ್ರೈವರ್ ಆಗಿದ್ದ ಎನ್ನಲಾಗಿದೆ.

ಆದ್ರೆ ನಿನ್ನೆ ಗೋಕಾಕ್ ಆಂಟಿ ಮನೆಯಲ್ಲಿ ಯಾರೂ ಇಲ್ಲದಾಗ ಮಂಜುನಾಥ ಕೋಳಿ ಎಂಬ ವ್ಯಕ್ತಿ ಬಂದಿದ್ದನಂತೆ. ಇದೇ ವೇಳೆ ಆಂಟಿಯ ಗ್ರಹಚಾರವೆಂಬಮತೆ ಆಕೆಯ ಮನೆಗೆ ಆನಂದನೂ ಬಂದಿದ್ದಾನೆ. ಈ ವೇಳೆ ಆನಂದ ಮತ್ತು ಮಂಜುನಾಥ ನಡುವೆ ಗಲಾಟೆ ನಡೆದಿದೆ ಎನ್ನಲಾಗಿದ್ದು, ಈ ವೇಳೆ ಮಂಜುನಾಥ ಎಂಬಾತ ಕೋಪ ನೆತ್ತಿಗೇರಿ ಆನಂದನ ಮೇಲೆ ಚಾಕುವಿನಿಂದ ದಾಳಿ ಮಾಡಿದ್ದಾನೆ ಎನ್ನಲಾಗಿದೆ. ಪುಟ 2

ಸಚಿನ್ ಮನೆಯಲ್ಲಿನ ದಾಖಲೆಗಳು ಕಾಂಗ್ರೆಸ್ ಕಚೇರಿ ತಲುಪಿವೆ!

## ಮತ್ತಿಮೂಡ್ ಗಂಭೀರ ಆರೋಪ



**ಬೀದರ್:** ಗುತ್ತಿಗೆದಾರ ಸಚಿನ್ ಆತ್ಮಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಸಚಿವ ಪ್ರಿಯಾಂಕ್ ಖರ್ಗೆ ಆಪ್ತ ರಾಜು ಕಪನೂರ್ ಹೆಸರು ಕೇಳಿ ಬಂದಿದೆ. ಮೃತ ಸಚಿನ್ ಬರೆದಿರುವ 7 ಪುಟಗಳ ಡೆತ್ ನೋಟ್‌ನಲ್ಲಿ ರಾಜು ಕಪನೂರ್ ಹೆಸರು ಉಲ್ಲೇಖಿಸಿದ್ದಾರೆ. ಈ ಕುರಿತು ಬಿಜೆಪಿ ಶಾಸಕ ಬಸವರಾಜ್ ಮತ್ತಿಮೂಡ್ ಅವರು ಕಾಂಗ್ರೆಸ್ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಬೀದರ್ ಯುವ ಗುತ್ತಿಗೆದಾರ ಸಚಿನ್ ಪಂಚಾಳ ಆತ್ಮಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಭಾಲ್ಕಿ ತಾಲ್ಲೂಕಿನ ಕಟ್ಟಿತೂಗಾಂವ್ ಗ್ರಾಮದ ಸಚಿನ್ ಅವರ ಮನೆ ಮುಂದೆ ಶಾಸಕ ಬಸವರಾಜ್ ಮತ್ತಿಮೂಡ್ ಪ್ರತಿಕ್ರಿಯೆ ನೀಡಿದ್ದಾರೆ. ಸಚಿನ್ ಆತ್ಮಹತ್ಯೆ ಪ್ರಕರಣವನ್ನು ಸಿಬಿಐಗೆ ಹಸ್ತಾಂತರಿಸಬೇಕು. ಮನೆಯಲ್ಲಿರುವ ಮೊಬೈಲ್ ಸೇರಿ ವಿವಿಧ ಸಾಮಾನುಗಳನ್ನು ತೆಗುದಕೊಂಡು ಹೋಗಿದ್ದಾರೆ.

ಡೆತ್ ನೋಟ್‌ನಲ್ಲಿ ಬಸವರಾಜ್ ಮತ್ತಿಮೂಡ್ ಹಾಗೂ ಇನ್ನು 3 ಜನರ ಕೊಲೆ ಸಂಚು ಉಲ್ಲೇಖವಾಗಿರುವ ವಿಚಾರವಾಗಿ ಪ್ರತಿಕ್ರಿಯಿಸಿರುವ ಅವರು, ನನ್ನ ಮರ್ಡರ್ ಮಾಡಿ ಮುಂದೆ ಎಂಎಲ್ಎ ಅಗಬೇಕು ಅಂತಾ ಅನ್ಕೊಂಡಿರಬಹುದು, ಸಚಿನ್ ಬಗ್ಗೆ ನಮ್ಮಗೆ ಗೊತ್ತೆ ಇಲ್ಲಾ, ಪರಿಚಯವೂ ಇಲ್ಲಾ. ಆದ್ರೆ ಅವನ ಮುಂದೆ ಮಾತನಾಡಿದ್ದಕ್ಕೆ ಬರೆದಿರಬಹುದು. ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಹಾಳಾಗಿದೆ, ಬೀದರ್ ಹಾಗೂ ಕಲಬುರಗಿ ಜಿಲ್ಲಾ ಉಸ್ತುವಾರಿ ಸಚಿವರು ರಾಜೀನಾಮೆ ನೀಡಬೇಕು ಎಂದು ಒತ್ತಾಯಿಸಿದರು.

ಸಣ್ಣಪುಟ್ಟ ಕೇಸ್‌ಗಳಲ್ಲಿ ಅರೆಸ್ಟ್ ಮಾಡ್ತಾರೆ, ಇದರಲ್ಲಿ ಯಾಕೆ ಇನ್ನು ಅರೆಸ್ಟ್ ಮಾಡಿಲ್ಲಾ. ಸಚಿನ್ ಮನೆಯಲ್ಲಿನ ದಾಖಲೆಗಳು ಕಾಂಗ್ರೆಸ್ ಕಚೇರಿ ತಲುಪಿವೆ. ಪ್ರಕರಣ ಮುಚ್ಚಿ ಹಾಕುವ ಪ್ರಯತ್ನ ನಡೆಯುತ್ತಿದೆ. ಸಚಿನ್ ಆತ್ಮಹತ್ಯೆ ಮಾಡಿಕೊಳ್ಳಲು ಪುಟ 2

## ಬಳ್ಳಾರಿ ಪ್ರಕರಣ ಮಾಸುವ ಮುನ್ನವೇ ವಿಜಯನಗರದಲ್ಲೂ ಬಾಣಂತಿ ಸಾವು




**ವಿಜಯನಗರ:** ಬಳ್ಳಾರಿ ಜಿಲ್ಲಾ ಆಸ್ಪತ್ರೆಯಲ್ಲಿ ಬಾಣಂತಿಯರ ಸರಣಿ ಸಾವಿನ ಪ್ರಕರಣ ಮಾಸುವ ಮುನ್ನವೇ, ವಿಜಯನಗರ ಜಿಲ್ಲೆಯ ತಾಯಿ ಮತ್ತು ಮಕ್ಕಳ ಆಸ್ಪತ್ರೆಯಲ್ಲಿ ವೈದ್ಯರ ನಿರ್ಲಕ್ಷ್ಯಕ್ಕೆ ಬಾಣಂತಿ ಸಾವಾಗಿದೆ ಎಂಬ ಆರೋಪ ಕೇಳಿಬಂದಿದೆ. ಸಿಸೇರಿಯನ್ ಮೂಲಕ ಹೆರಿಗೆಯಾಗಿ ಐದು ದಿನಗಳ ಬಳಿಕ ಬಾಣಂತಿ ಸಾವಾಗಿದ್ದು, ಇದಕ್ಕೆ ವೈದ್ಯರ ನಿರ್ಲಕ್ಷ್ಯವೇ ಕಾರಣ ಅಂತ ಮೃತಳ ಪೋಷಕರು ಆಸ್ಪತ್ರೆ ಮುಂದೆ ಕಣ್ಣೀರು ಹಾಕಿದ್ದಾರೆ.

ಬಳ್ಳಾರಿ ಜಿಲ್ಲಾ ಆಸ್ಪತ್ರೆಯಲ್ಲಿ ಕಳಪೆ IV ದ್ರಾವಣದಿಂದ ಕಳೆದ ಒಂದು ತಿಂಗಳ ಅವಧಿಯಲ್ಲಿ ಐವರ ಬಾಣಂತಿಯರ ಸರಣಿ ಸಾವಾಗಿತ್ತು. ಈ ಪ್ರಕರಣ ಮಾಸುವ ಮುನ್ನವೇ ವಿಜಯನಗರ ಜಿಲ್ಲೆಯ ತಾಯಿ ಮತ್ತು ಮಕ್ಕಳ ಆಸ್ಪತ್ರೆಯಲ್ಲಿ ಬಾಣಂತಿ ಸಾವಾಗಿದೆ. ಬಳ್ಳಾರಿ ಜಿಲ್ಲೆಯ ಸಂಡೂರು ತಾಲೂಕಿನ ನಾಗಲಾಪೂರ ಗ್ರಾಮದ ಐಶ್ವರ್ಯ (20) ಮೃತ ದುರ್ದೈವಿ.

ಗರ್ಭಿಣಿ ಐಶ್ವರ್ಯ ಡಿಸೆಂಬರ್ 19 ರಂದು ವಿಜಯನಗರ ಜಿಲ್ಲೆಯ ಹೊಸಪೇಟೆ ನಗರದ ಸರ್ಕಾರಿ ತಾಯಿ ಮತ್ತು ಮಕ್ಕಳ ಆಸ್ಪತ್ರೆಗೆ ದಾಖಲಾಗಿದ್ದರು. ಡಿಸೆಂಬರ್ 20 ರಂದು ಐಶ್ವರ್ಯಯವರಿಗೆ ಸಿಸೇರಿಯನ್ ಮೂಲಕ ಹೆರಿಗೆ ಮಾಡಲಾಗಿತ್ತು. ಮುದ್ದಾದ ಹೆಣ್ಣು ಮಗು ಜನನವಾಗಿದೆ. ಮನೆಗೆ ಮಹಾಲಕ್ಷ್ಮಿ ಬಂದ್ಲು ಅಂತ ಇಡೀ ಕುಟುಂಬ ಸಂತಸದಲ್ಲಿ ಇತ್ತು. ಆರಂಭದಲ್ಲಿ ತಾಯಿ ಮತ್ತು ಮಗುವಿನ ಆರೋಗ್ಯ ಚೆನ್ನಾಗಿಯೇ ಇತ್ತು. ಹೆರಿಗೆಯಾಗಿ ಮೂರು ದಿನಗಳ ಬಳಿಕ, ಡಿಸೆಂಬರ್ 23 ರಂದು ಅದೇನಾಯಿತೋ ಏನೋ ಗೊತ್ತಿಲ್ಲ ಬೆಳಗ್ಗೆ ತಿಂಡಿ ಮಾಡಿದ ಬಳಿಕ ಬಾಣಂತಿ ಐಶ್ವರ್ಯಳಿಗೆ ಇದ್ದಕ್ಕಿದ್ದಂತೆ ವಾಂತಿ ಭೇದಿ ಶುರುವಾಗಿದೆ. ಪುಟ 2

ಮೂರನೇ ಮಗುವೂ ಹೆಣ್ಣು

## ಪತ್ನಿಯನ್ನು ಬೆಂಕಿಹಚ್ಚಿ ಸುಟ್ಟ ಗಂಡ



**ಮುಂಬೈ:** ಹೆಣ್ಣು-ಗಂಡು ಇಬ್ಬರೂ ಸಮಾನರು ಎನ್ನುವ ಈ ಕಾಲದಲ್ಲಿ ಹೆಣ್ಣುಮಗುವನ್ನು ಹೆತ್ತಿದ್ದಕ್ಕೆ ಪತ್ನಿಯನ್ನೇ ಬೆಂಕಿ ಹಚ್ಚಿ ಗಂಡ ಕೊಲೆ ಮಾಡಿರುವ ಘಟನೆ ನಡೆದಿದೆ. ಮಹಾರಾಷ್ಟ್ರದ ಪರ್ಭಾನಿ ಜಿಲ್ಲೆಯಲ್ಲಿ ಮಹಿಳೆ ಮೂರನೇ ಹೆಣ್ಣುಮಗುವಿಗೆ ಜನ್ಮ ನೀಡಿದ್ದಳು, ಕೋಪಗೊಂಡ ಪತಿ ಪತ್ನಿಗೆ ಪೆಟ್ರೋಲ್ ಸುರಿದು ಬೆಂಕಿ ಹಚ್ಚಿ ಕೊಲೆ ಮಾಡಿದ್ದಾನೆ.

ಕುಂಡ್ಲಿಕ್ ಉತ್ತಮ್ ಕಾಳೆ (32) ರಾತ್ರಿ ಗಂಗಾಖೇಡ್ ನಾಕಾದಲ್ಲಿ ಪತ್ನಿ ಮೈನಾಳನ್ನು ಕೊಂದಿದ್ದಾನೆ ಎಂದು ಅಧಿಕಾರಿ ತಿಳಿಸಿದ್ದಾರೆ. ಮೈನಾ ಅವರ ಸಹೋದರಿ ನೀಡಿದ ದೂರಿನ ಪ್ರಕಾರ, ಆರೋಪಿಯು ಒಂದೊಮ್ಮೆ ನೀನು ಮೂರನೇ ಸಲವೂ ಹೆಣ್ಣುಮಗುವಿಗೆ ಜನ್ಮ ನೀಡಿದರೆ ಜೀವಂತ ಉಳಿಸುವುದಿಲ್ಲ ಎಂದು ಬೆದರಿಕೆ ಹಾಕುತ್ತಿದ್ದ. ಪುಟ 2

## 140 ಅಡಿ ಆಳದ ಕೊಳವೆ ಬಾವಿಗೆ ಬಿದ್ದ ಬಾಲಕ



**ನವದೆಹಲಿ:** ಹತ್ತು ವರ್ಷದ ಬಾಲಕ 140 ಅಡಿ ಆಳದ ಕೊಳವೆ ಬಾವಿಗೆ ಬಿದ್ದಿರುವ ಘಟನೆ ಮಧ್ಯಪ್ರದೇಶದ ಗುನಾ ಜಿಲ್ಲೆಯಲ್ಲಿ ನಡೆದಿದೆ. 39 ಅಡಿ ಆಳದಲ್ಲಿ ಸಿಲುಕಿದ್ದಾನೆ. ಅನೇಕ ತಂಡಗಳನ್ನು ಒಳಗೊಂಡ ಬೃಹತ್ ರಕ್ಷಣಾ ಕಾರ್ಯಾಚರಣೆಯನ್ನು ಪ್ರಾರಂಭಿಸಲಾಗಿದೆ. ಶನಿವಾರ ರಾತ್ರಿಯಿಂದ ಆತನನ್ನು ರಕ್ಷಿಸುವ ಪ್ರಯತ್ನ ಮುಂದುವರೆದಿದೆ.

ರಾಜ್ಯ ವಿಪತ್ತು ನಿರ್ವಹಣಾ ಪಡೆ (ಎಸ್‌ಡಿಆರ್‌ಎಫ್), ರಾಷ್ಟ್ರೀಯ ವಿಪತ್ತು ನಿರ್ವಹಣಾ ಪಡೆ (ಎನ್‌ಡಿಆರ್‌ಎಫ್) ಮತ್ತು ಸ್ಥಳೀಯ ಪೊಲೀಸರ ತಂಡಗಳನ್ನು ಸ್ಥಳದಲ್ಲಿ ನಿಯೋಜಿಸಲಾಗಿದೆ. ರಕ್ಷಣಾ ತಂಡಗಳು 40 ಅಡಿಗಳವರೆಗೆ ಸಮಾನಾಂತರ ಹೊಂಡವನ್ನು ಅಗೆದು ಬಾಲಕನನ್ನು ಉಳಿಸುವ ಪ್ರಯತ್ನವನ್ನು ಮುಂದುವರೆಸಿದ್ದಾರೆ ಎಂದು ಡಿಸಿ ಸತ್ಯೇಂದ್ರ ಸಿಂಗ್ ತಿಳಿಸಿದ್ದಾರೆ. ಮಗುವನ್ನು ಸುರಕ್ಷಿತವಾಗಿಡಲು ಆಮ್ಲಜನಕ ಸರಬರಾಜು ಮಾಡಲಾಗುತ್ತಿದೆ.

ರಾಜಸ್ಥಾನದಲ್ಲಿ ಇಂಥದ್ದೇ ಘಟನೆ ನಡೆದಿತ್ತು ಮನೆಯ ಹೊರಗೆ ಆಟವಾಡುತ್ತಿದ್ದ ಮೂರು ವರ್ಷದ ಹೆಣ್ಣುಮಗು ಅಲ್ಲೇ ಇದ್ದ 700 ಅಡಿ ಆಳದ ಕೊಳವೆ ಬಾವಿಗೆ ಬಿದ್ದಿರುವ ಘಟನೆ ರಾಜಸ್ಥಾನದಲ್ಲಿ ನಡೆದಿದೆ. ಮಾಹಿತಿ ಪಡೆದ ಅಧಿಕಾರಿಗಳು ತಕ್ಷಣ ರಕ್ಷಣಾ ಕಾರ್ಯಾಚರಣೆ ಆರಂಭಿಸಿದರು. ಪುಟ 2

## ಆನ್‌ಲೈನ್ ಗೇಮ್ ಹುಚ್ಚಾಟ: ಲಕ್ಷ ಲಕ್ಷ ಸಾಲ

**ಬೀದರ್:** ಆನ್‌ಲೈನ್ ಗೇಮ್ ಹುಚ್ಚಾಟದಿಂದ ಲಕ್ಷಾಂತರ ರೂ. ಸಾಲ ಮಾಡಿಕೊಂಡು ಆತ್ಮಹತ್ಯೆಗೆ ಯತ್ನಿಸಿದ್ದ ಯುವಕ ಇಂದು ಚಿಕಿತ್ಸೆ ಫಲಕಾರಿಯಾಗದೇ ಸಾವನ್ನಪ್ಪಿದ್ದಾನೆ. ಈ ಘಟನೆ ಬೀದರ್ ಜಿಲ್ಲೆಯ ಭಾಲ್ಕಿ ತಾಲೂಕಿನ ಜ್ಯೋತಿ ತಾಂಡದಲ್ಲಿ ನಡೆದಿದೆ.



» **ಆತ್ಮಹತ್ಯೆಗೆ ಯತ್ನಿಸಿದ್ದ ಯುವಕ ಸಾವು**

ಮೃತ ಯುವಕನನ್ನು 25 ವರ್ಷದ ವಿಜಯ್‌ಕುಮಾರ್ ಜಗನ್ನಾಥ ಹೊಳ್ಳೆ ಎಂದು ಗುರುತಿಸಲಾಗಿದೆ. ಎರಡು ದಿನಗಳ ಹಿಂದೆ ಮೈಮೇಲೆ ಪೆಟ್ರೋಲ್ ಸುರಿದು, ಬೆಂಕಿ ಹಚ್ಚಿಕೊಂಡು ಆತ್ಮಹತ್ಯೆಗೆ ಯತ್ನಿಸಿದ್ದ ಯುವಕ ಎರಡೂ ದಿನಗಳ ಕಾಲ ನರಳಾಡಿ ನಿನ್ನೆ ಬ್ರಿಮ್ಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಫಲಕಾರಿಯಾಗದೇ ಕೊನೆಯುಸಿರೆಳೆದಿದ್ದಾನೆ.

ಮೃತ ಯುವಕ ಬಿ.ಫಾರ್ಮಸಿ ಪದವೀಧರನಾಗಿದ್ದು, ಆನ್‌ಲೈನ್ ಗೇಮ್ ಹುಚ್ಚಿಗೆ ಬಿದ್ದು 5 ಲಕ್ಷಕ್ಕೂ ಅಧಿಕ ಸಾಲ ಮಾಡಿದ್ದ. ಇದಕ್ಕೂ ಮುನ್ನ 10 ಲಕ್ಷ ರೂ. ಸಾಲ ಮಾಡಿದ್ದ, ಅದನ್ನು ಆತನ ಕುಟುಂಬಸ್ಥರು ತೀರಿಸಿದ್ದರು. ಅದಾದ ಬಳಿಕ ಮತ್ತೆ 5 ಲಕ್ಷ ರೂ. ಸಾಲ ಮಾಡಿದ್ದನು. ಈ ವಿಷಯ ಮನೆಯಲ್ಲಿ ಗೊತ್ತಾದರೆ ತೊಂದರೆ ಆಗುತ್ತದೆ ಎಂದು ಆತ್ಮಹತ್ಯೆಗೆ ಯತ್ನಿಸಿದ್ದನು. ಈ ಕುರಿತು ಮೇಹಕರ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು.

## ನಿದ್ದೆ ಮಂಪರಿನಲ್ಲಿ ಕಂದಕಕ್ಕೆ ಬಿದ್ದ ಕಾರು

**ಮಂಗಳೂರು:** ಚಾಲಕನ ನಿಯಂತ್ರಣ ತಪ್ಪಿ ಕಾರು ಕಂದಕಕ್ಕೆ ಬಿದ್ದು ಮೂವರು ಸ್ಥಳದಲ್ಲೇ ದಾರುಣ ಸಾವಿಗೀಡಾಗಿರುವ ಘಟನೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನಡೆದಿದೆ.

» **ಮೂವರು ಸ್ಥಳದಲ್ಲೇ ಸಾವು**

ಪುತ್ತೂರಿನ ಪರ್ಲಡ್ಕದ ಮಾಣಿ-ಮೈಸೂರು ಹೆದ್ದಾರಿಯಲ್ಲಿ ಕಾರೊಂದು ಚಾಲಕನ ನಿಯಂತ್ರಣ ತಪ್ಪಿ ಕಂದಕಕ್ಕೆ ಉರುಳಿ ಬಿದ್ದು ತಂದೆ, ಮಗ ಸೇರಿ ಮೂವರು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಸುಳ್ಯದಿಂದ ಪುತ್ತೂರಿಗೆ ಕಾರಿನಲ್ಲಿ ಆಗಮಿಸುತ್ತಿದ್ದ ವೇಳೆ ನಿದ್ದೆ ಮಂಪರಿನಲ್ಲಿದ್ದ ಚಾಲಕನ ನಿಯಂತ್ರಣ ತಪ್ಪಿ ಕಾರು ಪಲ್ಟಿಯಾಗಿದೆ. ಈ ವೇಳೆ ಕಾರಿನಲ್ಲಿದ್ದ ಸುಳ್ಯ ಜಟ್ಟಿಪಳ್ಳ ನಿವಾಸಿಗಳಾದ ಅಣ್ಣು ನಾಯ್ಕ್ ಹಾಗೂ ಅವರ ಮಗ ಚಿದಾನಂದ್, ಪಕ್ಕದ ಮನೆಯ ರಮೇಶ್ ನಾಯ್ಕ್ ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ಪುತ್ತೂರು ಸಂಚಾರಿ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

## ಹಾಸನದಲ್ಲಿ 60 ಕ್ವಿಂಟಾಲ್ ಭತ್ತ ತಿಂದು ಹಾಕಿದ ಪುಂಡಾನೆಗಳು

**ಹಾಸನ:** ಭತ್ತದ ಬೆಳೆ ಕಟಾವು ಮಾಡಿ ಭತ್ತವನ್ನು ಬೇರ್ಪಡಿಸಿ ಚೀಲಗಳಲ್ಲಿ ತುಂಬಿಟ್ಟಿದ್ದ ಸುಮಾರು 60 ಕ್ವಿಂಟಾಲ್ ಭತ್ತವನ್ನು ಕಾಡಾನೆಗಳ ಹಿಂಡು ತಿಂದು ಹಾಕಿರುವ ಘಟನೆ ಬೇಲೂರು ತಾಲೂಕಿನ ದೇವಲಾಪುರ ಗ್ರಾಮದಲ್ಲಿ ನಡೆದಿದೆ.

ಗ್ರಾಮದ ಮನು, ಹೂವೇಗೌಡ, ಹಾಲೇಗೌಡ, ಹಿರಿಗೌಡ, ಶರತ್ ಹಾಗೂ ರಮೇಶ್ ಸೇರಿದಂತೆ 8 ಜನ ರೈತರು ಭತ್ತವನ್ನು ಕಟಾವು ಮಾಡಿ ಟ್ರ್ಯಾಕ್ಟರ್ ಮೂಲಕ ಸಾಗಿಸಲು ಸಿದ್ಧತೆ ನಡೆಸಿದ್ದರು. ತಡರಾತ್ರಿ 12 ಕಾಡಾನೆಗಳ ಹಿಂಡು ದಾಳಿ ಮಾಡಿ ಭತ್ತ ತಿಂದು ಹಾಕಿವೆ. ಅಲ್ಲದೇ ಉಳಿದ ಭತ್ತದ ಚೀಲಗಳನ್ನು ಚೆಲ್ಲಾಪಿಲ್ಲಿ ಮಾಡಿವೆ. ಅಂದಾಜು 3 ಲಕ್ಷ ರೂ. ಮೌಲ್ಯದ ಭತ್ತವನ್ನು ಗಜಪಡೆ ನಾಶ ಮಾಡಿವೆ.

ಕಷ್ಟಪಟ್ಟು ಬೆಳೆದಿದ್ದ ಭತ್ತದ ಫಸಲು ಕಳೆದುಕೊಂಡು ರೈತರು ಕಂಗಾಲಾಗಿದ್ದು, ಕಣ್ಣೀರಿಟ್ಟಿದ್ದಾರೆ. ಬೆಳೆ ನಷ್ಟಕ್ಕೆ ಸೂಕ್ತ ಪರಿಹಾರ ನೀಡುವಂತೆ ಅನ್ನದಾತರು ಆಗ್ರಹಿಸಿದ್ದಾರೆ.

### ಪೊಲೀಸರಿಗೆ ತಲೆನೋವಾಯ್ತು ಶ್ವೇತಾಗೌಡ ವಂಚನೆ ಕೇಸ್

# 2 ಕೆಜಿ 960 ಗ್ರಾಂ ಚಿನ್ನದಲ್ಲಿ 700 ಗ್ರಾಂ ಮಾತ್ರ ರಿಕವರಿ

**ಬೆಂಗಳೂರು:** ಗಣ್ಯರ ಹೆಸರು ಬಳಸಿಕೊಂಡು ಕೋಟ್ಯಂತರ ರೂ. ಮೌಲ್ಯದ ಚಿನ್ನವನ್ನು ಖರೀದಿಸಿ ಹಣ ಪಾವತಿಸದೇ ವಂಚಿಸಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಚಿನ್ನಾಭರಣ ರಿಕವರಿ ಮಾಡುವುದೇ ಪೊಲೀಸರಿಗೆ ತಲೆನೋವಾಗಿ ಪರಿಣಮಿಸಿದೆ.

ಕಳೆದ ಒಂದು ವಾರದ ಹಿಂದೆ ಪೊಲೀಸರು ಶ್ವೇತಾಗೌಡಳನ್ನು ಬಂಧಿಸಿ, ಕಸ್ಟಡಿಗೆ ಪಡೆದು ವಿಚಾರಣೆ ನಡೆಸಿದ್ದರು. ಈ ವೇಳೆ ಚಿನ್ನವನ್ನು ಬಗಲಗುಂಟೆಯ ರಾಮ್ ದೇವ್ ಜ್ಯುವೆಲ್ಲರಿಯಲ್ಲಿ ಪಡೆದಿರುವುದಾಗಿ ಹೇಳಿಕೆ ನೀಡಿದ್ದರು. ಇದರಿಂದಾಗಿ ಮಾಲೀಕ ಚನ್ನಾರಾಮ್ ಅವರನ್ನು ಕೂಡ ಬಂಧಿಸಲಾಗಿತ್ತು. ಮಾಲೀಕನನ್ನು ಬಂಧಿಸುತ್ತಿದ್ದಂತೆ ಆತನ ಸಹೋದರರು ಎಸ್ಕೇಪ್ ಆಗಿದ್ದಾರೆ. ಮಾಲೀಕನಿಂದ 400 ಗ್ರಾಂ ಚಿನ್ನವನ್ನು ರಿಕವರಿ ಮಾಡಲಾಗಿದೆ.

ಇಲ್ಲಿಯವರೆಗೂ ವರ್ತೂರ್ ಪ್ರಕಾಶ್ ಪಡೆದಿದ್ದ 100 ಗ್ರಾಂ ಸೇರಿ ಒಟ್ಟು 700 ಗ್ರಾಂ ಚಿನ್ನವನ್ನು ಮಾತ್ರ ರಿಕವರಿ ಮಾಡಲಾಗಿದೆ. ಸದ್ಯ ಚಿನ್ನಾಭರಣ ರಿಕವರಿಗಾಗಿ ಪೊಲೀಸರು ತನಿಖೆ ಮುಂದುವರೆಸಿದ್ದು,




ಮಾಲೀಕ ಚನ್ನಾರಾಮ್ ಸಹೋದರರಿಗಾಗಿ ಹುಡುಕಾಟ ನಡೆಸಿದ್ದಾರೆ. ರಾಮ್‌ದೇವ್ ಜ್ಯುವೆಲ್ಲರಿಯಲ್ಲಿ ಚಿನ್ನ ಕರಗಿಸಿ, ಚಿನ್ನದ ಗಟ್ಟಿ ಮಾರಾಟ ಮಾಡಿರುವುದಾಗಿ ಪೊಲೀಸರು ಶಂಕಿಸಿದ್ದಾರೆ.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಇದಕ್ಕೂ ಮುಂಚೆ ಭಾರತಿ ನಗರ ಪೊಲೀಸ್ ಠಾಣೆಗೆ ಹಾಜರಾಗಿದ್ದ ವರ್ತೂರು ಪ್ರಕಾಶ್, ಎಸಿಪಿ ಗೀತಾ ಎದುರು ವಿಚಾರಣೆ ಎದುರಿಸಿದ್ದರು. ಇದೇ ವೇಳೆ ಆರೋಪಿ ಶ್ವೇತಾ ಗೌಡ ಕೊಟ್ಟಿದ್ದ ಗಿಫ್ಟ್‌ಗಳನ್ನ ಅಂದ್ರೆ, ನಗದು, ಚಿನ್ನಾಭರಣ ಎಲ್ಲವನ್ನೂ ಪೊಲೀಸರಿಗೆ ವಾಪಸ್ ಕೊಟ್ಟಿದ್ದರು. ಒಟ್ಟು 12.50 ಲಕ್ಷ ರೂ. ನಗದು, ಮೂರು ಬ್ರಾಸ್ ಲೆಟ್, 1 ಚಿನ್ನದ ಉಂಗುರವನ್ನ ಎಸಿಪಿ ಗೀತಾ ಎದುರಿಗೇ ಪೊಲೀಸರಿಗೆ ಒಪ್ಪಿಸಿದ್ದರು.

ಶ್ವೇತಾ ಗೌಡ ಹೀಗೆ ಮಾಡ್ತಾಳೆಂದು ನನಗೆ ಗೊತ್ತಿಲ್ಲ, ನನಗೂ ಶ್ವೇತಗೌಡಳಿಗೂ ಯಾವುದೇ ಸಂಬಂಧವಿಲ್ಲ. ಗಿಫ್ಟ್ ಅಂತ ನನಗೆ ಆಕೆ ಕೆಲ ಒಡವೆ ನೀಡಿದ್ಲು ಎಂದು ಪೊಲೀಸರಿಗೆ ಜವಾಬು ನೀಡಿದ್ದರು. ವಿಚಾರಣೆ ಬಳಿಕ ಮಾತನಾಡಿದ್ದ ವರ್ತೂರ್ ಪ್ರಕಾಶ್, ನನಗೆ ಆಕೆ ಸ್ನೇಹಿತೆ ಅಲ್ಲ. ಐದಾರು ತಿಂಗಳ ಹಿಂದೆ ಪರಿಚಯ ಆಗಿದೆ. ನನ್ನ ಹೆಸರು ಬಳಸಿಕೊಂಡು ಚಿನ್ನಭಾರಣ ಖರೀದಿ ಮಾಡಿಕೊಂಡಿದ್ದಾಳೆ. ನನಗೂ ಮನಸ್ಸಿಗೆ ನೋವಾಗಿದೆ. ಚಿನ್ನದ ಅಂಗಡಿಯವರು 2 ಕೋಟಿ ರೂ. ಚಿನ್ನಭಾರಣ ಕೊಟ್ಟಿದ್ದರು. ಅದ್ಹೇಗೆ ಕೊಟ್ರು ಗೊತ್ತಿಲ್ಲ. ನನ್ನ ತರ ಕೆಲ ರಾಜಕಾರಣಿಗಳು ಹೆಸರು, ಫೋಟೋ ತೆಗೆದುಕೊಂಡು ವಂಚನೆ ಮಾಡಿದ್ದಾಳೆ. ಪೊಲೀಸರ ವಿಚಾರಣೆ ವೇಳೆ ಎಲ್ಲಾ ಮಾಹಿತಿ ಕೊಟ್ಟಿದ್ದೀನಿ ಎಂದು ಸ್ಪಷ್ಟಪಡಿಸಿದ್ದರು.

### ಬಿಡಿಎ ನಿವೇಶನದಾರರಿಗೆ ಶಾಕಿಂಗ್ ನ್ಯೂಸ್

# ನಿವೇಶನದಲ್ಲಿ ಮನೆ ನಿರ್ಮಾಣಕ್ಕಿದ್ದ ಅವಧಿ ಕಡಿತ



**ಬೆಂಗಳೂರು:** ಬಿಡಿಎ ನಿವೇಶನ ಹೊಂದಿರುವವರಿಗೆ ಶಾಕಿಂಗ್ ನ್ಯೂಸ್ ಸಿಕ್ಕಿದೆ. ನಿವೇಶನದಲ್ಲಿ ಮನೆ ನಿರ್ಮಾಣಕ್ಕೆ ಇದ್ದ ಅವಧಿಯನ್ನು ಕಡಿತ ಮಾಡಲಾಗಿದೆ.

ಹೌದು, ನಿವೇಶನದಲ್ಲಿ ಮನೆ ನಿರ್ಮಾಣಕ್ಕೆ ಇದ್ದ ಅವಧಿಯನ್ನ ಕಡಿತ ಮಾಡಲಾಗಿದೆ. ಐದು ವರ್ಷದ ಕಾಲಮಿತಿಯನ್ನು ಕಡಿತಗೊಳಿಸಿ 3 ವರ್ಷಕ್ಕೆ ಇಳಿಕೆ ಮಾಡಲಾಗಿದೆ. ಖಾಲಿ ನಿವೇಶನದಲ್ಲಿ ಮೂರು ವರ್ಷಗಳಲ್ಲಿ ಮನೆ ನಿರ್ಮಾಣ ಮಾಡದೇ ಇದ್ದರೆ ಪ್ರಸ್ತುತ ಮಾರುಕಟ್ಟೆ ದರದ ಅನ್ವಯ ಶೇ.10% ದಂಡ ವಿಧಿಸಲಾಗುತ್ತೆ.

ಸಾಲ ಮಾಡಿ ನಿವೇಶನ ಖರೀದಿ ಮಾಡಿರುತ್ತೇವೆ. ಇದರಿಂದ ಪ್ರತಿ ನಿವೇಶನದಾರರಿಗೆ ಲಕ್ಷ ಲಕ್ಷ ರೂ. ಆರ್ಥಿಕ ಹೊರೆಯಾಗುತ್ತೆ ಎಂದು ನಿಯಮದ ವಿರುದ್ಧ ಜನ ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ.

ಕಳೆದ ಸೆಪ್ಟೆಂಬರ್ ತಿಂಗಳ ಬೋರ್ಡ್ ಮೀಟಿಂಗ್ ನಲ್ಲಿ ಬಿಡಿಎ ಈ ನಿರ್ಣಯ ಮಾಡಲಾಗಿದೆ. ಇನ್ನು ಬಿಡಿಎಯ ಈ ನಿರ್ಧಾರಕ್ಕೆ ಖಾಲಿ ನಿವೇಶನ ಮಾಲೀಕರು ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ. ನಾವು ಖರೀದಿಸಿದ ನಿವೇಶನಕ್ಕೆ ನಮಗೆ ದಂಡ ವಿಧಿಸಿದ್ರೆ, ಹೇಗೆ ಎಂದು ಪ್ರಶ್ನೆ ಮಾಡುತ್ತಿದ್ದಾರೆ. ಬಿಡಿಎಯ ಈ ನಿರ್ಧಾರ ಅವೈಜ್ಞಾನಿಕ ಎಂದು ಆರೋಪಿಸುತ್ತಿದ್ದಾರೆ. ಸಾಲ ಮಾಡಿ ನಿವೇಶನ ಖರೀದಿ ಮಾಡಿದ ನಮಗೆ ನಿವೇಶನ ಉಳಿಸಿಕೊಂಡಿದ್ದೇ ತಪ್ಪು ಎನ್ನುವ ಸ್ಥಿತಿಗೆ ಬಿಡಿಎ ತಂದಿದೆ ಎಂದು ಆಕ್ರೋಶ ಹೊರಹಾಕಿದ್ದಾರೆ.

### ಬೆಂ.ರೈಲ್ವೆ ನಿಲ್ದಾಣಗಳಲ್ಲಿ ನಕಲಿ ಟಿಕೆಟ್!

# ಅಕ್ರಮ ತಡೆಗೆ ಕ್ಯೂಆರ್ ಕೋಡ್ ಟಿಕೆಟ್ ವಿತರಣೆ



**ಬೆಂಗಳೂರು:** ರೈಲ್ವೆ ನಿಲ್ದಾಣಗಳಲ್ಲಿ ನಕಲಿ ರೈಲ್ವೆ ಟಿಕೆಟ್ ಕಳ್ಳರ ಹಾವಳಿ ಹೆಚ್ಚಾಗಿದೆ. ಇದಕ್ಕೆ ಕಡಿವಾಣ ಹಾಕಲು ರೈಲ್ವೆ ಅಧಿಕಾರಿಗಳು ಮುಂದಾಗಿದ್ದು, ಕ್ಯೂಆರ್ ಕೋಡ್ ಟಿಕೆಟ್ ವಿತರಣೆಗೆ ಕ್ರಮಕೈಗೊಂಡಿದ್ದಾರೆ.

ಬೆಂಗಳೂರು ನಗರದಿಂದ ರಾಜ್ಯ, ಹೊರ ರಾಜ್ಯಗಳಿಗೆ ನಿತ್ಯ ರೈಲು ಮೂಲಕ ಲಕ್ಷಾಂತರ ಪ್ರಯಾಣಿಕರು ಪ್ರಯಾಣ ಮಾಡುತ್ತಿದ್ದಾರೆ. ಇತ್ತೀಚೆಗೆ ಕೆಲ ಪ್ರಯಾಣಿಕರು ಅನ್ ರಿಸರ್ವ್ಡ್, ಜನರಲ್ ಟಿಕೆಟ್‌ಗಳನ್ನ ನಕಲು ಮಾಡಿ ಪ್ರಯಾಣ ಮಾಡುತ್ತಿದ್ದಾರೆ. ಇದರಿಂದ ಎಚ್ಚೆತ್ತ ನೈರುತ್ಯ ರೈಲ್ವೆ ಬೆಂಗಳೂರು ವಿಭಾಗ, ಅಕ್ರಮ ತಡೆಯಲು ಕ್ಯೂಆರ್ ಕೋಡ್ ಟಿಕೆಟ್ ವಿತರಣೆಗೆ ಮುಂದಾಗಿದೆ.

ನೈರುತ್ಯ ರೈಲ್ವೆಯ ಬೆಂಗಳೂರು ವಿಭಾಗದ ಮೆಜೆಸ್ಟಿಕ್‌ನ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ರೈಲು ನಿಲ್ದಾಣದಲ್ಲಿ ಥರ್ಮಲ್ ಪ್ರಿಂಟರ್‌ಗಳನ್ನು ಪರಿಚಯಿಸಲಾಗಿದೆ. ನಿಲ್ದಾಣದ ಮುಖ್ಯದ್ವಾರದ ಎರಡು ಕೌಂಟರ್‌ಗಳನ್ನು ತೆರೆಯಲಾಗಿದೆ. ಕೇವಲ ಎರಡೇ ಸೆಕೆಂಡ್‌ನಲ್ಲಿ ಟಿಕೆಟ್ ಪ್ರಿಂಟಿಂಗ್ ಆಗುತ್ತೆ. ಇದರಿಂದ ಕ್ಯೂ ತಪ್ಪಿಸಿ, ಸಮಯ ಉಳಿಸಬಹುದು. ಮೆಜೆಸ್ಟಿಕ್, ಎಸ್‌ಎಂವಿಟಿ ಸ್ಟೇಷನ್, ಯಶವಂತಪುರ, ಕೆಆರ್ ಪುರಂನಲ್ಲಿ ಈ ಥರ್ಮಲ್ ಪ್ರಿಂಟಿಂಗ್ ಟಿಕೆಟ್ ವ್ಯವಸ್ಥೆಯನ್ನ ಮಾಡಲಾಗಿದೆ. ಈ ಟಿಕೆಟ್ ಅಸಲಿಯೋ, ನಕಲಿಯೋ ಎಂಬುದನ್ನು ಪತ್ತೆ ಹಚ್ಚಲು ರೈಲ್ವೆ ಟಿಟಿಗಳಿಗೆ ಪ್ರತ್ಯೇಕ ಆಪ್‌ನ ವ್ಯವಸ್ಥೆ ಮಾಡಲಾಗಿದೆ.

ಥರ್ಮಲ್ ಪ್ರಿಂಟರ್ ಮೂಲಕ ನೀಡಿದ ಮುದ್ರಿತ ಟಿಕೆಟ್‌ಗಳನ್ನು ನಕಲು ಮಾಡುವುದು ಅಸಾಧ್ಯ. ಸಾಮಾನ್ಯ ಪ್ರಿಂಟರ್‌ಗಳಲ್ಲಿ 20 ಸೆಕೆಂಡ್‌ಗೆ ಒಂದು ಟಿಕೆಟ್ ನೀಡಿದರೆ, ಥರ್ಮಲ್ ಪ್ರಿಂಟರ್‌ನಲ್ಲಿ ಎರಡರಿಂದ 3 ಸೆಕೆಂಡ್‌ಗೆ ಒಂದು ಟಿಕೆಟ್ ನೀಡಲಾಗುತ್ತದೆ.

### ಖರ್ಗೆಗೆ ಕಾಂಗ್ರೆಸ್ ಪದೇ ಪದೇ

# ಅಪಮಾನ ಮಾಡ್ತಿದೆ

**ಬೆಂಗಳೂರು:** ದಲಿತ ನಾಯಕ ಮಲ್ಲಿಕಾರ್ಜುನ ಖರ್ಗೆಯವರಿಗೆ ಕಾಂಗ್ರೆಸ್ ನಾಯಕರು ಪದೇ ಪದೇ ಅಪಮಾನ ಮಾಡ್ತಿದ್ದಾರೆ ಎಂದು ವಿಧಾನ ಪರಿಷತ್ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಕಾಂಗ್ರೆಸ್ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ.



ಬಿಜೆಪಿ ಕಚೇರಿಯಲ್ಲಿ ಸುದ್ದಿಗಾರರೊಂದಿಗೆ ಅವರು ಮಾತನಾಡಿದರು. ಈ ವೇಳೆ, ಕಾಂಗ್ರೆಸ್ ದಲಿತರ ವಿರೋಧಿ. ವಯನಾಡ್‌ನಲ್ಲಿ ಪ್ರಿಯಾಂಕ್ ವಾದ್ರಾ ನಾಮಪತ್ರ ಸಲ್ಲಿಕೆ ವೇಳೆ ಮಲ್ಲಿಕಾರ್ಜುನ ಖರ್ಗೆಯವರನ್ನ ಬಾಗಿಲ ಬಳಿ ನಿಲ್ಲಿಸಿದ್ದರು. ಮೊನ್ನೆ ಬೆಳಗಾವಿಯಲ್ಲಿ ನಡೆಯೋ ಎಐಸಿಸಿ ಅಧಿವೇಶನಕ್ಕೆ ರಾಹುಲ್ ಗಾಂಧಿ ಬಂದ ಸಮಯದಲ್ಲಿ ಡಿ.ಕೆ ಶಿವಕುಮಾರ್ ಅವರು ಮಲ್ಲಿಕಾರ್ಜುನ ಖರ್ಗೆ ಅವರನ್ನ ತಳ್ಳೋ ಕೆಲಸ ಮಾಡಿದ್ದಾರೆ. ಇದನ್ನು ನೋಡಿದ್ರೆ ಕಾಂಗ್ರೆಸ್ ದಲಿತ ವಿರೋಧಿಗಳು ಎಂದು ಗೊತ್ತಾಗುತ್ತದೆ. ಖರ್ಗೆ ಅವರನ್ನು ಕಾಂಗ್ರೆಸ್ ಸಿಎಂ ಮಾಡಲಿಲ್ಲ. ಯಾಕೆ ಮಾಡಲಿಲ್ಲ? ದಲಿತರನ್ನ ಅಪಮಾನ ಮಾಡೋದು ಕಾಂಗ್ರೆಸ್ ಗುಣ ಎಂದು ಕಿಡಿಕಾರಿದ್ದಾರೆ.

ಕೇಂದ್ರ ಗೃಹ ಸಚಿವ ಅಮಿತ್ ಶಾ ವಿರುದ್ಧ ಕಾಂಗ್ರೆಸ್ ಪ್ರತಿಭಟನೆ ವಿಚಾರವಾಗಿ, ಕಾಂಗ್ರೆಸ್ ಅಂಬೇಡ್ಕರ್‌ಗೆ ಗೌರವ ಕೊಡೋ ಕೆಲಸ ಮಾಡಿಲ್ಲ. ಜಗಜೀವನರಾಮ್ ಸೇರಿ ಎಲ್ಲಾ ನಾಯಕರಿಗೆ ಅಪಮಾನ ಮಾಡಿದ್ದಾರೆ. ಕೆಲವು ದಲಿತ ಸಂಘಟನೆಗಳು ಅಮಿತ್ ಶಾ ವಿರುದ್ಧ ಪ್ರತಿಭಟನೆ ಮಾಡ್ತಿದ್ದಾರೆ. ಅಮಿತ್ ಶಾ ಎಲ್ಲೂ ಕೂಡಾ ಅಂಬೇಡ್ಕರ್‌ಗೆ ಅಪಮಾನ ಮಾಡಿಲ್ಲ. ಅಪಮಾನ ಮಾಡಿದ್ದು ಕಾಂಗ್ರೆಸ್, ಇದನ್ನ ಅಮಿತ್ ಶಾ ಹೇಳಿದ್ದಕ್ಕೆ ಅವರ ವಿರುದ್ಧ ಹೇಳಿಕೆ ತಿರುಚಿ ಆರೋಪ ಮಾಡ್ತಿದ್ದಾರೆ. ಹೀಗಿದ್ದರೂ ಯಾಕೆ ನಮ್ಮ ಬಂಧುಗಳು ಪ್ರತಿಭಟನೆ ಮಾಡ್ತಿದ್ದಾರೆ ಎಂಬುದು ಗೊತ್ತಿಲ್ಲ ಎಂದು ಅಸಮಾಧಾನ ಹೊರ ಹಾಕಿದ್ದಾರೆ.

ದಲಿತ ಸಂಘಟನೆಗಳು ಅರ್ಥ ಮಾಡಿಕೊಳ್ಳಬೇಕು. ಕಾಂಗ್ರೆಸ್ ಪಾಪದ ಕೊಡ ತುಂಬಿದೆ. ಕಾಂಗ್ರೆಸ್‌ನ ಎಲ್ಲಾ ಸಂಭ್ರಮದ ದಿನಗಳು ಸಂತಾಪದ ದಿನಗಳು ಆಗಲಿವೆ. ಅರ್ಥ ಮಾಡಿಕೊಳ್ಳಿ, ಅಂಬೇಡ್ಕರ್‌ಗೆ ಬಿಜೆಪಿ ಅಪಮಾನ ಮಾಡಿಲ್ಲ. ಮೀಸಲಾತಿ ಜಾಸ್ತಿ ಮಾಡಿದ್ದು ಬಿಜೆಪಿ. ಇದನ್ನು ದಲಿತ ಬಂಧುಗಳು ಅರ್ಥ ಮಾಡಿಕೊಳ್ಳಬೇಕು ಎಂದು ಕಾಂಗ್ರೆಸ್ ಮತ್ತು ಕೆಲವು ದಲಿತ ಸಂಘಟನೆಗಳ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ.

### ಗುತ್ತಿಗೆದಾರ ಸಚಿನ್ ಆತ್ಮಹತ್ಯೆ ಕೇಸ್

# ಪ್ರಿಯಾಂಕ್ ಖರ್ಗೆ ಆಪ್ತ ರಾಜು ಕಪನೂರ್ ಸೇರಿ 6 ಮಂದಿ ವಿರುದ್ಧ ಎಫ್‌ಐಆರ್

**ಕಲಬುರಗಿ:** ಬೀದರ್‌ನ ಯುವ ಗುತ್ತಿಗೆದಾರ ಸಚಿನ್ ಪಾಂಚಾಳ ಆತ್ಮಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಸಚಿವ ಪ್ರಿಯಾಂಕ್ ಖರ್ಗೆ ಆಪ್ತ ರಾಜು ಕಪನೂರ್ ಸೇರಿದಂತೆ 6 ಜನರ ವಿರುದ್ಧ ಎಫ್‌ಐಆರ್ ದಾಖಲಾಗಿದೆ.




ಪ್ರಕರಣ ಸಂಬಂಧ ಕಲಬುರಗಿಯ ಸ್ಟೇಷನ್ ಬಜಾರ್ ಪೊಲೀಸರು ನ್ಯಾಯಾಲಯದ ಗಮನಕ್ಕೆ ತಂದು ಎಫ್‌ಐಆರ್ ದಾಖಲಿಸಿದ್ದಾರೆ. ಬಿಎನ್‌ಎಸ್ 351(2) ಅಡಿಯಲ್ಲಿ ಎಫ್‌ಐಆರ್ ದಾಖಲಾಗಿದೆ. ಅಲ್ಲದೇ ಎಫ್ ಐಆರ್ ಪ್ರತಿಯನ್ನು ಡಿಸಿಪಿ ಕನ್ನಿಕಾ ಸಿಕ್ರಿವಾಲ್ ಅವರು ಪ್ರತಿಭಟನಾ ನಿರತ ಬಿಜೆಪಿ ನಾಯಕರಿಗೆ ನೀಡಿದ್ದಾರೆ.

ಗುತ್ತಿಗೆದಾರ ಸಚಿನ್ ಆತ್ಮಹತ್ಯೆಗೂ ಮುನ್ನ ಬರೆದ ಡೆತ್ ನೋಟ್ ರಾಜ್ಯ ರಾಜಕೀಯದಲ್ಲಿ ಕಿಚ್ಚು ಹಚ್ಚಿದೆ. ಬಿಜೆಪಿ ಶಾಸಕ ಮತ್ತಿಮೂಡ್ ಸೇರಿ ಹಲವರ ಕೊಲೆಗೆ ರಾಜು ಕಪನೂರ್ ಸಂಚು ರೂಪಿಸಿರುವುದು ಇದೀಗ ಬಯಲಾಗಿದೆ. ಹೀಗಾಗಿ ಈ ಪ್ರಕರಣವನ್ನು ಸಿಬಿಐಗೆ ವಹಿಸಲು ಬಿಜೆಪಿ ಹೋರಾಟಕ್ಕೆ ಮುಂದಾಗಿದೆ.

ಗುತ್ತಿಗೆದಾರ ಸಚಿನ್ ಪಾಂಚಾಳ ಆತ್ಮಹತ್ಯೆಗೂ ಮುನ್ನ ಡೆತ್‌ನೋಟ್‌ನಲ್ಲಿ ನನ್ನ ಸಾವಿಗೆ ಕಾಂಗ್ರೆಸ್ ಮುಖಂಡ ರಾಜು ಕಪನೂರ್ ಮತ್ತು ಗ್ಯಾಂಗ್ ಕಾರಣ ಎಂದು ಉಲ್ಲೇಖಿಸಲಾಗಿದೆ. ಅಲ್ಲದೇ ಬಿಜೆಪಿ ಶಾಸಕ ಬಸವರಾಜ್ ಮತ್ತಿಮೂಡ್, ಆಂದೋಲಾ ಶ್ರೀ, ಕಲಬುರಗಿ ನಗರ ಘಟಕದ ಅಧ್ಯಕ್ಷ ಚಂದು ಪಾಟೀಲ್ ಹಾಗೂ ಚಿತ್ತಾಪುರ ಬಿಜೆಪಿ ಪರಾಜಿತ ಅಭ್ಯರ್ಥಿ ಮಣಿಕಂಠ್ ರಾಠೋಡ್ ಹತ್ಯೆಗೆ ಸುಪಾರಿ ನೀಡಿರುವದರ ಬಗ್ಗೆ ಡೆತ್‌ನೋಟ್‌ನಲ್ಲಿ ಉಲ್ಲೇಖಿಸಲಾಗಿದೆ.

## ದೇವಾಲಯ ಆಯ್ಕೆ

ದೆಹಲಿಯಲ್ಲಿ ಕರ್ತವ್ಯಪಥದಲ್ಲಿ ನಡೆಯುವ ಪರೇಡ್‌ನಲ್ಲಿ ಪಾಲ್ಗೊಳ್ಳುವ ಬ್ರಹ್ಮ ಜಿನಾಲಯ ದೇವಾಲಯ ಲಕ್ಕುಂಡಿಯ ಶಿಲ್ಪಕಲಾ ವೈಭವವನ್ನು ಮತ್ತೆ ನೆನಪಿಸುತ್ತದೆ.

ಲಕ್ಕುಂಡಿ ದೇವಾಲಯಗಳ ಶಿಲ್ಪಕಲೆಯು ಅಭೂತಪೂರ್ವ ಇತಿಹಾಸವನ್ನು ಹೊಂದಿದ್ದು, ಕಲಾಸಕ್ತರ ಕಣ್ಮನ ಸೆಳೆಯುತ್ತಿದೆ. ಲಕ್ಕುಂಡಿಯ ಬ್ರಹ್ಮ ಜಿನಾಲಯ ದೇವಸ್ಥಾನ ಗಣರಾಜ್ಯೋತ್ಸವ ಪರೇಡ್‌ಗೆ ಆಯ್ಕೆಯಾದ ವಿಚಾರ ಕೇಳಿ ಬಹಳ ಸಂತೋಷವಾಗಿದೆ ಎಂದ ಪ್ರವಾಸಿಗರಾದ ಛಾಯಾ, ಶೃತಿ ಸಂತಸ ವ್ಯಕ್ತಪಡಿಸಿದರು.

**ಲಕ್ಕುಂಡಿ ದೇವಾಲಯ ಇತಿಹಾಸ:** ಮಹಾವೀರನ ದೇವಾಲಯಗಳಲ್ಲಿ ಜಿನಾಲಯವು ಒಂದಾಗಿದೆ. ಬ್ರಹ್ಮ ಜಿನಾಲಯ ದೇವಸ್ಥಾನಕ್ಕೆ ಗ್ರೇಟ್ ಜೈನ್ ದೇವಾಲಯ ಎಂದೂ ಕರೆಯುತ್ತಾರೆ. ಈ ದೇವಾಲಯವು 11ನೇ ಶತಮಾನಕ್ಕೆ ಸೇರಿದ ದೇವಾಲಯವಾಗಿದೆ. ಪಶ್ಚಿಮ ಚಾಲುಕ್ಯರ ಶೈಲಿಯ ಕೆತ್ತನೆಯಿಂದ ಕೂಡಿರುವ ಬ್ರಹ್ಮ ಜಿನಾಲಯವನ್ನು ಕ್ರಿ.ಶ.1007 ರಲ್ಲಿ ದಂಡನಾಯಕ ನಾಗದೇವನ ಪತ್ನಿ ದಾನ ಚಿಂತಾಮಣಿ ಎಂದೇ ಪ್ರಖ್ಯಾತಳಾದ ಅತ್ತಿಮಬ್ಬೆ ಕಟ್ಟಿಸಿದಳು ಎಂದು ಇತಿಹಾಸದಲ್ಲಿ ಉಲ್ಲೇಖವಾಗಿದೆ.

ಈ ದೇವಾಲಯ ಶಿವ ದೇವಾಲಯದ ರೀತಿ ಪೂರ್ವಕ್ಕೆ ಮುಖ ಮಾಡಿ ಸ್ಥಾಪನೆಯಾಗಿದೆ. ಅಂತರಾಳ, ಗೂಢಮಂಟಪ, ಅಗ್ರಮಂಟಪ, ತಲವಿನ್ಯಾಸ, ಕಪ್ಪು ಶಿಲೆ ಹೊಂದಿದೆ. ಚೌಕಾಕಾರದ ಗರ್ಭಗೃಹದ ಮಧ್ಯದಲ್ಲಿ, 22ನೇಯ ನೇಮಿನಾಥ ತೀರ್ಥಂಕರ ಮೂರ್ತಿಯಿದೆ. ಗರ್ಭಗುಡಿಯ ಹೊರಭಾಗದಲ್ಲಿ, ಚತುರ್ಮುಖ ಬ್ರಹ್ಮ ಮತ್ತು ಸರಸ್ವತಿ ಮೂರ್ತಿಗಳಿವೆ. 32 ವಿವಿಧ ಆಕೃತಿಯ ಸುಂದರ ಕೆತ್ತನೆಯ ಕಂಬಗಳಿರುವ ವಿಶೇಷ ದೇವಾಲಯವಾಗಿದೆ.

**ಲಕ್ಕುಂಡಿಯ ಬ್ರಹ್ಮ ಜಿನಾಲಯ ದೇವಸ್ಥಾನ:** ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆವತಿಯಿಂದ ಟ್ಯಾಬ್ಲೋ ನಿರ್ಮಾಣ ಕಾರ್ಯ ದೆಹಲಿಯಲ್ಲಿ ನಡೆಯುತ್ತಿದೆ. ನುರಿತ ಕಲಾವಿದರು ಫೈಬರ್ ನಿಂದ ಬ್ರಹ್ಮ ಜಿನಾಲಯ ದೇವಸ್ಥಾನದ ಸ್ತಬ್ಧಚಿತ್ರ ನಿರ್ಮಾಣ ಕಾರ್ಯ ಮಾಡುತ್ತಿದ್ದಾರೆ. ಲಕ್ಕುಂಡಿ ಗ್ರಾಮದ ಐತಿಹಾಸಿಕ ದೇವಸ್ಥಾನ ಆಯ್ಕೆಯಾಗಿದ್ದು ಬಹಳ ಸಂತಸ ತಂದಿದೆ ಅಂತ ಲಕ್ಕುಂಡಿ ಅಭಿವೃದ್ಧಿ ಪ್ರಾಧಿಕಾರದ ಆಯುಕ್ತ ಶರಣು ಗೋಗೇರಿ ಟಿವಿ9ಗೆ ತಿಳಿಸಿದ್ದಾರೆ.

ಇಡೀ ರಾಜ್ಯಾದ್ಯಂತ 12 ಪ್ರಖ್ಯಾತ ಸ್ಥಳಗಳು ಹಾಗೂ ದೇವಸ್ಥಾನಗಳನ್ನು ಆಯ್ಕೆಗೆ ಕಳಿಸಲಾಗಿತ್ತು. ಆದರೆ, ಲಕ್ಕುಂಡಿ ಗ್ರಾಮದ ಐತಿಹಾಸಿಕ ಬ್ರಹ್ಮ ಜಿನಾಲಯ ದೇವಸ್ಥಾನ ಆಯ್ಕೆಯಾಗಿದ್ದು, ಜಿಲ್ಲೆಗೆ ಜನರಿಗೆ ಹೆಮ್ಮೆ ತಂದಿದೆ. ಕಳೆದ ಎರಡು ವರ್ಷಗಳಿಂದ ರಾಜ್ಯದ ಯಾವುದೇ ಟ್ಯಾಬ್ಲೋ ಆಯ್ಕೆಯಾಗಿರಲ್ಲಿಲ್ಲ. ಈಗ ಲಕ್ಕುಂಡಿ ಬ್ರಹ್ಮ ಜಿನಾಲಯ ದೇವಸ್ಥಾನ ಆಯ್ಕೆಯಾಗಿದ್ದು, ಗದಗ ಜಿಲ್ಲೆಯ ಹಿರಿಮೆ ಹಾಗೂ ರಾಜ್ಯದ ಘನತೆ ಹೆಚ್ಚಿಸಿದೆ.

## ದೂರು ದಾಖಲು!

ಹಿಡಿದಿದ್ದ. ಇನ್ನು ಈ ಪೋಟೋ ತೋರಿಸಿ ಮಹಿಳೆಯನ್ನ ಬೆದರಿಸಿ ಹಣ ಪಡೆಯುತ್ತಿದ್ದ ಎಂದು ಮಹಿಳೆ ಆರೋಪ ಮಾಡಿದ್ದಾರೆ.

**ಮೊಬೈಲ್, ಕಾರು, ಚಿನ್ನದ ಕಿತ್ತುಕೊಂಡು ಪರಾರಿ:** ಆತ ರೌಡಿಶೀಟರ್ ಎಂದು ಗೊತ್ತಾಗಿ ಮಹಿಳೆ ಸೂರಿಯಿಂದ ದೂರವಾಗಿದ್ದಾರೆ. ನವೆಂಬರ್ 30ರಂದು ವಾಲ್ಮೀಕಿ ಸರ್ಕಲ್ ಬಳಿ ಮನೆಗೆ ಹೋಗುತ್ತಿದ್ದಾಗ ಅಡ್ಡ ಹಾಕಿದ್ದ ಸೂರಿ, ಹಣವಿಲ್ಲ ಎಂದಿದ್ದಕ್ಕೆ ಚಾಕು ತೋರಿಸಿ ಬೆದರಿಕೆ ಹಾಕಿದ್ದಾನೆ. ಅಲ್ಲದೆ ಮೊಬೈಲ್, ಕಾರು ಹಾಗೂ 18 ಗ್ರಾಂ ಚಿನ್ನದ ಓಲೆ ಕಿತ್ತುಕೊಂಡು ಪರಾರಿ ಆಗಿದ್ದ ಎಂದು ಮಹಿಳೆ ದೂರಿದ್ದಾರೆ.

ಹಣ ಕೊಡದೆ ಇದ್ರೆ, ಮಾನ ಹರಾಜು ಹಾಕುವುದಾಗಿ ಬೆದರಿಕೆ ಹಾಕಿದ್ದಾನೆ. ಖಾಸಗಿ ಫೋಟೋಗಳನ್ನು ಅಪರಿಚಿತ ನಂಬರ್‌ಗಳಿಗೆ ಕಳುಹಿಸಿದ್ದ ಎಂದು ಮಹಿಳೆ ಆರೋಪಿಸಿದ್ದಾರೆ. ರೌಡಿಶೀಟರ್ ಸೂರಿ ವಿರುದ್ಧ ಬ್ಲಾಕ್‌ಮೇಲ್, ಬೆದರಿಕೆ ಬಗ್ಗೆ ದೂರು ನೀಡಿದ್ದಾರೆ. ಸದ್ಯ ಬ್ಯಾಡರಹಳ್ಳಿ

**ಮೊದಲನೇ ಪುಟದಿಂದ...**

ಠಾಣೆಯಲ್ಲಿ ಸುರೇಶ್ ಅಲಿಯಾಸ್ ಕುಣಿಗಲ್ ಸೂರಿ ವಿರುದ್ಧ ಪ್ರಕರಣ ದಾಖಲಗಿದೆ. ತುಮಕೂರು ಜೈಲಿನಲ್ಲಿರುವ ಕುಣಿಗಲ್ ಸೂರಿಯನ್ನು ಬಾಡಿ ವಾರೆಂಟ್ ಮೇಲೆ ಕಸ್ಟಡಿಗೆ ಪಡೆಯಲು ಪೊಲೀಸರ ಸಿದ್ದತೆ ನಡೆಸಿದ್ದಾರೆ ಎಂದು ತಿಳಿದುಬಂದಿದೆ.

## ವಿಮಾನ ಪತನ

ಲ್ಯಾಂಡಿಂಗ್ ಸಮಯದಲ್ಲಿ ಅಪಘಾತ ಸಂಭವಿಸಿದೆ.ಮುವಾನ್ ವಿಮಾನ ನಿಲ್ದಾಣ ನೀಡಿರುವ ಮಾಹಿತಿಯಲ್ಲಿ ಬೆಂಕಿ ನಂದಿಸುವ ಕಾರ್ಯ ಪೂರ್ಣಗೊಂಡಿದೆ.ಈ ಅವಘಡದಲ್ಲಿ ಗಾಯಗೊಂಡಿರುವ ಕೆಲವರ ಸ್ಥಿತಿ ಚಿಂತಾಜನಕವಾಗಿದೆ ಎಂದು ಅಗ್ನಿಶಾಮಕ ದಳದ ಸಿಬ್ಬಂದಿ ಮಾಹಿತಿ ನೀಡಿದ್ದಾರೆ.

## ಯುವಕರ ಫೈಟಿಂಗ್!

ಸದ್ಯ ಚಾಕುವಿನಿಂದ ಮಾರಣಾಂತಿಕ ದಾಳಿಯಿಂದಾಗಿ ಸದ್ಯ ತೀವ್ರ ಗಾಯಗೊಂಡಿರೋ ಆನಂದ ಬಿಮ್ಸ್ ಆಸ್ಪತ್ರೆಗೆ ದಾಖಲಾಗಿ ಚಿಕಿತ್ಸೆ ಪಡೆಯುತ್ತಿದ್ದಾತರರ. ಇನ್ನು ಗೋಕಾಕ್ ಪೊಲೀಸರು ಬಿಮ್ಸ್ ಆಸ್ಪತ್ರೆಗೆ ಭೇಟಿ ನೀಡಿ ಮಾಹಿತಿ ಸಂಗ್ರಹಿಸಿದ್ದು, ತನಿಖೆ ಮುಂದುವರಿಸಿದ್ದಾರೆ.

## ಗಂಭೀರ ಆರೋಪ

ರಾಜು ಕಪನೂರು ಕಿರುಕುಳವೇ ಕಾರಣ. ಸಿಬಿಐ ತನಿಖೆ ಆಗಿ ನ್ಯಾಯ ಸಿಗುವರೆಗೂ ಹೋರಾಟ ಮಾಡ್ತೇವೆ ಎಂದು ಬೀದರ್‌ನಲ್ಲಿ ಕಲಬುರಗಿ ಗ್ರಾಮೀಣ ಶಾಸಕ ಬಸವರಾಜ್ ಮತ್ತಿಮೂಡ್ ಆರೋಪಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಪ್ರಿಯಾಂಕ್ ಖರ್ಗೆ, ಬೀದರ್ ನಲ್ಲಾದ ಘಟನೆಯಲ್ಲಿ ಆತ್ಮಹತ್ಯೆ ಮಾಡ್ಕೊಂಡಿರೋ ಯುವಕನ ಆತ್ಮಕ್ಕೆ ಶಾಂತಿ ಸಿಗಲಿ. ಈ ರೀತಿ ಘಟನೆ ಆಗಬಾರದಿತ್ತು, ಅವರ ಕುಟುಂಬಕ್ಕೆ ದುಃಖ ಭರಿಸೋ ಶಕ್ತಿ ಸಿಗಲಿ. ವಿರೋಧ ಪಕ್ಷ ಈಗಾಗಲೇ ಹೇಳಿದೆ, ಕಲ್ಬುರ್ಗಿ ಒಂದು ರಿಪಬ್ಲಿಕ್ ಆಗಿದೆ ಅಂತಾ. ಹೌದು, ಕಲಬುರಗಿ ರಿಪಬ್ಲಿಕ್ ಆಗಿರೋದು ಹೌದು ಆದರೆ ಬಳ್ಳಾರಿ ರೀತಿಯಲ್ಲ, ಅಭಿವೃದ್ಧಿಯ ರಿಪಬ್ಲಿಕ್ ಆಗಿದೆ ಕಲಬುರಗಿ ಎಂದು ಟಾಂಗ್ ನೀಡಿದರು.

ಬಿಜೆಪಿ ಹೈಕಮಾಂಡ್‌ಗೆ ಸಲಹೆ ಕೊಡ್ತೇನೆ, ನಮ್ಮ ಬಗ್ಗೆ ಮಾತಾಡೋ ಮೊದಲು, ಕಲಬುರಗಿಯ ನಿಮ್ಮ ನಾಯಕರ ಬಗ್ಗೆ ತಿಳಿದುಕೊಳ್ಳಿ. ಅವರು ಏನ್ ಮಾಡ್ತಾರೆ ಅನ್ನೋದು ಕೇಳಿ. ಕಲಬುರಗಿಯಲ್ಲಿ ಐಪಿಎಲ್ ಬಟ್ಟಿಂಗ್ ಸ್ಯಾಂಡ್ ಮಾಫಿಯಾ ಮಾಡ್ತಿರೋದು ಯಾರು ಕೇಳಿ? ಪರಿತರ ಅಕ್ಕಿ, ಹಾಲಿನ ಪೌಡರ್ ಪ್ರಕರಣ ಯಾರ ಮೇಲೆ ದಾಖಲಾಗಿದೆ ಅವರು ಯಾರ ಪಕ್ಷದವರು? ಕಳೆದ ಕೆಲ ತಿಂಗಳ ಹಿಂದೆ ಬೇಲ್ ಮೇಲೆ ಆಚೆ ಬಂದವರು ಯಾರು ತಿಳಿದುಕೊಳ್ಳಿ ಎಂದು ಕಿಡಿಕಾರಿದರು.

## ಬಾವಿಗೆ ಬಿದ್ದ ಬಾಲಕ

ಚೇತನಾ ಎಂಬ ಮಗು ಆರಂಭದಲ್ಲಿ 15 ಅಡಿ ಆಳದಲ್ಲಿ ಸಿಲುಕಿಕೊಂಡಿದ್ದಳು ಆದರೆ ನಂತರ ಮತ್ತಷ್ಟು ಕೆಳಗೆ ಜಾರಿದ್ದಳು.

ರಕ್ಷಣಾ ತಂಡವು ಪೈಪ್ ಮೂಲಕ ಆಕೆಗೆ ಆಮ್ಲಜನಕವನ್ನು ಒದಗಿಸಿತು ಮತ್ತು ಆಕೆಯ ಸ್ಥಿತಿಯನ್ನು ಮೇಲ್ವಿಚಾರಣೆ ಮಾಡಲು ಕ್ಯಾಮರಾವನ್ನು ಅಳವಡಿಸಿದ್ದಾರೆ. ಚೇತನಾಳ ಅಕ್ಕ ಕಾವ್ಯಾ, ತಂಗಿ ಬಿದ್ದಿದ್ದನ್ನು ನೋಡಿ ತಕ್ಷಣವೇ ಪೋಷಕರಿಗೆ ವಿಚಾರ ತಿಳಿಸಿದ್ದಾಳೆ. ಕೂಡಲೇ ಕುಟುಂಬದವರು ಪೊಲೀಸರಿಗೆ ಮಾಹಿತಿ ನೀಡಿದ್ದರು.

ಸ್ಥಳೀಯ ಆಡಳಿತದೊಂದಿಗೆ ಘಟನಾ ಸ್ಥಳಕ್ಕೆ ಆಗಮಿಸಿದ ಪೊಲೀಸರು ರಕ್ಷಣಾ ಕಾರ್ಯಾಚರಣೆ ಆರಂಭಿಸಿದ್ದಾರೆ. ಜೆಸಿಬಿ ಯಂತ್ರದ ಸಹಾಯದಿಂದ ಬೋರ್‌ವೆಲ್ ಬಳಿ ಅಗೆಯುವ ಕಾರ್ಯ ಆರಂಭವಾಗಿದೆ. ಸಿಕ್ಕಿಬಿದ್ದ ಮಗುವಿಗೆ ಆಹಾರ ಪೂರೈಸುವ ಪ್ರಯತ್ನವೂ ನಡೆಯುತ್ತಿದೆ. ಘಟನೆ ವೇಳೆ ಕುಟುಂಬದ ಸದಸ್ಯರು ಮನೆಯೊಳಗಿದ್ದರು. ಬಳಿಕ ಬಾಲಕಿಯನ್ನು ರಕ್ಷಿಸಲಾಯಿತಾದರೂ ಬದುಕುಳಿಯಲಿಲ್ಲ.

## ಸುಟ್ಟ ಗಂಡ

ಈ ವಿಚಾರವಾಗಿ ಪದೇ ಪದೇ ಜಗಳವಾಡುತ್ತಿದ್ದ ಎಂದು ತಿಳಿಸಿದ್ದಾರೆ.

ಹಾಗೆಯೇ ಮಗು ವಿಚಾರವಾಗಿ ಮತ್ತೆ ಜಗಳವಾಗಿತ್ತು, ಆಕೆಯ ಮೇಲೆ ಪೆಟ್ರೋಲ್ ಸುರಿದು ಬೆಂಕಿ ಹಚ್ಚಿದ್ದು, ಆಕೆ ಅರಚುತ್ತಾ ಮನೆಯಿಂದ ಓಡಿ ಹೋಗಿದ್ದಾಳೆ. ಜನರು ಬೆಂಕಿಯನ್ನು ನಂದಿಸಲು ಪ್ರಯತ್ನಿಸಿದರು. ಆದರೆ ಆಕೆ ಅಷ್ಟರಲ್ಲೇ ಸುಟ್ಟುಹೋಗಿದ್ದಳು, ಆಸ್ಪತ್ರೆಗೆ ಸಾಗಿಸುವಾಗ ಮಾರ್ಗಮಧ್ಯೆ ಸಾವನ್ನಪ್ಪಿದ್ದಾಳೆ. ಕೊಲೆ ಆರೋಪಿ ಕಾಳೆಯನ್ನು ಬಂಧಿಸಲಾಗಿದೆ ಎಂದು ಗಂಗಾಖೇಡ್ ಪೊಲೀಸ್ ಠಾಣೆಯ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಈ ವೇಳೆ ದೂರಿನ ಆಧಾರದ ಮೇಲೆ ಪೊಲೀಸರು ಕುಂಡ್ಲಿಕ್ ಕಾಳೆ ವಿರುದ್ಧ ಕೊಲೆ ಪ್ರಕರಣ ದಾಖಲಿಸಿಕೊಂಡು ಬಂಧಿಸಿದ್ದಾರೆ. ಆರೋಪಿಯನ್ನು ಪೊಲೀಸರು ವಿಚಾರಣೆ ನಡೆಸುತ್ತಿದ್ದಾರೆ. ತನಿಖೆ ಪೂರ್ಣಗೊಳ್ಳುವವರೆಗೂ ಈ ಬಗ್ಗೆ ಯಾವುದೇ ಹೇಳಿಕೆ ನೀಡಲು ಪೊಲೀಸರು ಸಿದ್ದರಿಲ್ಲ.

ಘಟನೆಯ ಬಳಿಕ ಸ್ಥಳದಲ್ಲಿ ಆಕ್ರೋಶದ ವಾತಾವರಣ ನಿರ್ಮಾಣವಾಗಿದೆ. ಹೆಣ್ಣು ಮಕ್ಕಳ ಬಗ್ಗೆ ಸಮಾಜ ತನ್ನ ಆಲೋಚನೆಯನ್ನು ಬದಲಾಯಿಸಿಕೊಳ್ಳಬೇಕು ಎಂಬುದನ್ನು ಈ ಘಟನೆ ಮತ್ತೊಮ್ಮೆ ಸಾಬೀತುಪಡಿಸಿದೆ ಎಂದು ಜನರು ಹೇಳುತ್ತಾರೆ. ಕಾನೂನನ್ನು ಇನ್ನಷ್ಟು ಕಟ್ಟುನಿಟ್ಟಾಗಿ ಜಾರಿಗೊಳಿಸುವುದು ಮತ್ತು ಹೆಣ್ಣುಮಕ್ಕಳನ್ನು ಗೌರವಿಸುವ ವಾತಾವರಣವನ್ನು ಸೃಷ್ಟಿಸುವುದು ಇಂದಿನ ಅಗತ್ಯವಾಗಿದೆ.

## ಬಾಣಂತಿ ಸಾವು

ತಕ್ಷಣ ವೈದ್ಯರು ಚಿಕಿತ್ಸೆ ನೀಡಿದ್ದಾರೆ. ಹೆಚ್ಚಿನ ಚಿಕಿತ್ಸೆಗಾಗಿ ವೈದ್ಯರು ಕೊಪ್ಪಳ ಜಿಲ್ಲಾ ಆಸ್ಪತ್ರೆಗೆ ರೆಫರ್ ಮಾಡಿದ್ದಾರೆ. ಬಳಿಕ, ಕುಟುಂಬಸ್ಥರು ಕೊಪ್ಪಳ ಆಸ್ಪತ್ರೆಗೆ ಕರೆದುಕೊಂಡು ಹೋಗಿ, ದಾಖಲಿಸುತ್ತಿದ್ದಂತೆ ಐಶ್ವರ್ಯ ಮೃತಪಟ್ಟಿದ್ದಾಳೆ. ಐಶ್ವರ್ಯ ಸಾವಿಗೆ ವೈದ್ಯರು ಕಾರಣ. ವೈದ್ಯರ ನಿರ್ಲಕ್ಷ್ಯಕ್ಕೆ ಐಶ್ವರ್ಯ ಸಾವಾಗಿದೆ ಎಂದು ಪೋಷಕರು ಆರೋಪಿಸಿದ್ದಾರೆ.

ಈ ಬಗ್ಗೆ ಜಿಲ್ಲಾ ಆರೋಗ್ಯ ವೈದ್ಯಾಧಿಕಾರಿ ಡಾ. ಶಂಕರ್ ನಾಯ್ಕ ಮಾತನಾಡಿ, ಐಶ್ವರ್ಯ ಅವರು ಆಸ್ಪತ್ರೆಗೆ ದಾಖಲು ಆಗುವಾಗಲೇ ಎಚ್‌ಬಿ (ಹಿಮೋಗ್ಲೋಬಿನ್) 11.9 ಇತ್ತು. ಬಳಿಕ ಡಿಸೆಂಬರ್ 20 ರಂದು ಸಿಸೇರಿಯನ್ ಮೂಲಕ ಹೆರಿಗೆಯಾಗಿದೆ. ವಿಜಯನಗರ ಆಸ್ಪತ್ರೆಯಲ್ಲಿ ಐಶ್ವರ್ಯ ಅವರಿಗೆ ಏನು ತೊಂದರೆಯಾಗಿರಲಿಲ್ಲ. ವಾಂತಿ-ಭೇದಿ ಆಗಿದ್ದಕ್ಕೆ ನಾವು ಕೊಪ್ಪಳ ಸರ್ಕಾರಿ ಆಸ್ಪತ್ರೆಗೆ ಕಳಿಸಿದ್ವಿ. ಕೊಪ್ಪಳ ಆಸ್ಪತ್ರೆಯ ವೈದ್ಯರು ನೀಡಿದ ವರದಿ ಪ್ರಕಾರ, ಟೆಕ್ಕಿ ಕಾರ್ಡಿಯ ಸೇರಿದೆ. ವಾಂತಿ-ಭೇದಿಯಿಂದ ಮೆಟಾಬೋಲಿಕ್ ಆಸಿಡೋಟಸ್ ಆಗಿ ಕಿಡ್ನಿ ವೈಫಲ್ಯದಿಂದ ಸಾವಾಗಿದೆ ಅಂತ ಉಲ್ಲೇಖವಾಗಿದೆ. ಈ ಬಗ್ಗೆ ಸಮಗ್ರ ತನಿಖೆ ನಡೆಸುತ್ತೇವೆ ಎಂದು ಹೇಳಿದರು.

## ತೆರವು

ಹೆಚ್ಚಾಗಿತ್ತು. ಆದರೆ, ಅಧಿಕಾರಿಗಳ ಸಮನ್ವಯ ಕೊರತೆ ಹಿನ್ನೆಲೆಯಲ್ಲಿ ನಿರ್ಬಂಧ ತೆರವುಗೊಳಿಸಿರಲಿಲ್ಲ. ಇದೀಗ ಜಿಲ್ಲಾಧಿಕಾರಿ ಆದೇಶ ಬೆನ್ನಲ್ಲೇ ಅಖಚ ನಿಯಮ ಉಲ್ಲಂಘಿಸಿ ನಿರ್ಮಿಸಿದ್ದ ವಾಣಿಜ್ಯ ಮಳಿಗೆ ತೆರವು ಕಾರ್ಯಾಚರಣೆ ನಡೆಸಲಾಗುತ್ತಿದೆ.

## ಸಾವು

ಚಿಕಿತ್ಸೆ ಪಡೆಯುತ್ತಿದ್ದರು. ಆದರೆ ಚಿಕಿತ್ಸೆ ಫಲಕಾರಿಯಾಗದೇ ಕೊನೆಯುಸಿರೆಳೆದಿದ್ದಾರೆ. ಬಾಲ್ಯದಲ್ಲೇ ತಂದೆ-ತಾಯಿಯನ್ನು ಕಳೆದುಕೊಂಡು ದೊಡ್ಡಮ್ಮನ ಮನೆಯಲ್ಲಿ ಶಂಕರ್ ಬೆಳೆದಿದ್ದ. ಅಯ್ಯಪ್ಪನ ವ್ರತ ಮಾಡಲು ಮೊದಲ ಬಾರಿಗೆ ಮಾಲೆ ಹಾಕಿದ್ದ. ಕಳೆದ ಭಾನುವಾರ ರಾತ್ರಿ ಸಿಲಿಂಡರ್ ಸೋರಿಕೆ ಅವಘಡ ನಡೆದಿತ್ತು. ಸಾಯಿನಗರದ ಅಚ್ಚವ್ವಳ ಕಾಲೊನಿಯಲ್ಲಿ ಈ ದುರ್ಘಟನೆ ಸಂಭವಿಸಿತ್ತು. ಗ್ಯಾಸ್ ಸೋರಿಕೆಯಿಂದ ಬೆಂಕಿ ಹೊತ್ತಿಕೊಂಡಿತ್ತು. ಅವಘಡದಲ್ಲಿ 9 ಮಾಲಾಧಾರಿಗಳಿಗೆ ತೀವ್ರ ಗಾಯವಾಗಿತ್ತು. ಗಾಯಾಳುಗಳು ಕಿಮ್ಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಇದುವರೆಗೆ 5 ಮಂದಿ ಮಾಲಾಧಾರಿಗಳು ಮೃತಪಟ್ಟಿದ್ದಾರೆ. ಇನ್ನುಳಿದ ನಾಲ್ವರು ಅಯ್ಯಪ್ಪ ಮಾಲಾಧಾರಿಗಳಿಗೆ ಚಿಕಿತ್ಸೆ ಮುಂದುವರಿದಿದೆ.

# ಸಂವಿಧಾನವು ನಮ್ಮನ್ನು ಉತ್ತಮ ಮಾರ್ಗದೆಡೆ ಕೊಂಡೊಯ್ಯುವ ದೀಪವಿದ್ದಂತೆ: ಪ್ರಧಾನಿ ಮೋದಿ



**ಸಂ**ವಿಧಾನವು ನಮ್ಮನ್ನು ಉತ್ತಮ ಮಾರ್ಗದೆಡೆಗೆ ಕೊಂಡೊಯ್ಯುವ ದೀಪವಿದ್ದಂತೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ. 117ನೇ ಮನ್ ಕಿ ಬಾತ್ ನಲ್ಲಿ ಮಾತನಾಡಿದ ಅವರು, ಸಂವಿಧಾನದ ಪರಂಪರೆಯೊಂದಿಗೆ ದೇಶದ ನಾಗರಿಕರನ್ನು ಸಂಪರ್ಕಿಸಲು constitution75.com. ಹೆಸರಿನ ವಿಶೇಷ ವೆಬ್‌ಸೈಟ್ ಅನ್ನು ಸಹ ರಚಿಸಲಾಗಿದೆ ಎಂದು ಹೇಳಿದರು. ಇದರಲ್ಲಿ ನೀವು ಸಂವಿಧಾನದ ಪೀಠಿಕೆಯನ್ನು ಓದಿದ ನಂತರ ನಿಮ್ಮ ವೀಡಿಯೊವನ್ನು ಅಪ್ ಲೋಡ್ ಮಾಡಬಹುದು. ವಿವಿಧ ಭಾಷೆಗಳಲ್ಲಿ ಸಂವಿಧಾನವನ್ನು ಓದಬಹುದು, ಸಂವಿಧಾನದ ಬಗ್ಗೆ ಪ್ರಶ್ನೆಗಳನ್ನು ಕೇಳಬಹುದು ಎಂದರು.

ಮನ್ ಕಿ ಬಾತ್ ಕೇಳುಗರು, ಶಾಲೆಗಳಲ್ಲಿ ಓದುತ್ತಿರುವ ಮಕ್ಕಳು, ಕಾಲೇಜಿಗೆ ಹೋಗುವ ಯುವಕರು, ಈ ವೆಬ್‌ಸೈಟ್‌ಗೆ ಖಂಡಿತಾ ಭೇಟಿ ನೀಡಿ ಇದರ ಭಾಗವಾಗಬೇಕೆಂದು ನಾನು ವಿನಂತಿಸುತ್ತೇನೆ ಎಂದು ಹೇಳಿದರು.

ಮಹಾಕುಂಭ ವಿಶಿಷ್ಟತೆ ವಿವರಿಸಿದ ಮೋದಿ ಮಹಾಕುಂಭದ ವಿಶೇಷತೆ ಬಗ್ಗೆ ಮಾತನಾಡಿರುವ ಪ್ರಧಾನಿ ಈ ಕಾರ್ಯಕ್ರಮದಲ್ಲಿ ಕೋಟಿಗಟ್ಟಲೆ ಜನ ಸೇರುತ್ತಾರೆ. ಲಕ್ಷಗಟ್ಟಲೆ ಸಂತರು, ಸಾವಿರಾರು ಸಂಪ್ರದಾಯಗಳು, ನೂರಾರು ಪಂಗಡಗಳು ಎಲ್ಲರೂ ಸಮಾನರಾಗಿ ಭಾಗವಹಿಸುತ್ತಾರೆ. ಎಲ್ಲಿಯೂ ತಾರತಮ್ಯವಿಲ್ಲ, ಯಾರೂ ದೊಡ್ಡವರಲ್ಲ, ಚಿಕ್ಕವರಲ್ಲ. ವಿವಿಧತೆಯಲ್ಲಿ ಏಕತೆಯ ಇಂತಹ ದೃಶ್ಯ ಜಗತ್ತಿನ ಬೇರೆಲ್ಲೂ ಕಾಣಲು ಸಾಧ್ಯವಿಲ್ಲ.

2024 ರಲ್ಲಿ ನಾವು ಚಿತ್ರರಂಗದ ಅನೇಕ ಮಹಾನ್ ವ್ಯಕ್ತಿಗಳ 100 ನೇ ಜನ್ಮ ವರ್ಷಾಚರಣೆಯನ್ನು ಆಚರಿಸುತ್ತಿದ್ದೇವೆ ಎಂದು ಪ್ರಧಾನಿ ಮೋದಿ ಹೇಳಿದರು. ಈ ವ್ಯಕ್ತಿಗಳು ಭಾರತೀಯ ಚಿತ್ರರಂಗಕ್ಕೆ ವಿಶ್ವ ಮಟ್ಟದಲ್ಲಿ ಮನ್ನಣೆ ನೀಡಿದರು. ರಾಜ್ ಕಪೂರ್ ಭಾರತದ ಸಾಫ್ಟ್ ಪವರ್ ಅನ್ನು ಚಲನಚಿತ್ರಗಳ ಮೂಲಕ ಜಗತ್ತಿಗೆ ಪರಿಚಯಿಸಿದರು. ರಫಿ ಸಾಹಬ್ ಅವರ ಧ್ವನಿಯಲ್ಲಿ ಆ ಮ್ಯಾಜಿಕ್ ಇತ್ತು, ಅದು ಪ್ರತಿ ಹೃದಯವನ್ನು ಮುಟ್ಟಿತು ಎಂದರು.

ಮುಂದಿನ ವರ್ಷ ನಮ್ಮ ದೇಶದಲ್ಲಿ ಮೊದಲ ಬಾರಿಗೆ ವಿಶ್ವ ಆಡಿಯೋ ವಿಷುಯಲ್ ಎಂಟರ್‌ಟೈನ್‌ಮೆಂಟ್ ಶೃಂಗಸಭೆ ನಡೆಯಲಿದೆ ಎಂದು ಪ್ರಧಾನಿ ಮೋದಿ ಹೇಳಿದರು. ವೆಬ್ ಶೃಂಗಸಭೆಯಲ್ಲಿ ಪ್ರಪಂಚದಾದ್ಯಂತದ ಮಾಧ್ಯಮ ಮತ್ತು ಮನರಂಜನಾ ದಿಗ್ಗಜರು ಭಾಗವಹಿಸುತ್ತಾರೆ.

ಮುಂದಿನ ತಿಂಗಳಿನಿಂದ ಪ್ರಯಾಗ್ ರಾಜ್‌ನಲ್ಲಿ ಮಹಾಕುಂಭ ನಡೆಯಲಿದೆ ಎಂದು ಪ್ರಧಾನಿ ಮೋದಿ ಹೇಳಿದ್ದಾರೆ. ಸದ್ಯ ಅಲ್ಲಿ ಭರ್ಜರಿ ಸಿದ್ದತೆಗಳು ನಡೆಯುತ್ತಿವೆ. ಕುಂಭ ಪ್ರದೇಶವನ್ನು ನೋಡಿದ ತಕ್ಷಣ ಮನಸ್ಸಿನಲ್ಲಿ ತೃಪ್ತಿಯ ಭಾವ ತುಂಬಿತ್ತು. ಕುಂಭ ಸಮಾರಂಭದಲ್ಲಿ ಮೊದಲ ಬಾರಿಗೆ AI ಚಾಟ್‌ಬಾಟ್ ಅನ್ನು ಬಳಸಲಾಗುವುದು ಎಂದು ಅವರು ಹೇಳಿದರು.

## ಇಂದಿನಿಂದ ರಾಜ್ಯಾದ್ಯಂತ ಒಣಹವೆ ಜನವರಿ 3ರವರೆಗೂ ಇದೇ ವಾತಾವರಣ

**ಬೆಂಗಳೂರು:** ಇಂದು ರಾಜ್ಯಾದ್ಯಂತ ಒಣ ಹವೆ ಇರುವ ಸಾಧ್ಯತೆ ಇದೆ. ಕರ್ನಾಟಕದ ಒಳಭಾಗದ ಮೇಲೆ ಪ್ರತ್ಯೇಕವಾದ ಸ್ಥಳಗಳಲ್ಲಿ ಆಳವಿಲ್ಲದ ಮಂಜು ಇರುವ ಸಂಭವವಿದೆ.

ಇನ್ನು, ನಾಳೆ ಅಂದರೆ ಡಿಸೆಂಬರ್ 30ರಂದು ರಾಜ್ಯಾದ್ಯಂತ ಒಣ ಹವೆ ಇರುವ ಸಾಧ್ಯತೆ ಇದೆ. ಕರ್ನಾಟಕದ ಒಳಭಾಗದ ಮೇಲೆ ಪ್ರತ್ಯೇಕವಾದ ಸ್ಥಳಗಳಲ್ಲಿ ಆಳವಿಲ್ಲದ ಮಂಜು ಇರುವ ಸಂಭವವಿದೆ.

ಜನವರಿ 1 ಹೊಸ ವರ್ಷಾರಂಭದೊಂದಿಗೆ ರಾಜ್ಯಾದ್ಯಂತ ಒಣ ಹವೆ ಮುಂದುವರೆಯಲಿದೆ. ಜನವರಿ 3ರವರೆಗೂ ರಾಜ್ಯದಲ್ಲಿ ಒಣ ಹವೆ ಮುಂದುವರೆಯಲಿದೆ.

ಮುಂದಿನ 5 ದಿನಗಳ ಕಾಲ ರಾಜ್ಯದಾದ್ಯಂತ ಒಣ ಹವೆಯಿರುವ ಸಾಧ್ಯತೆಯಿದ್ದು, ಅಲ್ಲಲ್ಲಿ ತುಂತುರು ಮಳೆಯಾಗುವ ಸಾಧ್ಯತೆಯಿದೆ.

# ನಾಗರೀಕತೆಯ ನೆಪದಲ್ಲಿ ಸಂಸ್ಕೃತಿ ನಾಶಗೊಳ್ಳಬಾರದು

**ತುಮಕೂರು:** ಮಾನವ ಜೀವನದಲ್ಲಿ ಧೈರ್ಯ ಮತ್ತು ಚಲನಶೀಲತೆ ಮುಖ್ಯ. ಭೌತಿಕ ಬದುಕಿಗೆ ಸಂಪತ್ತಷ್ಟೇ ಮುಖ್ಯವಲ್ಲ. ಸಂಸ್ಕೃತಿ ಮುಖ್ಯ. ಆಧುನಿಕತೆ ಮತ್ತು ವೈಚಾರಿಕತೆಯಲ್ಲಿ ಭಾರತೀಯ ಉತ್ಕೃಷ್ಟ ಸಂಸ್ಕೃತಿ ನಾಶಗೊಳ್ಳಬಾರದೆಂದು ಬಾಳೆಹೊನ್ನೂರು ಶ್ರೀ ರಂಭಾಪುರಿ ಡಾ.ವೀರಸೋಮೇಶ್ವರ ಜಗದ್ಗುರುಗಳು ಅಭಿಪ್ರಾಯಪಟ್ಟರು.

ಅವರು ಶನಿವಾರ ಶ್ರೀ ವಿಶಾಲಾಕ್ಷಮ್ಮ ಸದಾಶಿವಯ್ಯ ಸಭಾಭವನದಲ್ಲಿ ಶ್ರೀ ಜಗದ್ಗುರು ಪಂಚಾಚಾರ್ಯ ಸೇವಾ ಟ್ರಸ್ಟಿನ ಆಶ್ರಯದಲ್ಲಿ ಜನ ಜಾಗೃತಿ ಧರ್ಮ ಸಮಾರಂಭದ 3ನೇ ದಿನದ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡುತ್ತಿದ್ದರು.

ಜಗತ್ತು ಮತ್ತು ಜನ ಎಷ್ಟೇ ಬದಲಾದರೂ ಮಾನವ ಸಂಬಂಧಗಳು ಸಡಿಲಗೊಳ್ಳಬಾರದು. ಬಾಂಧವ್ಯ ಸಂಬಂಧಗಳನ್ನು ಮರೆತರೆ ಮನುಷ್ಯನಿಗೂ ಯಂತ್ರಕ್ಕೂ ಯಾವುದೇ ವ್ಯತ್ಯಾಸ ಇರುವುದಿಲ್ಲ. ವ್ಯಕ್ತಿಗೆ ಕೊಳೆ ಅಂಟಿದರೆ ಶುದ್ಧ ಮಾಡಬಹುದು. ಆದರೆ ವ್ಯಕ್ತಿತ್ವ ಕೊಳಕಾಗಿದ್ದರೆ ತೊಳೆಯುವುದು ಕಷ್ಟ. ಮಾನವನ ಉಸಿರಾಟಕ್ಕೆ ಗಾಳಿ ಎಷ್ಟು ಮುಖ್ಯವೋ ಅಷ್ಟೇ ಜೀವನ ಉಜ್ವಲ ಭವಿಷ್ಯಕ್ಕೆ ಧರ್ಮಾಚಾರ್ಯರ ಮಾರ್ಗದರ್ಶನ ಮುಖ್ಯವಾಗಿದೆ. ಭೌತಿಕ ಬದುಕು ಸಮೃದ್ಧಗೊಂಡಂತೆ ಆಂತರಿಕ ಬದುಕು ಪರಿಶುದ್ಧಗೊಳ್ಳಬೇಕಾದುದು ಅವಶ್ಯಕ. ಯುವಶಕ್ತಿ ದೇಶದ ಬಲು ದೊಡ್ಡ ಶಕ್ತಿ ಮತ್ತು ಆಸ್ತಿ. ಯುವ ಜನಾಂಗ ತಾತ್ವಿಕ ಚಿಂತನೆಗಳ ಮೂಲಕ ಸುಖ ಶಾಂತಿ ಪಡೆಯಬೇಕೆಂದು ಶ್ರೀ ಜಗದ್ಗುರು ರೇಣುಕಾಚಾರ್ಯರು ಬೋಧಿಸಿದ್ದಾರೆ ಎಂದರು.




ಕೇಂದ್ರದ ಜಲಶಕ್ತಿ ಹಾಗೂ ರೇಲ್ವೆ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ ಮಾತನಾಡಿ ಅಶಾಂತಿಯಿಂದ ತತ್ತರಿಸುತ್ತಿರುವ ಜೀವ ಜಗತ್ತಿಗೆ ಆಧ್ಯಾತ್ಮದ ಚಿಂತನ ಮುಖ್ಯ. ಈ ನಾಡಿನ ಧರ್ಮ ಪೀಠಗಳು ಉತ್ಕೃಷ್ಟ ಸಂಸ್ಕೃತಿ ಬೆಳೆಸುವ ನಿಟ್ಟಿನಲ್ಲಿ ಬಹು ದೊಡ್ಡ ಕೊಡುಗೆ ಕೊಟ್ಟಿದ್ದಾರೆ. ಶ್ರೀ ಜಗದ್ಗುರು ರಂಭಾಪುರಿ ಪೀಠ ಮಾನವ ಧರ್ಮಕ್ಕೆ ಜಯವಾಗಲಿ ಧರ್ಮದಿಂದಲೇ ವಿಶ್ವಕ್ಕೆ ಶಾಂತಿಯೆಂದು ನಿರೂಪಿಸಿದೆ. ಇಂಥ ಅಮೂಲ್ಯ ಸಂದೇಶ ಸಾರಿದ ರಂಭಾಪುರಿ ಪೀಠದ ಘೋಷಣೆ ಸಮಾಜ ಮರೆಯುವಂತಿಲ್ಲ ಎಂದರು. ಬಳ್ಳಾರಿ ಡಾ|| ಚಿಕ್ಕ್ಯಾಟಿ ಮಠದ ವೀರಭದ್ರಯ್ಯನವರು ವೀರಶೈವ ಧರ್ಮದ ಪ್ರಾಚೀನತ್ವ ಕುರಿತು ಉಪನ್ಯಾಸ ನೀಡಿದರು. ಶಿವಗಂಗೆ ಹೊನ್ನಮ್ಮ ಗವಿಮಠದ ರುದ್ರಮುನಿ ಶಿವಾಚಾರ್ಯ ಸ್ವಾಮಿಗಳು ಉಪದೇಶಾಮೃತವನ್ನಿತ್ತರು. ಸಿದ್ಧರಬೆಟ್ಟದ ವೀರಭದ್ರ ಶಿವಾಚಾರ್ಯರು ನೇತೃತ್ವ ವಹಿಸಿದ್ದರು. ಹೆಚ್.ಎಸ್.ರವಿಶಂಕರ, ಎನ್.ನಂಜುಂಡೇಶ, ಎಸ್.ಜಿ.ಚಂದ್ರಮೌಳಿ, ಸಿದ್ಧಗಂಗಾ ರುದ್ರೇಶ್ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡಿದ್ದರು. ಕೆ.ಮಲ್ಲಿಕಾರ್ಜುನಯ್ಯ, ಎನ್.ಬಿ.ಪ್ರದೀಪಕುಮಾರ, ಅತ್ತಿ ರೇಣುಕಾನಂದ, ಎ.ಆರ್.ದಶರಥ, ಎಸ್.ಎಸ್.ಆರಾಧ್ಯರು, ಡಾ.ರಾಜೇಂದ್ರ ಮೂಗಿ ಮೊದಲಾದ ಗಣ್ಯರಿಗೆ ಶ್ರೀ ರಂಭಾಪುರಿ ಜಗದ್ಗುರುಗಳು ಗುರುರಕ್ಷೆಯಿತ್ತು ಶುಭ ಹಾರೈಸಿದರು. ತೆವಡೇಹಳ್ಳಿ ಗೋಸಲ ಚನ್ನಬಸವೇಶ್ವರ ಶಿವಾಚಾರ್ಯರು, ಅಂಬಲದೇವರಹಳ್ಳಿ ಮಠದ ಉಜ್ಜನೀಶ್ವರ ಶಿವಾಚಾರ್ಯರು ಸಮಾರಂಭದಲ್ಲಿ ಉಪಸ್ಥಿತರಿದ್ದರು. ಡಿ.ಆರ್.ಸತೀಶ ಸ್ವಾಗತಿಸಿದರು. ರೇಖಾ ಶಿವಕುಮಾರ್ ನಿರೂಪಣೆ ಮಾಡಿದರು.

ಧನುರ್ಮಾಸದ ಅಂಗವಾಗಿ ಪ್ರಾತ:ಕಾಲ ಶ್ರೀ ರಂಭಾಪುರಿ ಜಗದ್ಗುರುಗಳವರ ಇಷ್ಟಲಿಂಗ ಮಹಾಪೂಜೆ ಜರುಗಿತು. ಸಹಸ್ರಾರು ಭಕ್ತರು ಪಾಲ್ಗೊಂಡು ಧನ್ಯರಾದರು.

## ಬಿಗ್ ಹಿಟ್ಟರ್ ಕ್ರಿಕೆಟ್ ಟೂರ್ನ್ಮೆಂಟಿಗೆ ಚಾಲನೆ

**ಕೋಲಾರ:** ನಗರ ಹೊರವಲಯದ ಪವರ್ ಗ್ರಿಡ್ ಮುಂಭಾಗ ಕೀರ್ತನ ಎಂಟರ್ ಪ್ರೈಸಸ್ ಮಾಲೀಕರದ ಮಹೇಶ್ ಗೌಡರವರ ನೇತೃತ್ವದಲ್ಲಿ ಬಿಡ್ ಮೂಲಕ ಆಟಗಾರರ ಆಯ್ಕೆ ಮಾಡಿ 16 ತಂಡಗಳನ್ನು ರಚಿಸಿ ಪಂದ್ಯಗಳನ್ನು ನೇರಪ್ರಸಾರದೊಂದಿಗೆ ಚಾಲನೆ ಶುಕ್ರವಾರದಂದು ಪಂದ್ಯ ಆರಂಭ ಮಾಡಿ ನಂತರ ಆಯೋಜಕ ಮಹೇಶ್ ಗೌಡ ಮಾತನಾಡಿ ಈ ಭಾಗದಲ್ಲಿ ರಾಜ್ಯ ಮಟ್ಟಕ್ಕೆ ಆಯ್ಕೆಯಾಗುವ ಯುವ ಆಟಗಾರರನ್ನು ಪ್ರೋತ್ಸಾಹಮಾಡುವ ಸಲುವಾಗಿ ಮತ್ತು ರಾಜ್ಯ ಮಟ್ಟಕ್ಕೆ ಆಯ್ಕೆಯಾಗಲು ಸಹಾಯವಾಗುವ ರೀತಿಯಲ್ಲಿ ಪ್ರಥಮ ಪ್ರಯತ್ನ ಇದಾಗಿದ್ದು ಕ್ರೀಡಾ ಪ್ರೇಮಿಗಳ ಸಹಕಾರದಿಂದ ಯಶಸ್ವಿಯಾಗಿ ಪಂಧ್ಯಗಳು ಆರಂಭವಾಗಿದೆ ಎಂದರು. ಸಮಾಜ ಸೇವಕಿ ಕುರ್ಕಿ ರಾಜೇಶ್ವರಿ ಅವರು ಆಟಗಾರರ ಪರಿಚಯದೊಂದಿಗೆ ಪಂದ್ಯಗಳನ್ನು ಉದ್ಘಾಟನೆ ಮಾಡಿ ಭಾಗವಹಿಸಿದ ಎಲ್ಲಾ ತಂಡಗಳಿಗೂ ಶುಭ ಕೋರಿದರು.



# ಭಿನ್ನಾಭಿಪ್ರಾಯ ಮರೆತು ಸಂಘಟಿತರಾಗಿ



**ತಾಂಡವಪುರ:** ಕುರುಬ ಸಮಾಜದವರು ತಮ್ಮ ಎಲ್ಲಾ ಭಿನ್ನಾಭಿಪ್ರಾಯಗಳನ್ನು ಮರೆತು ಸಂಘಟಿತರಾದರೆ ಮಾತ್ರ ರಾಜಕೀಯವಾಗಿ ಸಾಮಾಜಿಕವಾಗಿ ಆರ್ಥಿಕವಾಗಿ ಶೈಕ್ಷಣಿಕವಾಗಿ ಮುಂದೆ ಬರಲು ಸಾಧ್ಯ ಎಂದು ಕಾರ್ಖಾನೆಗಳ ಬಾಯ್ಲರ್ಗಳ ಕೈಗಾರಿಕಾ ಸುರಕ್ಷತೆ ಹಾಗೂ ಸ್ವಾಸ್ಥ ಇಲಾಖೆಯ ಜಂಟಿ ನಿರ್ದೇಶಕರು ಹಾಗೂ ಹಿರಿಯ ವೈದ್ಯರು ಆದ ಡಾಕ್ಟರ್ ಪಿ ಮಾಲೇಗೌಡರು ಅಭಿಪ್ರಾಯ ವ್ಯಕ್ತಪಡಿಸಿದರು

ಅವರು ಇಂದು ನಂಜನಗೂಡಿನ ಕನಕ ಭವನದಲ್ಲಿ ಏರ್ಪಡಿಸಿದ್ದ ಶ್ರೀ ಕನಕ ನೌಕರರ ಕ್ಷೇಮಾಭಿವೃದ್ಧಿ ಸಂಘದ 25ನೇ ವರ್ಷದ ವಾರ್ಷಿಕೋತ್ಸವ ಶ್ರೀ ಭಕ್ತ ಕನಕದಾಸರ ಜಯಂತಿ ಸಂಘದ 2025 ನೇ ವರ್ಷದ ನೂತನ ಕನಕ ದರ್ಶಿನಿ ಕ್ಯಾಲೆಂಡರ್ ಬಿಡುಗಡೆ ಹಾಗೂ ಸಮಾಜದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಸಮಾರಂಭವನ್ನು ಉದ್ಘಾಟಿಸಿ ಮಾಲೆಗೌಡರು ಮಾತನಾಡುತ್ತಾ ಇಂದಿನ ದಿನಮಾನಗಳಲ್ಲಿ ಕುರುಬ ಸಮಾಜದವರು ಸಂಘಟಿತರಾಗಿ ಮುಂದುವರಿದ ಸಮಾಜಗಳ ಜೊತೆ ಒಗ್ಗೂಡಿಕೊಂಡು ಹೋದರೆ ಮಾತ್ರ ರಾಜಕೀಯವಾಗಿ ಸಾಮಾಜಿಕವಾಗಿ ಶೈಕ್ಷಣಿಕವಾಗಿ ಆರ್ಥಿಕವಾಗಿ ಮುಂದೆ ಬರಲು ಸಾಧ್ಯ ಆ ನಿಟ್ಟಿನಲ್ಲಿ ಕುರುಬ ಸಮಾಜದವರು ಜಾಗೃತರಾಗಬೇಕು ಎಂದು ಕರೆ ನೀಡಿದ ಅವರು ಸಮಾಜವನ್ನು ಹಾಗೂ ಸಂಘಟನೆಗಳನ್ನು ಮುಂದೆ ತರಲು ಸಮಾಜದ ಎಲ್ಲಾ ಮುಖಂಡರು ಜನಪ್ರತಿನಿಧಿಗಳು ಸಹಕಾರ ನೀಡಬೇಕು ತಮ್ಮ ಕೈಲಿ ಎಷ್ಟರಮಟ್ಟಿಗೆ ಈ ಸಂಘಟನ ತೇರುಗಳನ್ನು ಎಳೆಯುತ್ತೀರಿ ಮುಂದಕ್ಕೆ ಕೊಂಡೊಯ್ಯಿರಿ ಆದರೆ ಕೆಳಕ್ಕೆ ತಳ್ಳುವಂತ ಕೆಲಸವನ್ನು ಯಾರು ಕೂಡ ಮಾಡಬೇಡಿ ಎಂದು ಸಲಹೆ ನೀಡಿದರು ಕನಕದಾಸರು ತಮ್ಮ ದಾಸ ಸಾಹಿತ್ಯದ ಮೂಲಕವೇ ಸಮ ಸಮಾಜಗಳನ್ನು ಒಗ್ಗೂಡಿಸಿ ಸಮಾಜದ ಅಂಕು ಡೊಂಕುಗಳನ್ನು ಸರಿಪಡಿಸಲು ಜಾಗೃತಿ ಮೂಡಿಸಿದಂತಹ ಮಹಾನ್ ನಾಯಕರು ಅವರ ತತ್ವ ಆದರ್ಶಗಳನ್ನ ನಾವೆಲ್ಲರೂ ಮೈಗೂಡಿಸಿಕೊಂಡು ಸಂಘಟಿತರಾಗಿ ರಾಜಕೀಯವಾಗಿ ಸಾಮಾಜಿಕವಾಗಿ ಶೈಕ್ಷಣಿಕವಾಗಿ ಆರ್ಥಿಕವಾಗಿ ಮುಂದೆ ಸಾಗೋಣ ಎಂದರು

ಇದೇ ಸಂದರ್ಭದಲ್ಲಿ 10ನೇ ತರಗತಿ ಪಿಯುಸಿ ತರಗತಿಗಳಲ್ಲಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ಸಂಘದ ವತಿಯಿಂದ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಿ ಸನ್ಮಾನಿಸಲಾಯಿತು ಸಮಾರಂಭದ ದಿವ್ಯ ಸನಿಧ್ಯವನ್ನು ಕನಕ ಗುರು ಪೀಠ ಮೈಸೂರು ಶಾಕಾ ಮಠದ ಕಿರಿಯ ಸ್ವಾಮೀಜಿ ರೇಣುಕಾ ಸಿದ್ದೇಶ್ವರ ಸ್ವಾಮೀಜಿ ಅವರು ಸಾನಿಧ್ಯ ವಹಿಸಿ ಕನಕದಾಸರ ಜೀವನ ಚರಿತ್ರೆಯನ್ನು ಎಳೆ ಎಳೆಯಾಗಿ ಬಿಡಿಸಿ ಹೇಳಿ ಅವರ ತತ್ವ ಆದರ್ಶಗಳನ್ನು ತಾವೆಲ್ಲರೂ ಮೈಗೂಡಿಸಿಕೊಂಡು ಸ್ವಾರ್ಥಿಗಳಾಗದೆ ಮತ್ತುಬ್ಬರಿಗೆ ಸಹಕಾರಿಗಳಾಗಿ ಎಂದು ಹಿತವಚನ ನೀಡಿದರು

ಸಮಾರಂಭದ ಅಧ್ಯಕ್ಷತೆಯನ್ನು ಸಂಘದ ಅಧ್ಯಕ್ಷರಾದ ಜೆ ಮಹದೇವ ವಹಿಸಿದ್ದು ಮುಖ್ಯ ಅತಿಥಿಗಳಾಗಿ ಸಿ ಎಚ್ ಸುರೇಶ್ ಹಾಗೂ ಮಧುಸೂದನ್ ಎಸ್ಎಂ ಬಸವರಾಜು ಸಂಘದ ಗೌರವಾಧ್ಯಕ್ಷರಾದ ಕೆ ಬಿ ಬಸಪ್ಪ ಉಪಾಧ್ಯಕ್ಷರಾದ ಸುನಂದಾ ಎಚ್ ಶಿವನಾಗು ಪ್ರಧಾನ ಕಾರ್ಯದರ್ಶಿಯಾದ ಮರಳೆಗೌಡ ಸಂಘದ ಖಜಾಂಚಿ ಕನಕರಾಜ್ ಸಹ ಕಾರ್ಯದರ್ಶಿ ಬೀರಲಿಂಗು ಮಹದೇವಯ್ಯ ಇದ್ದರು..

# ಭಾರತ ದೇಶಕ್ಕೆ ಅಪಾರ ನಷ್ಟ

**ಹನೂರು:** ಮಾಜಿ ಪ್ರಧಾನ ಮಂತ್ರಿಗಳು, ಹಿರಿಯ ಅರ್ಥಶಾಸ್ತ್ರಜ್ಞ ಡಾ.ಮನಮೋಹನ್ ಸಿಂಗ್ ರವರನ್ನು ಕಳೆದುಕೊಂಡಿರುವುದು ಇಡೀ ಭಾರತ ದೇಶಕ್ಕೆ ಅಪಾರ ನಷ್ಟ ಉಂಟು ಮಾಡಿದೆ ಎಂದು ಮುಖಂಡರಾದ ಚಿಕ್ಕ ತಮ್ಮಯ್ಯರವರು ತಿಳಿಸಿದರು.




ಹನೂರು ಪಟ್ಟಣದ ಕಾಂಗ್ರೆಸ್ ಕಚೇರಿಯಲ್ಲಿ ಭಾರತದ ಮಾಜಿ ಪ್ರಧಾನಮಂತ್ರಿಗಳು ಹಾಗೂ ಕಾಂಗ್ರೆಸ್ ಪಕ್ಷದ ಹಿರಿಯ ಮುಖಂಡರಾದ ಡಾ.ಮನಮೋಹನ್ ಸಿಂಗ್ ರವರ ಶ್ರದ್ಧಾಂಜಲಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಡಾ. ಮನಮೋಹನ್ ಸಿಂಗ್ ರವರು ಯುಪಿಎ ನೇತೃತ್ವದ ಕಾಂಗ್ರೆಸ್ ಸರ್ಕಾರದ 10 ವರ್ಷದ ಅವಧಿಯಲ್ಲಿ ಹಲವು ಹೊಸ ಕಾರ್ಯಕ್ರಮಗಳನ್ನು ಅನುಷ್ಠಾನ ಮಾಡುವುದರ ಮೂಲಕ ಉತ್ತಮ ಆಡಳಿತ ಕೊಟ್ಟು ಜನ ಮನ್ನಣೆಗಳಿಸಿದ ಮಹಾನ್ ನಾಯಕರಾಗಿದ್ದಾರೆ.

ಪ್ರಧಾನ ಮಂತ್ರಿಗಳಾಗಿದ್ದಾಗ ಮಹಾತ್ಮ ಗಾಂಧಿ ಉದ್ಯೋಗ ಖಾತ್ರಿ ಯೋಜನೆ, ಮಾಹಿತಿ ಹಕ್ಕು ಕಾಯ್ದೆ ,ಆಹಾರ ಶಿಕ್ಷಣ ಹಕ್ಕು ಕಾಯ್ದೆ, ಮೊಬೈಲ್ ಪೋರ್ಟ್ ಬಲಿಟಿ ಸೌಲಭ್ಯ ಸೇರಿದಂತೆ ಹಲವು ಕಾರ್ಯಕ್ರಮಗಳನ್ನು ಯೋಜನೆ ಜಾರಿ ಮಾಡಿದ ಹೆಗ್ಗಳಿಕೆ ಅವರಿಗೆ ಸಲ್ಲುತ್ತದೆ. ಪ್ರತಿ ಗ್ರಾಮ ಪಂಚಾಯಿತಿಗಳಲ್ಲಿ ಮಹಾತ್ಮ ಗಾಂಧಿ ಉದ್ಯೋಗ ಖಾತ್ರಿ ಯೋಜನೆಯಡಿ ಹಳ್ಳಿಗಾಡಿನ ಜನತೆಗೆ ಪ್ರತಿ ವರ್ಷ ಕನಿಷ್ಠ ನೂರು ದಿನಗಳ ಉದ್ಯೋಗ ಖಾತ್ರಿ ನೀಡುವ ಯೋಜನೆಯನ್ನು ಜಾರಿಗೆ ತಂದ ನಂತರ ಇದು ಬಡವರಿಗೆ ವರದಾನವಾಗಿದೆ. ಪ್ರತಿಯೊಂದು ಮಗುವು ಶಿಕ್ಷಣದಿಂದ ವಂಚಿತರಾಗಬಾರದು ಎಂಬ ದೃಷ್ಟಿಯಿಂದ ಆರು ವರ್ಷದಿಂದ 14 ವರ್ಷದ ಮಕ್ಕಳಿಗೆ ಕಡ್ಡಾಯ ಶಿಕ್ಷಣ ಜಾರಿಗೆ ತರುವುದರ ಮೂಲಕ ಶಿಕ್ಷಣ ಕ್ರಾಂತಿಯನ್ನು ರೂಪಿಸಿದ್ದಾರೆ, ಆಹಾರ ಭದ್ರತೆ ಕಾಯ್ದೆಯಿಂದ ದೇಶದ 120 ಕೋಟಿ ಜನರಿಗೆ ಇದರ ಲಾಭ ದೊರಕಿದೆ ಎಂದು ಸ್ಮರಿಸಿದರು.

ಪಟ್ಟಣ ಪಂಚಾಯಿತಿ ನಾಮನಿರ್ದೇಶಿತ ಬಸವರಾಜು ಮಾತನಾಡಿ ಪ್ರಧಾನಮಂತ್ರಿ ಪಿ.ವಿ ನರಸಿಂಹರಾವ್ ರವರ ಸಂಪುಟದಲ್ಲಿ ವಿತ್ತ ಸಚಿವರಾಗಿದ್ದ ಮನಮೋಹನ್ ಸಿಂಗ್ ರವರು 1991 ರಲ್ಲಿ ಮಂಡಿಸಿದ ಬಜೆಟ್ ಈ ದೇಶದ ಗತಿಯನ್ನೇ ಬದಲಿಸಿದ ಮಾಂತ್ರಿಕ ಬಜೆಟ್ ಎಂಬ ಖ್ಯಾತಿ ಪಡೆದಿದೆ. ಭಾರತ ದೇಶ ದಿವಾಳಿಯತ್ತ ಸಾಗಿದ ಆರ್ಥಿಕತೆಯನ್ನು ಆ ಬಜೆಟ್ ನಲ್ಲಿ ಮನಮೋಹನ್ ಸಿಂಗ್ ಅಚ್ಚರಿಯ ರೀತಿಯಲ್ಲಿ ಮೇಲೆತ್ತಲು ಅಡಿಪಾಯ ಹಾಕಿದ್ದರು ಎಂದು ತಿಳಿಸಿದರು.

ಶ್ರದ್ಧಾಂಜಲಿ ಸಭೆಯಲ್ಲಿ ಪಟ್ಟಣ ಪಂಚಾಯಿತಿ ಸದಸ್ಯರಾದ ಗಿರೀಶ್ ,ಸಂಪತ್ , ಮಾಜಿ ಉಪಾಧ್ಯಕ್ಷ ಮಾದೇಶ್, ಜಿಲ್ಲಾ ಗ್ಯಾರೆಂಟಿ ಅನುಷ್ಠಾನ ಸಮಿತಿ ಉಪಾಧ್ಯಕ್ಷ ಸಿದ್ದರಾಜು, ಮುಖಂಡರಾದ ವೆಂಕಟರಮಣ ನಾಯ್ಡು, ಎಲ್ಲೇಮಾಳ ನಾಗೇಶ್, ರಾಜು, ರಾಜೇಶ್ ಸಿದ್ದನಂಜೇಗೌಡ, ಮಂಜೇಶ್, ಯೂಥ್ ಕಾಂಗ್ರೆಸ್ ಅಧ್ಯಕ್ಷ ಮಾದೇಶ್ ಸೇರಿದಂತೆ ಇನ್ನಿತರರು ಹಾಜರಿದ್ದರು.

# ಆರ್ಥಿಕ ಕ್ಷೇತ್ರಕ್ಕೆ ತುಂಬಲಾರದ ನಷ್ಟ

**ಚಿಕ್ಕಬಳ್ಳಾಪುರ :** ವಿಶ್ವ ವಿಖ್ಯಾತ ಅರ್ಥಶಾಸ್ತ್ರ ತಜ್ಞ ಹಾಗೂ ದೇಶದ ಪ್ರಧಾನ ಮಂತ್ರಿಗಳಾಗಿ ಹತ್ತು ವರ್ಷಗಳ ಕಾಲ ದೇಶವನ್ನು ಮುನ್ನಡೆಸಿದ ಮಾಜಿ ಪ್ರಧಾನಿ ಮನಮೋಹನ್ ಸಿಂಗ್ ರವರು ನಿಧನರಾಗಿರುವುದು ವಿಶ್ವದ ಆರ್ಥಿಕ ಕ್ಷೇತ್ರಕ್ಕೆ ತುಂಬಲಾರದ ನಷ್ಟ ಉಂಟಾಗಿದೆ ಎಂದು ಕೆಪಿಸಿಸಿ ಅಲ್ಪಸಂಖ್ಯಾತರ ವಿಭಾಗದ ರಾಜ್ಯ ಘಟಕದ ಉಪಾಧ್ಯಕ್ಷ ಬಿ. ಎಸ್ ರಫಿವುಲ್ಲಾ ತಿಳಿಸಿದರು.



ಮಾಜಿ ಪ್ರಧಾನಿ ಡಾಕ್ಟರ್ ಮನಮೋಹನ್ ಸಿಂಗ್ ರವರ ನಿಧನದ ಹಿನ್ನೆಲೆಯಲ್ಲಿ ಪತ್ರಿಕ ಹೇಳಿಕೆ ಬಿಡುಗಡೆ ಮಾಡಿರುವ ಅವರು ದೇಶ ಆರ್ಥಿಕ ಸಂಕಷ್ಟದಲ್ಲಿ ಇದ್ದಾಗ ದೇಶದ ಆರ್ಥಿಕತೆಯನ್ನು ಜಿಡಿಪಿ 10.2ಕ್ಕೆ ಕೊಂಡೊಯ್ದ ಕೀರ್ತಿ ಮನಮೋಹನ್ ಸಿಂಗ್ ರವರಿಗೆ ಸಲ್ಲುತ್ತದೆ ನೆರೆ ರಾಷ್ಟ್ರ ಸೌದಿ ಅರೇಬಿಯಾದಲ್ಲಿ ಆರ್ಥಿಕತೆ ಕುಸಿದಿದ್ದಾಗಲೂ ಸಹ ಇವರ ಸಲಹೆಯಿಂದ ಅಲ್ಲಿಯೂ ಸಹ ಆರ್ಥಿಕತೆ ಉತ್ತಮಗೊಳ್ಳಲು ಕಾರಣಕರ್ತರಾಗಿದ್ದರು. ದೇಶದ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಸಹ ಆರ್ಥಿಕ ವಿಚಾರದಲ್ಲಿ ಡಾ. ಮನಮೋಹನ್ ಸಿಂಗ್ ರವರ ಅಭಿಪ್ರಾಯ ಮತ್ತು ಸಲಹೆಯನ್ನು ಪಡೆದುಕೊಳ್ಳುತ್ತಿದ್ದರು ಕೇಂದ್ರ ಸರ್ಕಾರ ಡಾ. ಮನಮೋಹನ್ ಸಿಂಗ್ ರವರ ನೆನಪಿನಲ್ಲಿ ಒಂದು ಶಾಶ್ವತವಾದ ಸ್ಮಾರಕ ನಿರ್ಮಾಣ ಮಾಡುವಂತೆ ತಾವು ಕೇಂದ್ರ ಸರ್ಕಾರದಲ್ಲಿ ಮನವಿ ಮಾಡುವುದಾಗಿ ತಿಳಿಸಿದರು.

## ಸಚಿವ ಸಂಪುಟ ನಡೆಯುವ ಸ್ಥಳ ಪರಿಶೀಲನೆ

**ಚಾಮರಾಜನಗರ:** ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಚಾಮರಾಜನಗರ ಜಿಲ್ಲೆಯ ಹನೂರು ಕ್ಷೇತ್ರದ ಶಾಸಕ ಎಂ ಆರ್ ಮಂಜುನಾಥ್ ರವರು ಸಚಿವ ಸಂಪುಟದ ಸಿದ್ದತೆ ಬಗೆ ಸಭೆ ನಡೆಸಲಾಗಿತ್ತು. ಮುಖ್ಯಮಂತ್ರಿಗಳು ಮಹದೇಶ್ವರ ಬೆಟ್ಟದಲ್ಲಿ ಸಚಿವ ಸಂಪುಟ ಸಭೆಯನ್ನು ಆಯೋಜಿಸಿರುವ ಹಿನ್ನೆಲೆಯಲ್ಲಿ ಸಚಿವ ಸಂಪುಟ ನಡೆಯುವ ಸ್ಥಳಕ್ಕವನ್ನು ಪರಿಶೀಲನೆ ನಡೆಸಿ ಸಂಬಂಧಿಸಿದ ಅಧಿಕಾರಿಗಳಿಗೆ ಜವಾಬ್ದಾರಿ ನೀಡಿದರು. ಹಾಗೆ ಈ ಸಮಯದಲ್ಲಿ ಪ್ರಾಧಿಕಾರ ಅಭಿವೃದ್ಧಿ ಕಾಮಗಾರಿಗಳನ್ನು ವೀಕ್ಷಣೆ ಮಾಡಿ ಕಾಮಗಾರಿಗಳನ್ನು ತ್ವರಿತವಾಗಿ ಮುಗಿಸಬೇಕು ಎಂದು ತಿಳಿಸಿದರು,ಹೆಲಿಪ್ಯಾಡ್ ಸ್ಥಳವನ್ನು ಪರಿಶೀಲನೆ ಮಾಡಿ ಮತ್ತೊಂದು ಹೆಲಿಪ್ಯಾಡ್ ಮಾಡಲು ಸ್ಥಳ ಗುರುತಿಸಿ ಎಂದು ಅಧಿಕಾರಿಗಳಿಗೆ ತಿಳಿಸಿದರು. ನಂತರ ಅಧಿಕಾರಿಗಳ ಜೋತೆ ಸಭೆಯನ್ನು ನಡೆಸಿ ಸಚಿವ ಸಂಪುಟ ಸಭೆ ನಡೆಸಲು ಅಗತ್ಯ ಕ್ರಮ ಕೈಗೊಂಡು ಯಾವುದೇ ಲೋಪವಾಗದಂತೆ ನೋಡಿಕೊಳ್ಳಬೇಕು ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಜಿಲ್ಲಾಧಿಕಾರಿ ಶಿಲ್ಪಾ ನಾಗ್, ಪ್ರಾಧಿಕಾರದ ಕಾರ್ಯದರ್ಶಿ ರಘು,ಉಪವಿಭಾಗಾಧಿಕಾರಿ, ಮಹೇಶ್, ಡಿವೈಎಸ್ಪಿ ಧರ್ಮೇಂದ್ರ, ತಹಶೀಲ್ದಾರ್ ಗುರುಪ್ರಸಾದ್, ತಾಲ್ಲೂಕು ಪಂಚಾಯಿತಿ ಇ, ಒ ಉಮೇಶ್, ಉಪಸ್ಥಿತರಿದ್ದರು



## ಧರ್ಮಗುರುಗಳ ಅವಶ್ಯಕತೆ ಸಮಾಜಕ್ಕೆ ಅಗತ್ಯವಾಗಿದೆ

**ಚಾಮರಾಜನಗರ:** ಜನಸೇವೆಗಾಗಿ ತಮ್ಮ ಇಡೀ ಜೀವಮಾನವನ್ನು ಮುಡಿಪಾಗಿಟ್ಟಿದ್ದ ರೆ.ಫಾ. ಎಸ್ .ಡಿ.ಜೋಸೆಫ್ ಅವರಂತಹ ಧರ್ಮಗುರುಗಳ ಅವಶ್ಯಕತೆ ಸಮಾಜಕ್ಕೆ ಅಗತ್ಯವಾಗಿದೆ ಎಂದು ಧರ್ಮಗುರು ಫಾದರ್ ಜ್ಞಾನ ಪ್ರಕಾಶ್ ಹೇಳಿದರು. ಚಾಮರಾಜನಗರ ತಾಲೂಕಿನ ನಾಗವಳ್ಳಿ ಗ್ರಾಮದ ಯೇಸುವಿನ ಪವಿತ್ರ ಹೃದಯ ದೇವಾಲಯದಲ್ಲಿ ಗುರುವಾರ ಆಯೋಜಿಸಿದ್ದ ನುಡಿನಮನ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು. ರೆ.ಫಾ. ಎಸ್ .ಡಿ.ಜೋಸ್ ಅವರು ಜನರ ಸೇವೆಗಾಗಿ ತಮ್ಮ ಜೀವಮಾನವನ್ನು ಮುಡಿಪಾಗಿಟ್ಟಿದ್ದರು. ಅವರ ದಾನ-ಧರ್ಮ ಸದಾಕಾಲ ನೆನಪಲ್ಲಿಡುವಂತದ್ದಾಗಿದೆ. ಉತ್ತಮ ಆದರ್ಶವಾದ ಜೀವನವನ್ನು ನಡೆಸಿದ್ದರು. ಇಂತಹ ಧರ್ಮಗುರುಗಳು ಪ್ರಸ್ತುತ ಸಮಾಜಕ್ಕೆ ಅಗತ್ಯವಾಗಿದೆ. ಅವರು ಎಳೆದುಕೊಂಡು ಬಂದಿರುವ ಧಾರ್ಮಿಕ ತೇರನ್ನು ಪ್ರತಿಯೊಬ್ಬರು ಸೇರಿ ಮುನ್ನಡೆಸಬೇಕಿದೆ ಎಂದು ಹೇಳಿದರು. ನಾಗವಳ್ಳಿ ಗ್ರಾಮದ ಯೇಸುವಿನ ಪವಿತ್ರ ಹೃದಯ ದೇವಾಲಯದಲ್ಲಿ ಸೇವೆ ಸಲ್ಲಿಸಿದ ಸಂಧರ್ಭದಲ್ಲಿ ಅನೇಕ ಅಭಿವೃದ್ಧಿ ಕೆಲಸಗಳನ್ನು ಮಾಡಿದ್ದರು. ದೇವಾಲಯ ನಿರ್ಮಾಣ, ಶಾಲೆ, ಆಸ್ಪತ್ರೆ ಹಾಗೂ ಮಹಿಳಾ ಸಂಘಗಳ ಸ್ಥಾಪನೆ ಮಾಡಿದ್ದರು. ಅವರ ಸೇವೆಯನ್ನು ಸ್ಮರಿಸುವುದು ನಮ್ಮೆಲ್ಲರ ಕರ್ತವ್ಯವಾಗಿದೆ ಎಂದು ತಿಳಿಸಿದರು.



# ಹುಲಿವಾನದಲ್ಲಿ ಮೂರು ದಿನ ಕ್ರಿಕೆಟ್ ಪಂದ್ಯಾವಳಿಗೆ ಚಾಲನೆ

**ಮಂಡ್ಯ:** ತಾಲ್ಲೂಕಿನ ಹುಲಿವಾನ ಗ್ರಾಮದಲ್ಲಿ ಮೂರು ದಿನ ನಡೆಯುವ ಕ್ರಿಕೆಟ್ ಪಂದ್ಯಾವಳಿಗೆ ಶಾಸಕರಾದ ಪಿ.ರವಿಕುಮಾರ್ ಗೌಡ, ಕೆ.ಎಂ.ಉದಯ್, ಲೋಕಸಭಾ ಪರಾಜಿತ ಅಭ್ಯರ್ಥಿ ಹಾಗೂ ಕಾಂಗ್ರೆಸ್ ಗ್ಯಾರಂಟಿ ಯೋಜನೆಯ ಉಪಾಧ್ಯಕ್ಷ ಸ್ಟಾರ್ ಚಂದ್ರು ಅವರು ಚಾಲನೆ ನೀಡಿದರು.

ಯಂಗ್ ಚಾಲೆಂಜರ್ ಯುವಕರ ಬಳಗ, ಗ್ರಾಮ ಪಂಚಾಯಿತಿ, ಹಾಲು ಉತ್ಪಾದಕರ ಸಹಕಾರ ಸಂಘ, ವ್ಯವಸಾಯ ಸೇವಾ ಸಹಕಾರ ಸಂಘ, ಮಹಿಳಾ ಸ್ವಸಹಾಯ ಸಂಘ ಸೇರಿದಂತೆ ಗ್ರಾಮಸ್ಥರ ಸಹಕಾರದಿಂದ ಆಯೋಜಿಸಿದ್ದ 'ಹುಲಿವಾನ ಪ್ರೀಮಿಯರ್ ಲೀಗ್' ಮತ್ತು ಕೆರಗೋಡು ಹೋಬಳಿ ಮಟ್ಟದ ಕ್ರಿಕೆಟ್ ಪಂದ್ಯಾವಳಿ ಆರಂಭವಾಯಿತು.

ಶಾಸಕ ಪಿ.ರವಿಕುಮಾರ್ಗೌಡ ಮಾತನಾಡಿ, ನಗರದಲ್ಲಿ ನಡೆಯುವ ಹಾಗೆ ಗ್ರಾಮೀಣ ಮಟ್ಟದಲ್ಲಿ ಯುವಕರು ಸೇರಿ ಕ್ರಿಕೆಟ್ ಆಯೋಜಿಸಿರುವುದು ಕ್ರೀಡಾ ಪ್ರೇಮವನ್ನು ತೋರಿಸುತ್ತದೆ. ಮುಂದಿನ ದಿನಗಳಲ್ಲಿ ಹೆಚ್ಚುಹೆಚ್ಚು ಅಭ್ಯಾಸ ಮಾಡಿ ಕ್ರೀಡೆಯಲ್ಲಿ ಭಾಗವಹಿಸುವುದರಿಂದ ಸಾಧನೆ ಮಾಡಬಹುದು ಎಂದು ತಿಳಿಸಿದರು.



ಮುಂದಿನ ದಿನಗಳಲ್ಲಿ ನಗರದ ಕ್ರೀಡಾಂಗಣದಲ್ಲಿ ಗ್ರಾಮೀಣ ಪ್ರತಿಭೆಯ ಕ್ರಿಡಾಪಟುಗಳನ್ನು ಕರೆತಂದು ಕ್ರೀಡೆ ಆಯೋಜಿಸುವ ಮೂಲಕ ಪ್ರೋತ್ಸಾಹ ನೀಡಲಾಗುವುದು. ಕ್ರೀಡೆಯಲ್ಲಿ ಸೋಲು ಗೆಲುವು ಸಹಜವಾಗಿರುತ್ತದೆ. ಕ್ರೀಡಾ ಸ್ಫೂರ್ತಿಯಿಂದ ಕ್ರೀಡಾ ಪಟುಗಳು ಭಾಗವಹಿಸಿ ಎಂದು ಕರೆ ನೀಡಿದರು. ಶಾಸಕ ಕದಲೂರು ಉದಯ್ ಮಾತನಾಡಿ, ಗ್ರಾಮೀಣ ಭಾಗದಲ್ಲಿ ಪ್ರತಿಭಾವಂತ ಕ್ರಿಡಾ ಪಟುಗಳು ಗುರುತಿಸುವ ಕೆಲಸವನ್ನು ಈ ಪಂದ್ಯಾವಳಿ ಮಾಡುವಂತಾಗಬೇಕು, ಇಂತಹ ಪಂದ್ಯವಾಳಿಗಳು ಗ್ರಾಮೀಣ ಭಾಗದಲ್ಲಿ ಹೆಚ್ಚು ನಡೆಯಬೇಕು. ಇದರಿಂದ ಗ್ರಾಮೀಣ ಪ್ರತಿಭೆಗಳನ್ನು ಗುರುತಿಸಲು ಸಾಧ್ಯವಾಗುತ್ತದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು. ಕಾಂಗ್ರೆಸ್ ಗ್ಯಾರಂಟಿ ಯೋಜನೆಯ ಉಪಾಧ್ಯಕ್ಷ ಸ್ಟಾರ್ ಚಂದ್ರು ಮಾತನಾಡಿ, ವಿಶ್ವದ ಅತ್ಯಂತ ಪ್ರಚಲಿತ ಕ್ರೀಡೆಗಳಲ್ಲಿ ಕ್ರಿಕೆಟ್ ಒಂದಾಗಿದೆ, ಇಂತಹ ಕ್ರಿಡಾ ಕೂಟ ಆಯೋಜಿಸಿರುವುದು ಉತ್ತಮ ಬೆಳವಣಿಗೆ, ಕ್ರಿಡಾ ಕೂಟದಲ್ಲಿ ಭಾಗವಹಿಸುವುದರಿಂದ ಆರೋಗ್ಯ ವೃದ್ಧಿಯಾಗಲಿದೆ ಎಂದು ಸಲಹೆ ನೀಡಿದರು. ಕಾರ್ಯಕ್ರಮದಲ್ಲಿ ಮನ್ಮುಲ್ ನಿರ್ದೇಶಕ ಯು.ಸಿ.ಶಿವಕುಮಾರ್, ಕಾಂಗ್ರೆಸ್ ಮುಖಂಡರಾದ ಕೆಬ್ಬಹಳ್ಳಿ ರಾಜು, ವಿಜಯ್ಕುಮಾರ್, ತಾ.ಪಂ.ಮಾಜಿ ಸದಸ್ಯ ಪ್ರಶಾಂತ್ಬಾಬು, ಮುಖಂಡರಾದ ಆನಂದ್, ವಿಜಯ್ ಕುಮಾರ್, ಸಿದ್ದರಾಮು, ಲಿಂಗರಾಜು, ಕಾಂತರಾಜು, ರಾಜೇಗೌಡ ಭಾಗವಹಿಸಿದ್ದರು.

# ಮೂಡಲಪಾಯ ಯಕ್ಷಗಾನ ಪ್ರಸಂಗವನ್ನು ಉಳಿಸಿ

**ತಿಪಟೂರು:** ಹಿರಿಯರ ಹಾಗೂ ಪುರಾತನ ಕಾಲದ ಕಲೆಯನ್ನು ಹಿಂದಿನ ದಿನಗಳ ಮನೆಮಾತಾಗಿರುವಂತೆ ಇಂದಿನ ದಿನಮಾನಗಳಲ್ಲೂ ಬೆಳೆಸುತ್ತಾ ಮುಂದಿನ ಪೀಳಿಗೆಗೆ ಉಳಿಸುವ ಉದ್ದೇಶದಿಂದ ಕಲೆಯ ಪ್ರದರ್ಶನವನ್ನು ನೀಡಲಾಗುತ್ತಿದೆ ಎಂದು ಬಿದರಾಂಬಿಕ ಮೂಡಲಪಾಯ ಯಕ್ಷಗಾನ ಮಂಡಳಿಯ ಭಾಗವತ್ ಮಂಜುನಾಥ್ ಹಾಗೂ ತಂಡದವರು ಅಭಿಪ್ರಾಯವನ್ನು ವ್ಯಕ್ತಪಡಿಸಿದರು.



ತಾಲೂಕಿನ ಹೊನ್ನವಳ್ಳಿ ಹೋಬಳಿಯ ಮಣಕೀಕೆರೆ ಗ್ರಾಮದ ಚಿಕ್ಕಮ್ಮ ಹಾಗೂ ಅಂಜನೇಯ ದೇವಾಸ್ಥಾನದ ಗೋಪುರ ಕಳಸದ ಮಂಡಲ ಪೂಜೆ ಪ್ರಯುಕ್ತ ದೇವಸ್ಥಾನದ ಆವರಣದಲ್ಲಿ ಮುನಿಯೂರಿನ ಬಸವಚಾರ್ ರಾಘವೇಂದ್ರ, ಡ್ರಾಮಾ ಸೀನರಿಯಲ್ಲಿ ಮತ್ತಿಹಳ್ಳಿ ಗ್ರಾಮದ ಬಿದರಾಂಬಿಕ ಕೃಪಾಪೋಷಿತ ಮೂಡಲಪಾಯ ಯಕ್ಷಗಾನ ಮಂಡಳಿಯ ತಂಡದಿಂದ ಅಂಬಿಕಾ ವಿಜಯ ಹಾಗೂ ರಕ್ತಬೀಜಾಸುರನ ವಧೆ ಎಂಬ ಮೂಡಲಪಾಯ ಯಕ್ಷಗಾನ ಪ್ರಸಂಗವನ್ನು ಅಭಿನಯದಲ್ಲಿ ಮಾತನಾಡಿದರು.

ಅಳಿವಿನ ಅಂಚಿನಲ್ಲಿರುವ ಮೂಡಪಾಯ ಯಕ್ಷಗಾನ ಕಲೆಯನ್ನು ನಶಿಸಲು ಬಿಡದೆ ಯಾವುದೇ ಸಂಭಾವನೆಯ ಅಪೇಕ್ಷೆ ಇಲ್ಲದೆ ಪ್ರಚಾರ ಹಾಗೂ ಪ್ರಸಾರವನ್ನು ಮಾಡುವ ಉದ್ದೇಶದಿಂದ ಮತ್ತಿಹಳ್ಳಿ ಗ್ರಾಮದ ರೈತಾಪಿ ಕುಟುಂಬಗಳ ಕಲಾವಿದರಿಂದ ಗ್ರಾಮ ಗ್ರಾಮಗಳಲ್ಲಿ ಕಲಾ ಪ್ರದರ್ಶನವನ್ನು ನೀಡಲಾಗುತ್ತಿದೆ.

ಯಕ್ಷಗಾನ ಪ್ರಸಂಗಗಳಲ್ಲಿ ಕಲೆ, ಸಾಹಿತ್ಯ, ನೃತ್ಯ, ಅಭಿನಯ, ಮಾತುಗಾರಿಕೆ, ಹಾಡುಗಾರಿಕೆ, ವಿವಿಧ ರೀತಿಯ ವೇಷ ಭೂಷಣದ ಉಡುಗೆ ತೊಡುಗೆಗಳನ್ನು ತೊಟ್ಟು ಗ್ರಾಮಾಂತರ ಪ್ರದೇಶದ ಹಾಗೂ ಹೈನುಗಾರಿಕೆ, ಕೃಷಿಯನ್ನು ನಂಬಿ ಜೀವನ ಕಟ್ಟಿಕೊಂಡಿರುವ ಕೃಷಿಕರು ತಮ್ಮ ಬಿಡುವಿನ ವೇಳೆಯಾದ ರಾತ್ರಿಯ ಸಮಯದಲ್ಲಿ ಕಲೆಯ ತರಬೇತಿಯನ್ನು ಪಡೆದುಕೊಂಡು ಇಲ್ಲಿಗೆ ಬಂದು ಕಲೆಯನ್ನು ಪ್ರದರ್ಶನ ಮಾಡಲಾಗುತ್ತಿದೆ, ಶಾಲಾ ಮಕ್ಕಳ ತಮ್ಮ ಬಿಡುವಿನ ವೇಳೆ ಕಲಿತ ಕುಣಿತದ ಕಲೆಯನ್ನು ಪ್ರದರ್ಶನ ಮಾಡಲು ಸದಾ ಸಿದ್ದರಾಗಿರುತ್ತಾರೆ ಎಂದು ತಿಳಿಸಿದರು.

ಭಗವತರಾಗಿ ಮುಖ್ಯ ಶಿಕ್ಷಕ ಮಂಜುನಾಥ್ ಮತ್ತಿಹಳ್ಳಿ, ಮೃದಂಗ ನಾಗರಾಜು.ಎಂ.ಎಂ, ಮುಖವೀಣೆ ಬಸವರಾಜು ಮತ್ತು ರಂಗನಾಥ ಬೇವಿನಹಳ್ಳಿ, ಹಿನ್ನೆಲೆಗಾಯಕ ಲೋಕೇಶ್ ಮತ್ತಿಹಳ್ಳಿ ಎಚ್.ಎಸ್ ಸಿದ್ದೇಗೌಡ ಹೊಸಹಳ್ಳಿ, ರಾಮಕೃಷ್ಣ ಬಿದರೆಗುಡಿ. ಭಾಗವತಿಕೆಯನ್ನು ನಡೆಸಿಕೊಟ್ಟು, ಶಾಲಾಮಕ್ಕಳಿಂದ ಶಾರದೆ ಹಾಗೂ ಬಾಲಕೃಷ್ಣ ಪಾತ್ರದಲ್ಲಿ ಅಭಿನಯ ಮಾಡಿದ್ದು ರಕ್ತಬೀಜಾಸುರನಾಗಿ ಉದಯ್ಕುಮಾರ್, ಆದಿಶಕ್ತಿ ಪಾತ್ರದಲ್ಲಿ ಎಮ್.ಡಿ.ಪುಟ್ಟರಾಜು, ಈಶ್ವರ ಅಭಿನಯದಲ್ಲಿ ಷಡಾಕ್ಷರಿ, ರಘು, ಚಿದಾನಂದ್, ಮುಂತಾದವರು ಭಾಗವಹಿಸಿದ್ದರು.

# ಪಂಚಾಯಿತಿ ಅಧ್ಯಕ್ಷ, ಉಪಾಧ್ಯಕ್ಷರ ವಿರುದ್ಧ ಆಕ್ರೋಶ

**ಮಡಿವಾಳ:** ಅಬ್ಬೆನಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗ್ರಾಮಗಳ ಅಭಿವೃದ್ಧಿಗೆ ಸಹಕಾರ ನೀಡದೆ ಸದಸ್ಯರಿಗೆ ಸ್ಪಂದಿಸದ ಗ್ರಾಮ ಪಂಚಾಯಿತಿ ಅಧ್ಯಕ್ಷ ಉಪಾಧ್ಯಕ್ಷರ ವಿರುದ್ಧ ಜಿಲ್ಲಾ ಉಪ ವಿಭಾಗಾಧಿಕಾರಿಗಳ ಅಧ್ಯಕ್ಷತೆಯಲ್ಲಿ ನಡೆಯಲಿದ್ದ ಅವಿಶ್ವಾಸ ನಿರ್ಣಯ ಸಭೆಗೆ ಅಧ್ಯಕ್ಷ ಉಪಾಧ್ಯಕ್ಷರು ಉಚ್ಚ ನ್ಯಾಯಾಲಯದಿಂದ ಸಭೆಯನ್ನು ಮುಂದೂಡುವಂತೆ ತಡೆಯಾಜ್ಞೆ ತಂದ ಹಿನ್ನೆಲೆಯಲ್ಲಿ ಶುಕ್ರವಾರ ನಡೆಯಬೇಕಾಗಿದ್ದ ಸಭೆಗೆ ಹಾಜರಾಗಿದ್ದ 12 ಗ್ರಾಪಂ ಸದಸ್ಯರು ಅಧ್ಯಕ್ಷ ಉಪಾಧ್ಯಕ್ಷರ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ಈ ಸಂದರ್ಭದಲ್ಲಿ ಮಾತನಾಡಿದ ತಂಬಿಹಳ್ಳಿ ಗ್ರಾಮದ ಸದಸ್ಯ ಶ್ರೀನಿವಾಸ್ ಕಳೆದ 15 ತಿಂಗಳ ಹಿಂದೆ ಅಧಿಕಾರ ವಹಿಸಿಕೊಂಡ ಅಧ್ಯಕ್ಷ ಜಮುನಾ ಬಾಯಿ, ಉಪಾಧ್ಯಕ್ಷ ಜೈರಾಮ್, ಅವರು ಗ್ರಾಮಗಳ ಅಭಿವೃದ್ಧಿಗೆ ಸ್ಪಂದಿಸುತ್ತಿಲ್ಲ ಸಾಮಾನ್ಯ ಸಭೆಯಲ್ಲಿ ಸದಸ್ಯರು ಅವರ ಗ್ರಾಮಗಳ ಸಮಸ್ಯೆಗಳನ್ನು ಹೇಳಿದರು, ಸಹ ಆಲಿಸುವುದಿಲ್ಲ ಪಂಚಾಯಿತಿ ಅಭಿವೃದ್ಧಿಗೆ ಅಧಿಕಾರಿಗಳು ಸಹ ಅಧ್ಯಕ್ಷರ ಜೊತೆ ಸೇರಿಕೊಂಡು ನಮ್ಮ ಗ್ರಾಮಗಳ ಅಭಿವೃದ್ಧಿಗೆ ಸಹಕಾರ ನೀಡುತ್ತಿಲ್ಲ ಕ್ರಿಯಾಯೋಜನೆ ಅಭಿವೃದ್ಧಿ ಕೆಲಸಗಳು ಆಗಿಲ್ಲ ಲೈನ್ ಮ್ಯಾನ್ ಇಲ್ಲ ಗ್ರಾಮ ಪಂಚಾಯಿತಿ ಕಟ್ಟಡ ಅರ್ಧಕ್ಕೆ ನಿಂತಿದೆ ಎಂದು ಆರೋಪಿಸಿದರು. ಅಧ್ಯಕ್ಷರ ಪುತ್ರ ಲಕ್ಕನ್ ಸಿಂಗ್ ಅವರು ವಿನಾಕಾರಣ ಗ್ರಾಮ ಪಂಚಾಯಿತಿ ಆಡಳಿತದಲ್ಲಿ ಹಸ್ತಕ್ಷೇಪದಿಂದ ಅಧ್ಯಕ್ಷರು ದೂರಾಡಳಿತವನ್ನು ನೀಡುತ್ತಿದ್ದಾರೆ ಗ್ರಾಮಗಳ ಅಭಿವೃದ್ಧಿ ಕೆಲಸಗಳು ಮಾಡಲು ಸಹ ಬಿಡುತ್ತಿಲ್ಲ ಸದಸ್ಯರ ಗಮನಕ್ಕೆ ತರದೆ ಕೆಲವು ಅಭಿವೃದ್ಧಿ ಕೆಲಸಗಳನ್ನು ಮಾಡಲಾಗಿದೆ ಸದಸ್ಯರನ್ನು ಕಡೆಗಣಿಸುತ್ತಿದ್ದಾರೆ, ಈ ಬಗ್ಗೆ ತಾ.ಪಂ ಇಒ, ಜಿಲ್ಲಾ ಪಂಚಾಯಿತಿ ಸಿಇಒ, ಜಿಲ್ಲಾಧಿಕಾರಿಗಳು ಸಹ ದೂರು ನೀಡಲಾಗಿತ್ತು, ಆದರೆ ಇದುವರೆಗೂ ಯಾವುದೇ ಪ್ರಯೋಜನವಾಗಿಲ್ಲ, ಎರಡನೇ ಅವಧಿಗೆ ನಾವೇ ಅಧ್ಯಕ್ಷರನ್ನು ಆಯ್ಕೆ ಮಾಡಿದ್ದು, ಅವರ ದುರಾಡಳಿತದಿಂದ ಬೇಸತ್ತು ಹೋಗಿದ್ದೇವೆ, 12 ಸದಸ್ಯರು ಒಗ್ಗಟ್ಟಾಗಿ ಪಕ್ಷತೀತವಾಗಿ ಜಿಲ್ಲಾ ಉಪ ವಿಭಾಗಾಧಿಕಾರಿ ಅವರಿಗೆ ಅಧ್ಯಕ್ಷ ಉಪಾಧ್ಯಕ್ಷರ ವಿರುದ್ಧ ಅವಿಶ್ವಾಸ ನಿರ್ಣಾಯಕ ಕೈಗೊಳ್ಳಲು ಮನವಿ ಸಲ್ಲಿಸಿದ್ದೆವು ಅದರಂತೆ ಜಿಲ್ಲಾ ಉಪವಿಬಾಧಿಕಾರಿಗಳು ಶುಕ್ರವಾರ ಅವಿಶ್ವಾಸ ನಿರ್ಣಯ ಸಭೆಯ ದಿನಾಂಕವನ್ನು ನಿಗದಿಪಡಿಸಿದ್ದರು, ಆದರೆ ಅಧ್ಯಕ್ಷ ಉಪಾಧ್ಯಕ್ಷರು ತಮ್ಮ ಅಧಿಕಾರವನ್ನು ಉಳಿಸಿಕೊಳ್ಳಲು ಉಚ್ಚ ನ್ಯಾಯಾಲಯದಿಂದ ಅವಿಶ್ವಾಸ ನಿರ್ಣಯ ಸಭೆಗೆ ತಡೆಯಜ್ಞೆ ತಂದಿದ್ದಾರೆ, ನಾವೆಲ್ಲರೂ ನ್ಯಾಯಾಲಯದ ಆದೇಶವನ್ನು ಗೌರವಿಸುತ್ತೇವೆ ಆದರೆ ಅಭಿವೃದ್ಧಿಗೆ ಸಹಕಾರ ನೀಡದ ಅಧ್ಯಕ್ಷರ ಧೋರಣೆಯನ್ನು ವಿರೋಧಿಸುವುದಾಗಿ ಹೇಳಿದರು.



ಅಭಿವೃದ್ಧಿ ಅಧಿಕಾರಿಗಳು ಸಮಯಕ್ಕೆ ಸರಿಯಾಗಿ ಕಚೇರಿಗೆ ಬರುತ್ತಿಲ್ಲ ಸದಸ್ಯರ ಸಮಸ್ಯೆಗಳನ್ನು ಆಲಿಸಿ ಬಗೆಹರಿಸುವಲ್ಲಿ ವಿಫಲರಾಗಿದ್ದಾರೆ ಎಂದು ದೂರಿದರು.

## ಪುಸ್ತಕ ಮಾರಾಟ

**ಬೆಂಗಳೂರು:** ಬೆಂಗಳೂರಿನ ಬಸವನಗುಡಿಯರಾಮಕೃಷ್ಣ ಮಠದಲ್ಲಿಇಂದ 2025 ರಜನವರಿ 14ರವರೆಗೆವಿಶೇಷ ಪುಸ್ತಕ ಪ್ರದರ್ಶನ ಮತ್ತು ಮಾರಾಟ ಮೇಳಆಯೋಜಿಸಲಾಗಿದೆ.

ಈ ವೇಳೆ ಪುಸ್ತಕಗಳಿಗೆ ಶೇಕಡ 10 ರಿಂದ 50ರವರೆಗೆ ವಿಶೇಷರಿಯಾಯಿತಿ ನೀಡಲಾಗುತ್ತದೆ.

ಇಂದು ಮಠದಆವರಣದಲ್ಲಿಪೂಜ್ಯ ಸ್ವಾಮಿ ನಿತ್ಯಸ್ಥಾನಂದಜೀ ಪುಸ್ತಕ ಪ್ರದರ್ಶನ ಮತ್ತು ಮಾರಾಟ ಮೇಳದ ಉದ್ಘಾಟನೆ ನೆರವೇರಿಸಿದರು.

ಮೇಳದಲ್ಲಿ ರಾಮಕೃಷ್ಣ-ವಿವೇಕಾನಂದ ಹಾಗೂ ವೇದಾಂತ ಸಾಹಿತ್ಯ, ಧ್ಯಾನ-ಯೋಗದಕುರಿತ ಗ್ರಂಥಗಳು, ವ್ಯಕ್ತಿತ್ವವಿಕಾಸನ, ಚಾರಿತ್ರ್ಯ ನಿರ್ಮಾಣಕುರಿತ ಪುಸ್ತಕಗಳು, ಮಕ್ಕಳಿಗೆ ರಾಮಾಯಣ, ಮಹಾಭಾರತ, ಪುರಾಣ ಕಥೆಗಳ ಚಿತ್ರಕಥೆಗಳ ಪುಸ್ತಕಗಳು ಸೇರಿದಂತೆ ಹಲವಾರು ಪುಸ್ತಕಗಳು ಲಭ್ಯವಿದೆ. ಆಸಕ್ತರು ಈ ಪುಸ್ತಕ ಮೇಳದ ಪ್ರಯೋಜನ ಪಡೆಯಬಹುದಾಗಿದೆಎಂದು ಮಠದ ಪ್ರಕಟಣೆ ತಿಳಿಸಿದೆ.



## ಶ್ರದ್ಧಾಂಜಲಿ ಸಭೆಯಲ್ಲಿ ಸಿಂಗ್ ಅವರಿಗೆ ನಮನ

**ಮಡಿವಾಳ:** ದೇಶದ ಅತ್ಯಂತ ಪ್ರತಿಷ್ಠಿತ ಮುಖಂಡರಲ್ಲಿ ಒಬ್ಬರಾಗಿದ್ದ ಮಾಜಿ ಪ್ರಧಾನಿ ಅರ್ಥಶಾಸ್ತ್ರಜ್ಞ ಸರ್ಕಾರದ ವಿವಿಧ ಹುದ್ದೆಗಳಲ್ಲಿ ಸೇವೆ ಸಲ್ಲಿಸಿ ದೇಶದ ಭದ್ರ ಭುನಾದಿ ಹಾಕುವಲ್ಲಿ ಪ್ರಮುಖ ಪಾತ್ರ ವಹಿಸಿದ್ದ ಮಾಜಿ ಪ್ರದಾನಿ ಮನಮೋಹನ್ ಸಿಂಗ್ ಅವರನ್ನು ದೇಶ ಕಳೆದುಕೊಂಡಂತ್ತಾಗಿದೆ ಎಂದು ಮಡಿವಾಳ ಗ್ರಾ.ಪಂ. ಸದಸ್ಯ ಸಿ.ಎಂ.ವೆಂಕಟೇಶ್ ಹೇಳಿದರು.

ತಾಲ್ಲೂಕಿನ ಮಡಿವಾಳ ಗ್ರಾ.ಪಂ.ನ ಚೊಕ್ಕಂಡಹಳ್ಳಿ ಗ್ರಾಮದಲ್ಲಿ ಡಾ.ಮನಮೋಹನ್ ಸಿಂಗ್ ಅವರಿಗೆ ಹಮ್ಮಿಕೊಂಡಿದ್ದ ಶ್ರದ್ಧಾಂಜಲಿ ಸಭೆಯಲ್ಲಿ ನುಡಿನ ನಮನ ಅರ್ಪಿಸಿ ಮಾತನಾಡಿದರು. ಡಾ.ಮನಮೋಹನ್ ಸಿಂಗ್ ಅವರು ಕೇಂದ್ರದಲ್ಲಿ 2 ಬಾರಿ ಪ್ರಧಾನ ಮಂತ್ರಿಗಳಾಗಿ ಆರ್ಥಿಕತೆಗೆ ಕೈಗೊಂಡ ಸುಧಾರಣೆಗಳಿಂದ ದೇಶದ ಆರ್ಥಿಕ ಸ್ಥಿತಿ ಉತ್ತಮವಾಗಿದೆ. ಜನಸಮಾನ್ಯರಿಗಾಗಿ ಆಹಾರ ಭದ್ರತೆ ಕಾಯ್ದೆ, ಆರ್.ಟಿ.ಇ, ಎಂ.ಎನ್.ಆರ್.ಇ.ಜಿಎ, ಆಧಾರ್ ಕಾರ್ಡ್ ಯೋಜನೆಗಳನ್ನು ಜಾರಿಗೊಳಿಸಿದ್ದರು. ಅವರ ನಿಧನದಿಂದ ತಿವ್ರ ದುಖಃವಾಗಿದ್ದು, ಅಪ್ರತಿಮ ಬುದ್ದಿವಂತಿಕೆಯ ರಾಜ ನಿತಿಜ್ಞ ನಮ್ಮ ರಾಷ್ಟ್ರದ ಮೇಲೆ ಅಳೆಸಲಾಗದ ಗುರುತು ಮಾಡಲಾಗಿದೆ.

ಭಾರತದ ಆರ್ಥಿಕ ಇತಿಹಾಸದಲ್ಲಿ ಒಂದು ಮಹತ್ವದ ತಿರುವು ಮೂಡಿತು. 1991ರಿಂದ 1996ರವರೆಗೆ ಡಾ. ಸಿಂಗ್ ಅವರು ಭಾರತದ ಹಣಕಾಸು ಸಚಿವರಾಗಿ ಸೇವೆ ಸಲ್ಲಿಸಿದ್ದರು. ಅವರು ಆಗ ಮಾಡಿದ ಆರ್ಥಿಕ ಸುಧಾರಣೆಗಳಿಗೆ ಈಗಲೂ ವಿಶ್ವದ ಮನ್ನಣೆ ಇದೆ. ಜನಪ್ರಿಯದೃಷ್ಟಿಕೋನದಿಂದ ನೋಡುವುದಾದರೆ ಭಾರತದ ಅಂದಿನ ದಿನಗಳು ಡಾ. ಸಿಂಗ್ ಅವರ ವ್ಯಕ್ತಿತ್ವವನ್ನು ಬಿಂಬಿಸುತ್ತವೆ. ಡಾ. ಸಿಂಗ್ ಅವರು ಸಾಮಾಜಿಕ ಕ್ಷೇತ್ರದ ತಮ್ಮ ಅದ್ವಿತೀಯ ಸಾಧನೆಗಾಗಿ ಹತ್ತು ಹಲವು ಪ್ರಶಸ್ತಿಗಳಿಗೆ ಭಾಜನರಾಗಿದ್ದಾರೆ ಮುಖಂಡರುಗಳಾದ ನಂದಕುಮಾರ್, ರೇವಣ್ಣ, ಚನ್ನಾಚಾರಿ, ಮಾಜಿ ಗ್ರಾ.ಪಂ. ಸದಸ್ಯ ಸಿ.ಎಂ.ರಾಮಣ್ಣ, ಶೋಭನ್ ಬಾಬು, ಮುನಿರಾಜು, ಹನುಮನಾಯಕನಹಳ್ಳಿ ಮುನಿರಾಜಪ್ಪ, ವೆಂಕಟೇಶ್, ಇರಬನಹಳ್ಳಿ ಚಂದ್ರಶೇಖರ್, ಇನ್ನಿತರರು ಹಾಜರಿದ್ದರು.



## ವಿಮಾ ಹಣಕ್ಕಾಗಿ ತಂದೆಯನ್ನೇ ಕೊಂದ ಮಗ

**ಪಿರಿಯಾಪಟ್ಟಣ:** ವಿಮೆ ಹಣಕ್ಕಾಗಿ ತಂದೆಯನ್ನು ಮಗನೆ ಕೊಲೆ ಮಾಡಿರುವ ಘಟನೆ ಬೈಲಕುಪ್ಪೆ ಪೊಲೀಸ್ ಠಾಣಾ ವ್ಯಾಪ್ತಿಯಲಿ ನಡೆದಿದೆ. ತಾಲೂಕಿನ ಕೊಪ್ಪ ಸಮೀಪದ ಡೋಂಗ್ರಿ, ಗೇರಾಸಿಯ ಕಾಲೋನಿಯಲ್ಲಿ ವಾಸವಾಗಿದ್ದ ಅಣ್ಣಪ್ಪ (55) ಎಂಬುವವರೆ ಕೊಲೆಯಾಗಿರುವ ದುರ್ದೈವಿಯಾಗಿದ್ದಾರೆ.

ಮೃತ ಅಣ್ಣಪ್ಪನು ಡಿ. 25 ರಂದು ಬೈಲಕುಪ್ಪೆ ಸಮೀಪದ ಗುಳ್ಳೆದಳ್ಳ ಅರಣ್ಯ ಪ್ರದೇಶದಲ್ಲಿ ಶವವಾಗಿ ಪತ್ತೆಯಾಗಿದ್ದನ್ನು.ನಂತರ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಿದ ವೃತ್ತ ನಿರೀಕ್ಷಕ ದೀಪಕ್ ಮತ್ತು ಪಿ ಎಸ್ ಐ ಅಜಯ್ ಕುಮಾರ್ ರವರುಗಳು ಈತನ ಮಗನಾದ ಪಾಂಡು ಎಂಬಾತನನ್ನು ವಿಚಾರಣೆಗೋಳಪಡಿಸಿದಾಗಭಾರತೀಯ ಜೀವಾ ವಿಮೆಯಲ್ಲಿ ನನ್ನ ತಂದೆ ವಿಮೆ ಮಾಡಿಸಿದ್ದರು.ಮರಣ ನಂತರ ಬರುವ ವಿಮೆ ಹಣಕ್ಕಾಗಿ ನಾನೆ ಕೊಲೆ ಮಾಡಿರುವುದಾಗಿ ಒಪ್ಪಿಕೊಂಡಿದ್ದಾನೆ. ತನಿಖೆ ಮುಂದುವರೆಸಿರುವ ಪೊಲೀಸ್ ಇಲಾಖೆಯು ಆರೋಪಿಯನ್ನು ಬಂಧಿಸಿ ಕಾನೂನು ಕ್ರಮಕ್ಕೆ ನ್ಯಾಯಾಂಗಕ್ಕೆ ಒಪ್ಪಿಸಿದ್ದಾರೆ.

# ಕೋಲಾರದಲ್ಲಿ ರಾಜ್ಯ ಅಂಗನವಾಡಿ ಕಾರ್ಯಕರ್ತೆಯರ ಸಭೆ

**ಕೋಲಾರ:** ಕೋಲಾರದ ಪತ್ರಕರ್ತರ ಭವನದಲ್ಲಿ ಇಂದು ನಡೆಯಬೇಕಿದ್ದ ಕರ್ನಾಟಕ ರಾಜ್ಯ ಅಂಗನವಾಡಿ ಕಾರ್ಯಕರ್ತೆಯರ ಮಹಾಮಂಡಳಿ ಜಿಲ್ಲಾಮಟ್ಟದ ಅಂಗನವಾಡಿ ಕಾರ್ಯಕರ್ತೆಯರ ಸಭೆಯ ಮಾಜಿ ಪ್ರಧಾನಿ ಮನಮೋಹನ್ ಸಿಂಗ್ ಅವರ ನಿಧನದ ಸಲುವಾಗಿ ಸಂಘದ ವತಿಯಿಂದ ಶ್ರದ್ಧಾಂಜಲಿ ಸಭೆ ನಡೆಸಿ ಶ್ರದ್ಧಾಂಜಲಿ ಅರ್ಪಿಸಿ ಮೌನಾಚರಿಸಲಾಯಿತು. ಸಭೆಯಲ್ಲಿ ಬೇಡಿಕೆಗಳನ್ನು ಈಡೇರಿಸಲು ಸರ್ಕಾರ ಕೂಡಲೇ ಗಮನ ಹರಿಸಬೇಕೆಂದು ಸರ್ವಾನುಮತದ ತೀರ್ಮಾನ ಕೈಗೊಳ್ಳಲಾಯಿತು. ಗುಜರಾತ್ ಹೈಕೋರ್ಟ್ ತೀರ್ಪಿನಂತೆ ಕಾರ್ಯಕರ್ತೆ, ಸಹಾಯಕಿಯರನ್ನು ವರ್ಗ 3 ಮತ್ತು 4 ಎಂದು ಪರಿಗಣಿಸಿ ಖಾಯಂ ಮಾಡಬೇಕು, ಮ.ಮ.ಇ 14 ಐಸಿಡಿ 2023 ರ ಆದೇಶದ ಪ್ರಕಾರ ಕೂಡಲೇ ಗ್ರ್ಯಾಚ್ಯುಟಿ ಹಣ ಬಿಡುಗಡೆ ಮಾಡಿ ಮತ್ತು ಎಲ್ಲರಿಗೂ ಅನ್ವಯಿಸಲಿ, 2018 ರಿಂದ ಕೇಂದ್ರ, ಸರ್ಕಾರ ಯಾವುದೇ ಗೌರವಧನ ಹೆಚ್ಚಳ ಮಾಡಿಲ್ಲವಾದ್ದರಿಂದ ಸರ್ಕಾರವು 26 ಸಾವಿರ ರೂಗಳಿಗೆ ಗೌರವಧನ ಹೆಚ್ಚಿಸಬೇಕು, ಕೋಲಾರ ಜಿಲ್ಲೆಯಲ್ಲಿ ಅಂಗನವಾಡಿ ಕಾರ್ಯಕರ್ತೆ ಮತ್ತು ಸಹಾಯಕಿಯರು ಮರಣ ಹೊಂದಿದಾಗ ಅಂತ್ಯಸಂಸ್ಕಾರಕ್ಕೆ 10 ಸಾವಿರ ರೂಗಳು ನೀಡಬೇಕೆಂದು ಸುಮಾರು ಬಾರಿ ಮನವಿ ನೀಡಿದರೂ ಇದುವರೆಗೆ ನೀಡಿರುವುದಿಲ್ಲ, ಜಿಲ್ಲೆಯಲ್ಲಿ ಅಂಗನವಾಡಿ ಸಹಾಯಕಿ ಸ್ಥಾನಗಳು ತೆರವಾಗಿದ್ದು, ಒಂದುವರೆ ವರ್ಷವಾದರೂ ಇನ್ನು ಆಯ್ಕೆಯಾಗಿರುವುದಿಲ್ಲ. ಆದ್ದರಿಂದ ಕಾರ್ಯಕರ್ತೆಯರಿಗೆ ಹೆಚ್ಚಿನ ಹೊರೆಯಾಗಿದೆ, ಜಿಲ್ಲೆಯಲ್ಲಿ ಒಂದು ವರ್ಷದಿಂದ ಅಂಗನವಾಡಿ ಕೇಂದ್ರಗಳಿಗೆ ಅಡಿಗೆ ಅನೀಲದ ಹಣವನ್ನು ಬಿಡುಗಡೆ ಮಾಡಿರುವುದಿಲ್ಲ. ಕಾರ್ಯಕರ್ತೆಯರ ಸ್ವಂತ ಖರ್ಚಿನಿಂದ ಕೇಂದ್ರ ನಡೆಸಬೇಕಾದ ಪರಿಸ್ಥಿತಿ ಬಂದಿದೆ, ಕೇಂದ್ರದ ಸ್ವಚ್ಚತೆ ಹಾಗೂ ಶಾಲಾ ಪೂರ್ಣ ಶಿಕ್ಷಣಕ್ಕೆ ಬಳಸುವ ಸಾಧಿಲ್ವಾರು ಹಣ ಎರಡು ವರ್ಷದಿಂದ ನೀಡಿರುವುದಿಲ್ಲ ಕೂಡಲೇ ಕ್ರಮ ವಹಿಸಬೇಕು, ಎಲ್ಲಾ ಅಂಗನವಾಡಿ ಕೇಂದ್ರಗಳಿಗೆ ಶುದ್ದ ಕುಡಿಯುವ ನೀರಿನ ವಾಟರ್ ಪಿಲ್ಟರ್ ಮಂಜೂರು ಮಾಡಬೇಕೆಂದು ಆಗ್ರಹಿಸಿದರು.



ಕಾರ್ಯಕರ್ತೆ ಮತ್ತು ಸಹಾಯಕಿಯರಿಗೆ ಗುಣಮಟ್ಟದ ಸಮವಸ್ತ ನೀಡಿರುವುದಿಲ್ಲ. ಕಳಪೆ ಸೀರೆಗಳನ್ನು ಪ್ರತಿದಿನ ಕೇಂದ್ರದಲ್ಲಿ ಮತ್ತು ಮಾಸಿಕ ಸಭೆಗಳಲ್ಲಿ ಕಡ್ಡಾಯವಾಗಿ ಧರಿಸಬೇಕೆಂದು ತಿಳಿಸಿರುತ್ತಾರೆ, ಗ್ಯಾಸ್ ಸ್ಟೌವ್ ಮತ್ತು ಗ್ಯಾಸ್ ಪೈಪ್ ನೀಡಿ ಸುಮಾರು ವರ್ಷಗಳಾಗಿದ್ದು, ಎಲ್ಲಾ ಹಾಳಾಗಿರುತ್ತವೆ. ಇದರಿಂದ ಮಕ್ಕಳಿಗೆ ಅನಾಹುತವಾದಲ್ಲಿ ಜವಾಬ್ದಾರರು ಯಾರು. ಆದ್ದರಿಂದ ಸುಮಾರು ಬಾರಿ ಮನವಿ ಇಲಾಖೆಗೆ ನೀಡಲಾಗಿದೆ, ಅಂಗನವಾಡಿ ಕೇಂದ್ರದ ಮಕ್ಕಳಿಗೆ ನೀಡುತ್ತಿರುವ ಆಹಾರ ಪದಾರ್ಥಗಳು ಸರಿಯಾಗಿ ಮಕ್ಕಳು ಊಟ ಮಾಡುತ್ತಿಲ್ಲ, ಆದ್ದರಿಂದ ಅವರು ತಿನ್ನುವಂತಹ ಹೆಸರು ಕಾಳು, ಚಿಕ್ಕಿ, ಅನ್ನ, ಸಾಂಬರ್, ಹಾಲು ಮೊಟ್ಟೆ ನೀಡಬೇಕು, 6 ತಿಂಗಳಿಂದ 3 ವರ್ಷದ ಮಕ್ಕಳಿಗೆ ಮನೆಗೆ ನೀಡುತ್ತಿರುವ ಆಹಾರ ಪದಾರ್ಥಗಳನ್ನು ಈಗ ಪೋಟೋ ಕ್ಯಾಪ್ಚರ್ ಹಾಗೂ ಫಲಾನುಭವಿಯೇ ಖುದ್ದಾಗಿ ಬಂದು ಪಡೆಯಬೇಕು. ಅವರ ಮೊಬೈಲ್ ಸಹ ಕೇಂದ್ರಕ್ಕೆ ತೆಗೆದುಕೊಂಡು ಬರಬೇಕು. ಆದ್ದರಿಂದ ಫಲಾನುಭವಿಗಳು ಆಹಾರ ಪದಾರ್ಥಗಳನ್ನು ಪಡೆಯಲು ನಿರಾಕರಿಸುತ್ತಿದ್ದಾರೆ. ಪೋಷಣ್ ಟ್ರಾಕ್ಟರ್‌ನಿಂದ ಅಂಗನವಾಡಿ ಕೇಂದ್ರದ ಎಲ್ಲಾ ಕೆಲಸಗಳನ್ನು ಅಂದರೆ 1) ಕೇಂದ್ರ ತೆರೆಯುವುದು, 2) ಮಕ್ಕಳ ಹಾಜರಾತಿ, 3) ಬೆಳಗಿನ ತಿಂಡಿ, 4) ಚಟುವಟಿಕೆಗಳು, 5) ಮದ್ಯಾಹ್ನ ಉಪಹಾರದ ನಂತರ 6) ಮಕ್ಕಳ ಫಲಾನುಭವಿಗಳ ದಾಖಲಾತಿ, 15) ಆಧಾರ್ ಸೀಡಿಂಗ್, 16) ಮೊಬೈಲ್ ನಂಬರ್ ವೆರಿಫಿಕೇಷನ್, ಈ ಎಲ್ಲಾ ಕೆಲಸಗಳನ್ನು ಮೊಬೈಲ್‌ನಲ್ಲೇ ಮಾಡಬೇಕು. ಇಲ್ಲವಾದಲ್ಲಿ ಸಂಬಳ ನಿಲ್ಲಿಸುತ್ತಿದ್ದಾರೆ. ಪ್ರತಿದಿನ ಕಿರುಕುಳ ನೀಡುತ್ತಿದ್ದಾರೆ. ಕಾರ್ಯಕರ್ತೆಯರ ಆರೋಗ್ಯ ಹಾಳಾಗುತ್ತಿದೆ ಎಂದರು.

### ಸಾರ್ವಜನಿಕರ ವಂತಿಕೆಯಿಂದ ಕಟ್ಟಿದ್ದ ಟ್ಯಾಂಕ್ ನಿರ್ಲಕ್ಷ್ಯ

# ನೀರೇ ಕಾಣದ ಓವರ್ ಹೆಡ್ ಟ್ಯಾಂಕ್

**ಹುಳಿಯಾರು:** ಅಧಿಕಾರಿಗಳಿಗೆ ಕರ್ತವ್ಯದ ಪ್ರಜ್ಞೆ ಮತ್ತು ಜನಪ್ರತಿನಿಧಿಗಳಿಗೆ ಇಚ್ಚಾಶಕ್ತಿ ಇಲ್ಲದಿದ್ದರೆ ಸಾರ್ವಜನಿಕರ ಹಣ ಹೇಗೆ ವ್ಯರ್ಥವಾಗುತ್ತದೆ ಎನ್ನುವುದಕ್ಕೆ ಹುಳಿಯಾರು ಪಟ್ಟಣ ಪಂಚಾಯ್ತಿಯ ಪದವಿ ಕಾಲೇಜಿನ ಪಕ್ಕದಲ್ಲಿರುವ ನೀರಿನ ಓವರ್ ಹೆಡ್ ಟ್ಯಾಂಕ್ ನಿದರ್ಶನವಾಗಿದೆ. ಈ ಟ್ಯಾಂಕ್ ಕಟ್ಟಿ ಬರೋಬ್ಬರಿ ಹದಿನೈದು ವರ್ಷಗಳು ಕಳೆದಿದ್ದರೂ ಇಲ್ಲಿಯವರೆಗೂ ಒಂದೇ ಒಂದು ಹನಿ ನೀರನ್ನು ಟ್ಯಾಂಕ್ ಕಂಡಿಲ್ಲ.

ಹೌದು, ಹುಳಿಯಾರು ಪಟ್ಟಣ ಪಂಚಾಯ್ತಿ ವ್ಯಾಪ್ತಿಯ ಲಿಂಗಪ್ಪನಪಾಳ್ಯ, ಸೋಮಜ್ಜನಪಾಳ್ಯ, ವೈ.ಎಸ್.ಪಾಳ್ಯ ಗ್ರಾಮಗಳ ನೀರಿನ ಬವಣೆ ನೀಗಿಸುವ ಸಲುವಾಗಿ 2007 ರಲ್ಲಿ ಸ್ವಜಲದಾರೆ ಯೋಜನೆಯಡಿ ಲಕ್ಷಾಂತರ ಹಣ ವ್ಯಯಿಸಿ ಪದವಿ ಕಾಲೇಜು ಪಕ್ಕದಲ್ಲಿ ಓವರ್ ಹೆಡ್ ಟ್ಯಾಂಕ್ ಕಟ್ಟಲಾಗಿತ್ತು. ಈ ಟ್ಯಾಂಕ್‌ಗೆ ಹುಳಿಯಾರು ಕೆರೆಯಲ್ಲಿನ ಕೊಳವೆಬಾವಿಯಿಂದ ನೀರು ಪೂರೈಸಿ ಈ ಮೂರು ಹಳ್ಳಿಗಳಿಗೆ ಸಮರ್ಪಕವಾಗಿ ನೀರು ಪೂರೈಸುವುದು ಉದ್ದೇಶವಾಗಿತ್ತು. ಆದರೆ ಇಲ್ಲಿಯವರೆವಿಗೆ ಈ ಟ್ಯಾಂಕ್‌ಗೆ ಒಂದೇ ಒಂದು ದಿನ ನೀರು ತುಂಬಿಸಿದ ನಿದರ್ಶನವಿಲ್ಲ. ಲಿಂಗಪ್ಪನಪಾಳ್ಯದ ನೂರಾರು ಮನೆಗಳಿಗೆ ಇರುವ ಏಕೈಕ ಕೊಳವೆಬಾವಿಯಿಂದ ನೀರು ಪೂರೈಸಲಾಗುತ್ತಿದೆ. ಈ ಕೊಳವೆಬಾವಿ ಕೆಟ್ಟು ರಿಪೇರಿ ಮಾಡಿಸಲು ತಿಂಗಳುಗಟ್ಟಲೆ ಹಿಡಿದು ಜನ ಪಂಚಾಯ್ತಿ ಮುಂದೆ ಬಂದು ನೀರಿಗಾಗಿ ಗಲಾಟೆ ಮಾಡಿದಾಗಲೂ ಸಹ ಈ ಓವರ್ ಹೆಡ್ ಟ್ಯಾಂಕ್ ಸದ್ಬಳಕೆ ಮಾಡಿಕೊಳ್ಳುವ ಆಸಕ್ತಿಯನ್ನು ಪಂಚಾಯ್ತಿ ಅಧಿಕಾರಿಗಳು, ಜನಪ್ರತಿನಿಧಿಗಳು ತೋರಲಿಲ್ಲ. ಸೋಮಜ್ಜನಪಾಳ್ಯ, ವೈ.ಎಸ್.ಪಾಳ್ಯ ಗ್ರಾಮಗಳಲ್ಲಿ ಬೇಸಿಗೆ ಸಂದರ್ಭದಲ್ಲಿ ನೀರಿನ ಹಾಹಾಕಾರ ಎದುರಾದಗಲೂ ಟ್ಯಾಂಕ್ ಬಳಸಲು ಮುಂದಾಗಲಿಲ್ಲ. ಪರಿಣಾಮ ಲಕ್ಷಾಂತರ ಹಣ ವ್ಯಯಿಸಿ ನಿರ್ಮಿಸಿದ ಟ್ಯಾಂಕ್ ಇಂದು ನಿರುಪಯುಕ್ತವಾಗಿ ವ್ಯರ್ಥವಾಗಿ ನಿಂತಿದೆ. ಪ್ರಸ್ತುತ ವೈ.ಎಸ್.ಪಾಳ್ಯದಲ್ಲಿ ವಿವಿಧ ಯೋಜನೆಯಲ್ಲಿ ಪ್ರತ್ಯೇಕ ಓವರ್ ಹೆಡ್ ಟ್ಯಾಂಕ್ ನಿರ್ಮಿಸಿ ಸಮರ್ಪಕವಾಗಿ ನೀರು ಪೂರೈಕೆ ಮಾಡಲಾಗುತ್ತಿದೆ. ಆದರೆ ಲಿಂಗಪ್ಪನಪಾಳ್ಯ, ಸೋಮಜ್ಜನಪಾಳ್ಯ, ಕಾಮಶೆಟ್ಟಿಪಾಳ್ಯ ಗ್ರಾಮಗಳಿಗೆ ನೀರಿನ ಪರಿಸ್ಥಿತಿ ಇನ್ನೂ ಸುಧಾರಿಸಿಲ್ಲ. ಇರುವ ಕೊಳವೆಬಾವಿ ಕೈ ಕೊಟ್ಟರೆ ರಿಪೇರಿಯಾಗುವವರೆವಿಗೂ ನೀರಿನ ಪರದಾಟ ತಪ್ಪಿದಲ್ಲ. ಇನ್ನು ಈಗ ಪೂರೈಸುತ್ತಿರುವ ನೀರು ಸಪ್ಪೆಯಾಗಿದ್ದು ಬಳಕೆಗಷ್ಟೆ ಜನರು ಬಳಸುತ್ತಿದ್ದಾರೆ. ಶುದ್ದ ಕುಡಿಯುವ ನೀರಿಗೆ ಈಗಲೂ ಅಲೆಯುತ್ತಿದ್ದಾರೆ. ಈ ಬಗ್ಗೆ ಮುಖ್ಯಾಧಿಕಾರಿಗಳಿಗೆ ಪ್ರಶ್ನಿಸಿದರೆ ಜೆಜೆಎಂ ಯೋಜನೆಯಲ್ಲಿ ಮನೆಮನೆಗೆ ನಲ್ಲಿ ಹಾಕಿ ಈ ಮೂರು ಗ್ರಾಮಗಳಿಗೆ ವೈ.ಎಸ್.ಪಾಳ್ಯದ ಬಳಿ ದೊಡ್ಡ ಓವರ್ ಹೆಡ್ ಟ್ಯಾಂಕ್ ನಿರ್ಮಿಸಿ ನಿತ್ಯ ಶುದ್ಧ ನೀರು ಪೂರೈಸುತ್ತೇವೆ ಎನ್ನುತ್ತಾರೆ. ಹಳ್ಳಿಗಳಲ್ಲಿ ಜೆಜೆಎಂನಲ್ಲಿ ನಲ್ಲಿ ಹಾಕಿ 1 ವರ್ಷಗಳೇ ಕಳೆದರೂ ಇನ್ನೂ ಹನಿ ನೀರು ಬಂದಿಲ್ಲ. ಅಂತಹದರಲ್ಲಿ ಇನ್ನೂ ನಲ್ಲಿಯನ್ನೇ ಹಾಕದ ಇವರು ಇನ್ಯಾವ ಕಾಲಕ್ಕೆ ಹಳ್ಳಿಗಳಿಗೆ ಸಮರ್ಪಕವಾಗಿ ನೀರು ಪೂರೈಸುತ್ತಾರೆ ಹೇಳಲಾಗದು. ಜೆಜೆಎಂ ಸಂಪೂರ್ಣ ಅನುಷ್ಟಾನವಾಗಲು ಇನ್ನೂ 2 ವರ್ಷಗಳ ಕಾಲ ಬೇಕಿದ್ದು ಅಲ್ಲಿಯವರೆವಿಗೆಯಾದರೂ ಈ ಟ್ಯಾಂಕ್ ಸದ್ಬಳಕೆ ಪಂಚಾಯ್ತಿ ಮುಂದಾಗಲಿ ಎನ್ನುವುದು ಜನರ ಒತ್ತಾಯವಾಗಿದೆ.



### ಈಗಲೂ ಹಣ ಉಳ್ಳವರಿಗೆ ನೀರು

ಲಿಂಗಪ್ಪನಪಾಳ್ಯ, ಸೋಮಜ್ಜನಪಾಳ್ಯ, ಕಾಮಶೆಟ್ಟಿಪಾಳ್ಯ ಗ್ರಾಮಗಳು ರೈತರು ಮತ್ತು ಕೂಲಿ ಕಾರ್ಮಿಕರೇ ಹೆಚ್ಚಾಗಿರುವ ಊರುಗಳು. ಇಲ್ಲಿನ ಮನೆಗಳಿಗೆ ಪಂಚಾಯ್ತಿಯಿಂದ ಉಚಿತವಾಗಿ ಕೊಳಯಿ ಹಾಕಿ ಓವರ್ ಹೆಡ್ ಟ್ಯಾಂಕ್ ಮೂಲಕ ನೀರು ಪೂರೈಸಬೇಕಿತ್ತು. ಆದರೆ ಮನೆಮನೆಗೆ ಕೊಳಯಿ ಇನ್ನು ಹಾಕಿಲ್ಲ. ಮಿನಿ ಟ್ಯಾಂಕ್‌ಗೆ ನೀರು ಸರಬರಾಜು ಮಾಡುವ ಪೈಪ್ ಲೈನ್ ಮೂಲಕವೇ ಹಣವಂತರು, ಪ್ರಭಾವಿಗಳಿಗೆ ನಲ್ಲಿ ಹಾಕಲಾಗಿದೆ. ಹಾಗಾಗಿ ಮಿನಿ ಟ್ಯಾಂಕ್ ನೀರು ಬಿಡುವಾಗಲೆಲ್ಲ ಈ ಮನೆಗಳಿಗೆ ನೀರು ಬರುತ್ತದೆ. ಅಲ್ಲದೆ ಟ್ಯಾಂಕ್ ತುಂಬುವವರೆವಿಗೂ ಮನೆಗಳ ಬಳಿ ನೀರು ವ್ಯರ್ಥವಾಗುತ್ತದೆ. ಇತ್ತ ಬಡಪಾಯಿಗಳು ಮಿನಿಟ್ಯಾಂಕ್ ಗೆ ಹೋಗಿ ನೀರು ತಲೆ ಮೇಲೆ ಹೊತ್ತು ತರಬೇಕಿದೆ.

### ಎಂಜಿನಿಯರ್ ಜತೆ ಚರ್ಚಿಸಿ ಕ್ರಮ

**ಪದವಿ ಕಾಲೇಜಿನ ಬಳಿ ವ್ಯರ್ಥವಾಗಿ ಓವರ್ ಹೆಡ್ ಟ್ಯಾಂಕ್ ಇರುವುದು ತಿಳಿದಿದೆ. ಇದರ ಸದ್ಬಳಕೆಗೆ ಎಂಜಿನಿಯರ್ ಗೆ ತಿಳಿಸಿದ್ದೆ. ಆದರೆ ಅಷ್ಟರಲ್ಲಿ ಜೆಜೆಎಂ ಯೋಜನೆ ಬಂತು. ಹಾಗಾಗಿ ಸುಮ್ಮನಾದೆವು. ಈಗಾಗಲೇ ಟ್ಯಾಂಕ್ ಕಟ್ಟಿ ಹದಿನೈದು ವರ್ಷವಾಗಿರುವುದರಿಂದ ಜೆಜೆಎಂ ಯೋಜನೆಯಲ್ಲಿ ನೀರು ಬರುವಷ್ಟು ದಿನಗಳ ಕಾಲವಾದರೂ ಟ್ಯಾಂಕ್ ಸದ್ಬಳಕೆ ಮಾಡಬಹುದೇ ಎಂದು ಟೆಕ್ನಿಕಲ್ ಮಾಹಿತಿ ಪಡೆದು ಕ್ರಮ ಕೈಗೊಳ್ಳುತ್ತೇನೆ.**

| **ನಾಗಭೂಷಣ್** ಮುಖ್ಯಾಧಿಕಾರಿ, ಪಪಂ

### ಮೆಂಬರ್ ಆಗಿದ್ದಾಗ ಕಟ್ಟಿದ್ದು

**ನಾನು ಗ್ರಾಮ ಪಂಚಾಯ್ತಿ ಮೆಂಬರ್ ಆಗಿದ್ದಾಗ ಪದವಿ ಕಾಲೇಜಿನ ಪಕ್ಕದಲ್ಲಿ ಓವರ್ ಹೆಡ್ ಟ್ಯಾಂಕ್ ಕಟ್ಟಲಾಗಿತ್ತು. ಆದರೆ ಅದೇಕೆ ಇನ್ನೂ ಈ ಟ್ಯಾಂಕ್ ಬಳಕೆಗೆ ಮುಂದಾಗಿಲ್ಲ ಎನ್ನುವುದೇ ತಿಳಿಯದಾಗಿದೆ. ರೆಡಿಯಿರುವ ಈ ಟ್ಯಾಂಕ್ ತುಂಬಿಸಿದ್ದರೆ ನಿತ್ಯ ಊರಳ್ಳಿಗೆ ನೀರು ಪೂರೈಸಬಹುದಾಗಿದೆ. ಈ ಬಗ್ಗೆ ಮುಂದಿನ ಪಮಚಾಯ್ತಿ ಸಾಮಾನ್ಯ ಸಭೆಯಲ್ಲಿ ಅಧಿಕಾರಿಗಳ ಗಮನ ಸೆಳೆಯುತ್ತೇನೆ.**

| **ಕಾಯಿಕುಮಾರ್** ಪಪಂ ನಾಮಿನಿ ಸದಸ್ಯ

### ಟ್ಯಾಂಕ್ ಬಳಕೆಯಿಂದ ಮಾತ್ರ ದಾನಿಗಳಿಗೆ ಕೃತಜ್ಞತೆ

**ನಾನು ತಾಪಂ ಸದಸ್ಯನಾಗಿದ್ದ ಸಂದರ್ಭದಲ್ಲಿ ಈ ಟ್ಯಾಂಕ್ ಕಟ್ಟಲಾಗಿತ್ತು. ಅನೇಕ ದಾನಿಗಳ ಹಣದಿಂದ ಈ ಟ್ಯಾಂಕ್ ಕಟ್ಟಿದ್ದು. ದಾನ ಕೊಟ್ಟ ಶ್ರೀನಿವಾಸ ಶೆಟ್ಟಿ ಸೇರಿದಂತೆ ಅನೇಕರು ಈಗಾಗಲೇ ನಿಧನರಾಗಿದ್ದಾರೆ. ನಾವು ಟ್ಯಾಂಕ್ ಬಳಕೆಯಿಂದ ಮಾತ್ರ ದಾನಿಗಳಿಗೆ ಕೃತಜ್ಞತೆ ಸಲ್ಲಿಸಲು ಸಾಧ್ಯ. ಕೆರೆ ದಡದಲ್ಲಿನ ಕೊಳವೆಬಾವಿಯಿಂದ ಟ್ಯಾಂಕ್ ತುಂಬಿಸಿ ಹಳ್ಳಿಗಳ ಪ್ರತಿ ಮನೆಗಳಿಗೂ ನೀರು ಕೊಡಲು ಪಂಚಾಯ್ತಿ ಮುಂದಾಗಬೇಕು.**

| **ಶಿವನಂಜಪ್ಪ**
ತಾಪಂ ಮಾಜಿ ಸದಸ್ಯ,
ಸೋಮಜ್ಜನಪಾಳ್ಯ

## ಅಂಬೇಡ್ಕರ್ ವಿರುದ್ಧ ಅವಹೇಳನ ಜಂಬವ ಯುವಸೇನೆಯಿಂದ ಖಂಡನೆ



**ಕೋಲಾರ:** ಭಾರತ ರತ್ನ ಡಾ.ಬಿ.ಆರ್. ಅಂಬೇಡ್ಕರ್ ಅವರ ಬಗ್ಗೆ ಬಿಜೆಪಿ ಹಿರಿಯ ನಾಯಕ ಅಮಿತ್ ಶಾ ಅವರ ಅವಹೇಳನಕಾರಿ ಹೇಳಿಕೆ ನೀಡಿರುವುದಕ್ಕೆ ರಾಜ್ಯದಾದ್ಯಂತ ತೀವ್ರ ಪ್ರತಿಕ್ರಿಯೆ ವ್ಯಕ್ತವಾಗಿದೆ. ಈ ಹೇಳಿಕೆ ವಿರುದ್ಧ ಜಂಬವ ಯುವಸೇನೆ ತೀಕ್ಷ್ಣ ಆಕ್ಷೇಪ ವ್ಯಕ್ತಪಡಿಸಿ, ಕಠಿಣ ಕ್ರಮಕ್ಕೆ ಒತ್ತಾಯಿಸಿದೆ.

ಜಂಬವ ಯುವಸೇನೆಯ ಮುಖಂಡರು ಹಾಗೂ ಪದಾಧಿಕಾರಿಗಳು ಪತ್ರಿಕಾ ಹೇಳಿಕೆ ನೀಡಿ ಮಾತನಾಡಿ, ಡಾ. ಅಂಬೇಡ್ಕರ್ ಅವರು ಭಾರತೀಯ ಸಂವಿಧಾನದ ಶಿಲ್ಪಿ ಮತ್ತು ಸಮಾನತೆಯ ಪರ್ಯಾಯ ಚಿಹ್ನೆ. ಅವರ ಬಗ್ಗೆ ಮಾಡಿದ ಯಾವುದೇ ಅವಹೇಳನದ ಮಾತು ಸಹಿಸಲಾಗದು. ಇದು ಕೇವಲ ಅಂಬೇಡ್ಕರ್ ಅವರ ವ್ಯಕ್ತಿತ್ವವನ್ನಷ್ಟೇ ಹಾನಿ ಮಾಡೋದಿಲ್ಲ, ಜನರ ಭಾವನೆಗಳನ್ನೂ ಗಾಯಗೊಳಿಸುತ್ತದೆ ಎಂದು ಖಂಡಿಸಿದರು.

ಅಮಿತ್ ಶಾ ತಕ್ಷಣ ಕ್ಷಮೆ ಕೋರಿ ಅವಹೇಳನಕಾರಿ ಹೇಳಿಕೆ ನೀಡಿದವರು ಸಾರ್ವಜನಿಕವಾಗಿ ಕ್ಷಮೆ ಕೇಳಬೇಕು, ಸರ್ಕಾರವು ಇಂತಹವರ ವಿರುದ್ಧ ಕಾನೂನಿನ ಪ್ರಕಾರ ಕ್ರಮ ಕೈಗೊಳ್ಳಬೇಕು, ಮತಭೇದವಿಲ್ಲದ ಹೋರಾಟ ಜಾತಿ, ಧರ್ಮ ಎಂಬ ಭೇದಭಾವವಿಲ್ಲದೆ ಎಲ್ಲರೂ ಒಗ್ಗಟ್ಟಿನಿಂದ ರಾಜ್ಯಾದ್ಯಂತ ತೀವ್ರ ವಿರೋಧ ವ್ಯಕ್ತಪಡಿಸಬೇಕೆಂದು ತಿಳಿಸಿದ್ದಾರೆ.

ಜಂಬವ ಯುವಸೇನೆ ಸಮಾನ ಮನಸ್ಕ ಸಂಘಟನೆಗಳ ಜೊತೆಗೂಡಿ ರಾಜ್ಯಾದ್ಯಂತ ಬೃಹತ್ ಪ್ರತಿಭಟನಾ ಮೆರವಣಿಗೆ ನಡೆಸಲು ಸಜ್ಜಾಗಿದೆ. ನಮಗೆ ಅಂಬೇಡ್ಕರ್ ನಮ್ಮ ಸಾಂಸ್ಕೃತಿಕ ಪರಂಪರೆಯ ಹೆಮ್ಮೆ. ಇಂತಹ ಅವಹೇಳನವನ್ನು ನಾವು ತಲೆಬಾಗುತ್ತೇವೆಂದು ಯಾರು ಭಾವಿಸಬಾರದು, ಎಂದು ಜಂಬವ ಯುವಸೇನೆಯ ಸಂಸ್ಥಾಪಕ ರಾಜ್ಯಾಧ್ಯಕ್ಷ ರಮೇಶ್ ಚಕ್ರವರ್ತಿ ಹೇಳಿದರು.

ಈ ಸಂದರ್ಭದಲ್ಲಿ ರಾಜ್ಯ ಗೌರವಾಧ್ಯಕ್ಷ ಹುಲ್ಲೂರು ನಾರಾಯಣಸ್ವಾಮಿ, ರಾಜ್ಯ ಹಿರಿಯ ಸಲಹೆಗಾರ ಗುರಪ್ಪ, ರಾಜ್ಯ ಪ್ರಧಾನ ಕಾರ್ಯದರ್ಶಿ ಕೋಲಾರ ಶ್ರೀನಿವಾಸ್, ರಾಜ್ಯ ಉಪಾಧ್ಯಕ್ಷ ಚನ್ನಸಂದ್ರ ವೆಂಕಟೇಶ್, ಕಾರ್ಮಿಕ ಘಟಕದ ರಾಜ್ಯಾಧ್ಯಕ್ಷ ಚಂದ್ರಹಾಸ್, ಕೋಲಾರ ಜಿಲ್ಲಾ ಅಧ್ಯಕ್ಷ ಹೊವಳ್ಳಿ ಕೃಷ್ಣಪ್ಪ, ಜಿಲ್ಲಾ ಪ್ರಚಾರ ಸಮಿತಿ ಅಧ್ಯಕ್ಷ ಶ್ರೀನಿವಾಸ್ ಎಂ, ಚನ್ನಸಂದ್ರ ಮುನಿರಾಜ್, ಜಿಲ್ಲಾ ಉಪಾಧ್ಯಕ್ಷ ತಿರುಮಲಪ್ಪ, ಕಾರ್ಮಿಕ ಘಟಕದ ಅಧ್ಯಕ್ಷ ಅಚ್ಯುತ್ ಇನ್ನು ಹಲವು ಮುಖಂಡರುಗಳು ಪದಾಧಿಕಾರಿಗಳು ಇದ್ದರು.

# ಕೃಷಿಕ ಸಮಾಜ ಅವಿರೋಧ ಆಯ್ಕೆ

**ಪಿರಿಯಾಪಟ್ಟಣ:** ಪಿರಿಯಾಪಟ್ಟಣ ತಾಲೂಕು ಕೃಷಿಕ ಸಮಾಜದ ಅಧ್ಯಕ್ಷರಾಗಿ ಶಫೀಉಲ್ಲಾ ಹಾಗೂ ಪ್ರಧಾನ ಕಾರ್ಯದರ್ಶಿಯಾಗಿ ಹೆಚ್.ಡಿ.ರಮೇಶ್ ಅವಿರೋಧವಾಗಿ ಆಯ್ಕೆಯಾದರು.

ಪಟ್ಟಣದ ಕೃಷಿ ಇಲಾಖೆ ಕಚೇರಿ ಆವರಣದಲ್ಲಿ ಗುರುವಾರ ಚುನಾವಣೆ ನಡೆದು ಅಧ್ಯಕ್ಷ ಸ್ಥಾನಕ್ಕೆ ಶಫಿ ಉಲ್ಲಾ, ಉಪಾಧ್ಯಕ್ಷ ಸ್ಥಾನಕ್ಕೆ ಕೆ.ಪ್ರಕಾಶ್, ಪ್ರಧಾನ ಕಾರ್ಯದರ್ಶಿ ಸ್ಥಾನಕ್ಕೆ ಎಚ್.ಡಿ.ರಮೇಶ್, ಖಜಾಂಚಿ ಸ್ಥಾನಕ್ಕೆ ಸುನೀಲ್, ಜಿಲ್ಲಾ ಪ್ರತಿನಿಧಿ ಸ್ಥಾನಕ್ಕೆ ಕೆ.ಎ.ದೀಪಕ್ ರವರುಗಳು ತಲಾ ಒಂದೊಂದು ನಾಮಪತ್ರ ಮಾತ್ರ ಸಲ್ಲಿಸಿ ಬೇರೆ ಯಾವುದೇ ನಾಮಪತ್ರಗಳು ಬಾರದಿರುವ ಕಾರಣಕ್ಕೆ ಚುನಾವಣಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿದ್ದ ಕೃಷಿ ಇಲಾಖೆ ಸಹಾಯಕ ನಿರ್ದೇಶಕ ಪ್ರಸಾದ್ ರವರು ಇವರ ಅವಿರೋಧ ಆಯ್ಕೆಯನ್ನು ಘೋಷಣೆ ಮಾಡಿದರು.

ಈ ಸಂದರ್ಭದಲ್ಲಿ ನೂತನ ಅಧ್ಯಕ್ಷ ಶಫಿ ಉಲ್ಲಾ ಮಾತನಾಡಿ ಸಮಿತಿಯು ರೈತರ ಹಿತ ಕಾಯುವಲ್ಲಿ ಪ್ರಾಮಾಣಿಕವಾಗಿ ಶ್ರಮಿಸುತ್ತದೆ. ರೈತರಿಗೆ ತಲುಪಬೇಕಾದ ಸವಲತ್ತುಗಳನ್ನು ತಲುಪಿಸುವ ಜೊತೆಗೆ ಅಭಿವೃದ್ಧಿ ಕಾರ್ಯಗಳನ್ನು ಸಾರ್ವಜನಿಕರಿಗೆ ನೀಡುತ್ತೇವೆ ಎಂದರು.



ಈ ಸಂದರ್ಭದಲ್ಲಿ ಸಂಘದ ಉಪಾಧ್ಯಕ್ಷ ಕೆ.ಪ್ರಕಾಶ್, ಪ್ರಧಾನ ಕಾರ್ಯದರ್ಶಿ ಹೆಚ್ .ಡಿ.ರಮೇಶ್, ಖಜಾಂಚಿ ಸುನೀಲ್, ಜಿಲ್ಲಾ ಪ್ರತಿನಿಧಿ ಕೆ.ಎ.ದೀಪಕ್, ನಿರ್ದೇಶಕ ರಾದ ಆರ್.ಡಿ. ವೆಂಕಟೇಶ್ , ಪ್ರವೀಣ್ ಕುಮಾರ್, ಆರ್.ಟಿ.ವೆಂಕಟೇಶ್, ತಿಮ್ಮೇಗೌಡ, ಎಂ.ಸಿ.ಅಶೋಕ್, ಚಂದ್ರಪ್ಪ, ಸೈಯದ್ ಸುಹೇಲ್, ಕೆ.ಟಿ.ಪ್ರಕಾಶ್ ನಾಗೇಗೌಡ ಮುಖಂಡರಾದ ಶಂಕರೇಗೌಡ, ಜಗದೀಶ್, ವೆಂಕಟೇಶ್, ಸುಹೇಲ್, ಪ್ರಕಾಶ್, ವಿಷ್ಣು ಸೇರಿದಂತ್ತೆ ಇತರರು ಹಾಜರಿದ್ದರು.

## ಎಬಿಸಿಡಿ ಖಾಯಿಲೆಗಳಿಗೆ ದರ್ಬೆ ದಿವ್ಯೌಷಧ

**ಹುಳಿಯಾರು:** ಎಬಿಸಿಡಿ ಖಾಯಿಲೆಗಳಾದ ಅಸ್ತಮಾ, ಬಿಪಿ, ಕ್ಯಾನ್ಸರ್, ಡಯಾಬಿಟಿಸ್ ಖಾಯಿಲೆಗಳಿಗೆ ದರ್ಬೆಯ ಕಷಾಯ ದಿವ್ಯೌಷಧ ಎಂದು ಹುಳಿಯಾರಿನ ಆರೋಗ್ಯ ಮಂದಿರದ ಆಯುರ್ವೇದ ವೈದ್ಯ ಬಸವರಾಜ ಪಂಡಿತ್ ಅವರು ತಿಳಿಸಿದರು. ಹುಳಿಯಾರು ಸಮೀಪದ ಗೂಬೆಹಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆಯಲ್ಲಿ ಇಕೋ ಕ್ಲಬ್ ವತಿಯಿಂದ ಶನಿವಾರ ಆಯೋಜಿಸಿದ್ದ ಆಯುರ್ವೇದರಿಂದ ಆರೋಗ್ಯ ಕಾರ್ಯಕ್ರಮದಲ್ಲಿ ಅವರು ಮಾಹಿತಿ ನೀಡಿದರು. ಹಸಿರು ದರ್ಬೆಯನ್ನು ಶುದ್ಧಮಾಡಿ ಸುರಳಿ ಸುತ್ತಿ ಎರಡು ಲೋಟ ನೀರಿನಲ್ಲಿ ಹಾಕಿ 1 ಲೋಟ ಆಗುವಂತೆ ಚೆನ್ನಾಗಿ ಕುದಿಸಿ ದಿನಕ್ಕೆ 3 ಬಾರಿ 1 ಕುಡಿಯಬೇಕು. ಒಣಗಿದ ದರ್ಬೆಯಾಗಿದ್ದರೆ ಸುಟ್ಟು ಭಸ್ಮ ಮಾಡಿ ಜೇನುತುಪ್ಪ ಅಥವಾ ಎಳನೀರಿನಲ್ಲಿ ಸೇವಿಸಬೇಕು ಎಂದರು.

ತುಳಸಿ ಎಲೆ, 2 ಕಾಳುಮೆಣಸು, 2 ಲವಂಗ ಸೇರಿಸಿ ಕಾಯಿಸಿ ಶೋಧಿಸಿ ಕುಡಿದರೆ ನೆಗಡಿ ಮತ್ತು ಕೆಮ್ಮು ನಿವಾರಣೆಯಾಗುತ್ತದೆ. ಲಿಂಬೆಹಣ್ಣಿನ ರಸದಲ್ಲಿ ಶುಂಠಿಯನ್ನು ತೇಯ್ದು ಪೇಸ್ಟ್ ಮಾಡಿ ಅರ್ಧ ಚಮಚ ದೇಹಕ್ಕೆ ತೆಗೆದುಕೊಂಡು ಅರ್ಧ ಚಮಚ ತಲೆಯ ಎರಡೂ ಭಾಗಗಳಿಗೆ ಅಮೃತಾಂಜನ್ ರೀತಿ ಹಚ್ಚಿದರೆ ತಲೆನೋವು ಮಾಯವಾಗುತ್ತದೆ ಎಂದು ತಿಳಿಸಿದರು.

ಪಂಚ ಪಲ್ಲವಗಳಾದ ಬಿಲ್ವಪತ್ರೆ, ಅರಳಿ, ಬೇವು, ಹತ್ತಿ, ಬನ್ನಿ ಮರಗಳ ಪತ್ರೆಗಳನ್ನು ನೆರಳಲ್ಲಿ ಒಣಗಿಸಿ ಚೂರ್ಣ ಮಾಡಿ ನಿತ್ಯ ಕಾಫಿ, ಟೀ ತರ ಬಳಸಿದರೆ ಚಿರಯೌವನ ಕಾಪಾಡಿಕೊಳ್ಳಬಹುದು ಎಂದರಲ್ಲದೆ ಆಯುರ್ವೇದದ ಬಗ್ಗೆ ಪೂರ್ಣ ತಿಳಿಯಲು ಸಾಧ್ಯವಾಗದಿದ್ದರೂ ರೋಗ ನಿರೋಧಕ ಶಕ್ತಿ ಹೆಚ್ಚಿಸುವ ತ್ರಿಫಲ, ತ್ರಿಕಟು, ಪಂಚಪಲ್ಲವ ವೃಕ್ಷಗಳ ಬಗ್ಗೆ ತಿಳಿಯುವುದು ಅವಶ್ಯ ಎಂದರು.



# ಹೊಳಲು ಡೇರಿಗೆ ಅಧ್ಯಕ್ಷರಾಗಿ ಆಯ್ಕೆ



**ಮಂಡ್ಯ:** ತಾಲೂಕು ಹೊಳಲು ಗ್ರಾಮದ ಹಾಲು ಉತ್ಪಾದಕರ ಸಹಕಾರ ಸಂಘದಲ್ಲಿ ಇಂದು ನಡೆದ ಚುನಾವಣೆಯಲ್ಲಿ ಎಚ್.ಎನ್. ಶಿವರಾಮುರವರು ಆಯ್ಕೆಯಾಗಿದ್ದಾರೆ.

13 ಜನ ಸದಸ್ಯ ಬಲವಿರುವ ಸಂಘದಲ್ಲಿ ಈ ಹಿಂದೆ ಅಧ್ಯಕ್ಷರಾಗಿದ್ದ ಹೆಚ್. ಬಿ.ಕೃಷ್ಣ ರಾಜೀನಾಮೆಯಿಂದ ತೆರವಾಗಿದ್ದ ಅಧ್ಯಕ್ಷ ಸ್ಥಾನಕ್ಕೆ ಎಚ್. ಎನ್. ಶಿವರಾಮು ನಾಮಪತ್ರ ಸಲ್ಲಿಸಿದರು.

ಬೇರೆ ಸದಸ್ಯರು ಯಾರು ನಾಮಪತ್ರ ಸಲ್ಲಿಸದ ಕಾರಣ ಎಚ್. ಎನ್. ಶಿವರಾಮುರವರನ್ನು ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ. ಎಂದು ಚುನಾವಣಾಧಿಕಾರಿ ಎಚ್.ಎಸ್. ಮುಕ್ತ ರವರು ಘೋಷಿಸಿದ್ದಾರೆ.

ನಂತರ ನೂತನ ಅಧ್ಯಕ್ಷರಾಗಿ ಮಾತನಾಡಿ ಗ್ರಾಮದ ಹಿರಿಯ ಮುಖಂಡರಾದ ಎಚ್. ಎಲ್. ಶಿವಣ್ಣ, ಮಾಜಿ ಶಾಸಕ ಎಚ್. ಬಿ.ರಾಮು ಇವರ ಮಾರ್ಗದರ್ಶನ ಗ್ರಾಮದ ಮುಖಂಡರ ಸಹಕಾರ ಹಾಗೂ ಸಂಘದ ಸದಸ್ಯರ ಸಹಕಾರದಿಂದ ಈ ದಿನ ಅವಿರೋಧವಾಗಿ ಆಯ್ಕೆಯಾಗಿದ್ದೇನೆ. ಮುಂದಿನ ದಿನಗಳಲ್ಲಿ ಉತ್ಪಾದಕರ ಸಂಘವನ್ನು ಜಿಲ್ಲೆಯಲ್ಲಿ ಅಭಿವೃದ್ಧಿಯತ್ತ ಸಾಗುವತ್ತ ಕೊಂಡೊಯ್ಯುತ್ತೇನೆ ಆದ್ದರಿಂದ ನಿಮ್ಮೆಲ್ಲರ ಸಹಕಾರ ಮುಖ್ಯ ಎಂದು ಹೇಳಿದರು.

ಈ ಸಂದರ್ಭದಲ್ಲಿ ಸಂಘದ ಮಾಜಿ ಅಧ್ಯಕ್ಷ ಹೆಚ್. ಬಿ.ಕೃಷ್ಣ, ಉಪಾಧ್ಯಕ್ಷರಾದ ದೊಡ್ಡಸಿದ್ದಯ್ಯ ಮುಖಂಡರಾದ ಜಟ್ಟಿ ಕುಮಾರ್, ಆರ್.ಎ.ಪಿ.ಸಿ.ಎಂ.ಎಸ್. ನಿರ್ದೇಶಕರಾದ ಯೋಗೇಶ್ ಕುಮಾರ್, ಕೃಷಿಪತ್ತಿನ ಸಹಕಾರ ಸಂಘದ ಅಧ್ಯಕ್ಷರಾದ ನಿಂಗೇಗೌಡ, ಯಜಮಾನ್ ಕುಮಾರ್, ರೈಸ್ ಮಿಲ್ ಶಿವಲಿಂಗಯ್ಯ, ಸದಾನಂದ, ಪಟೇಲ್ ರಾಮು, ಎಚ್ .ಸಿ. ಶ್ರೀಧರ್, ಸಚ್ಚಿದಾನಂದ, ಚಂದನ್ , ಪ್ರದೀಪ್ ಕುಮಾರ್, ಚೇತನ್, ಗೋಪಿ, ಹಾಗೂ ಹಾಲು ಉತ್ಪಾದಕರ ಸಹಕಾರ ಸಂಘದ ನಿರ್ದೇಶಕರಾದ

ಎಚ್ .ಎನ್. ಚರಣ್, ಸಾವಿತ್ರಮ್ಮ ಸಾಗರ್. ಪಿ, ಎಚ್. ಎಲ್. ಲಿಂಗರಾಜು, ಲಲಿತಮ್ಮ, ಭಾಗ್ಯ ,ಅನುರಾಧ , ಅನುಸೂಯ , ಕವಿತಾ. ಎಂ, ಎಚ್ .ಆರ್. ವಿನಯ್ ಹಾಗೂ ಪ್ರಭಾರ ಕಾರ್ಯದರ್ಶಿ ಹೆಚ್ .ಎನ್. ಬೋರಯ್ಯ ಎಚ್ .ಎನ್ .ಶಿವಕುಮಾರ್ ,ಹಾಗೂ ಸಿಬ್ಬಂದಿ ವರ್ಗದವರು ನೂತನ ಅಧ್ಯಕ್ಷರನ್ನ ಅಭಿನಂದಿಸಿ ಶುಭ ಹಾರೈಸಿದರು.

ನಿವೃತ್ತ ಶಿಕ್ಷಕರು ಆರೋಗ್ಯದ ಬಗ್ಗೆ ಕಾಳಜಿ ವಹಿಸಿ: ಸಾರ್ವಜನಿಕ ಶಿಕ್ಷಣ ಇಲಾಖೆ ನಿವೃತ್ತ ಉಪನಿರ್ದೇಶಕ ಟಿ ಬಸವರಾಜ್.

# ಆರೋಗ್ಯದ ಬಗ್ಗೆ ಹೆಚ್ಚಿನ ಕಾಳಜಿ ವಹಿಸಿ

ಪಿರಿಯಾಪಟ್ಟಣ: ನಿವೃತ್ತ ಶಿಕ್ಷಕರು ತಮ್ಮ ಸೇವಾವಧಿ ಪೂರ್ಣಗೊಂಡ ನಂತರ ಆರೋಗ್ಯದ ಬಗ್ಗೆ ಹೆಚ್ಚಿನ ಕಾಳಜಿ ವಹಿಸುವ ಮೂಲಕ ರೋಗರುಜಿನಗಳಿಂದ ದೂರ ಉಳಿಯಬೇಕು ಎಂದು ಸಾರ್ವಜನಿಕ ಶಿಕ್ಷಣ ಇಲಾಖೆಯ ನಿವೃತ್ತ ಉಪನಿರ್ದೇಶಕ ಟಿ ಬಸವರಾಜ್ ತಿಳಿಸಿದರು.

ಪಟ್ಟಣದ ಶಿಕ್ಷಕರ ಸಭಾಂಗಣದಲ್ಲಿ ತಾಲೂಕು ನಿವೃತ್ತ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ವತಿಯಿಂದ ಆಯೋಜಿಸಿದ್ದ ವಾರ್ಷಿಕ ಮಹಾಸಭೆ ಹಾಗೂ ಹಿರಿಯ ಶಿಕ್ಷಕರಿಗೆ ಸನ್ಮಾನ ಸಮಾರಂಭದಲ್ಲಿ ಮಾತನಾಡಿದರು.

ಮನುಷ್ಯ ಮಗುವಾಗುವುದು ಎರಡೇ ಬಾರಿ ಒಂದು ಬಾಲ್ಯಾವಸ್ಥೆಯಲ್ಲಿ ಮತ್ತೊಂದು ವೃದ್ಧಾವಸ್ಥೆಯಲ್ಲಿ ನಮ್ಮ ಬಾಲ್ಯದ ಆರಂಭದ ಹಂತಗಳು ಹೇಗಿರುತ್ತದೋ ಅದೇ ರೀತಿಯಲ್ಲಿಯೇ ವೃದ್ಧಾಪ್ಯ ಕೂಡ. ತನ್ನಲ್ಲಿರುವ ಎಲ್ಲ ದೈಹಿಕ ಶಕ್ತಿಗಳು ಹಂತ ಹಂತವಾಗಿ ಕಳೆದು ಶರೀರದ ಜತೆಗೆ ಎಲ್ಲವೂ ಕುಬ್ಜವಾಗತೊಡಗುತ್ತದೆ. ಅದೊಂದು ಸಹಜ ಪ್ರಕ್ರಿಯೆ. ಈ ವೇಳೆ ಹಿರಿಯಜೀವಗಳ ಆರೈಕ ಅತೀ ಅಗತ್ಯ, ಹಿರಿಯರಿಗೆ ಮನಸ್ಸಿಗೆ ನೋವು ಹಾಗೂ ಒಂದು ಸಣ್ಣ ಗಾಯವಾದರೂ ಸಾಕು ಹಿರಿ ಜೀವದ ಮನಸ್ಸು ಆತಂಕದಿಂದ ಕುಗ್ಗಿ ಹೋಗುತ್ತದೆ. ಹೀಗಾಗಿ ಅವರ ಆರೋಗ್ಯದ ಬಗ್ಗೆ ಹೆಚ್ಚಿನ ಕಾಳಜಿಯನ್ನು ಮನೆಮಂದಿಯೇ ವಹಿಸಿದರೆ ಅವರಲ್ಲಿರುವ ಆತಂಕವನ್ನು ದೂರ ಮಾಡಬಹುದು. ನಿವೃತ್ತಿ ಜೀವನದಲ್ಲಿ ಕೋಪ ಸಹಜ ಅದನ್ನು ಹತೋಟಿಯಲ್ಲಿ ಇಟ್ಟುಕೊಳ್ಳಬೇಕು, ಮನೆಯಲ್ಲಿ ನಡೆಯುವ ಸಣ್ಣಪುಟ್ಟ ಸಮಸ್ಯೆಗಳಿಗೆ ಎದೆಗುಂದಬಾರದು. ಪ್ರಸ್ತುತ ದಿನಗಳಲ್ಲಿ ಬಿಪಿ-ಶುಗರ್ ಒಂದು ಬಹುದೊಡ್ಡ ಕಾಯಿಲೆ ಎಂದು ಬಿಂಬಿಸಲೋಗುತ್ತಿದೆ ಆದರೆ ನಮ್ಮಲ್ಲಿ ಮನಸ್ಸಿನ ಆರೋಗ್ಯ ದೃಡವಾಗಿದ್ದರೆ ಈ ಬಿಪಿ ಶುಗರ್ ಲೆಕ್ಕಕ್ಕೆ



ಬರುವುದಿಲ್ಲ, ಹಿರಿಯ ಜೀವಗಳು ತಾವು ಸೇವಿಸುವ ಆಹಾರ ಮತ್ತು ಔಷಧಗಳ ಬಗ್ಗೆ ಎಚ್ಚರವಹಿಸಬೇಕು ಕೆಲವೊಮ್ಮೆ ಹಿರಿಯರು ಗೊಂದಲದಿಂದಾಗಿ ತಪ್ಪಾದ ಔಷಧಗಳನ್ನು ತೆಗೆದುಕೊಳ್ಳುವ ಸಾಧ್ಯತೆ ಇರುತ್ತದೆ. ಅಲ್ಲದೇ ಸಮಯಕ್ಕೆ ಸರಿಯಾಗಿ ತೆಗೆದುಕೊಳ್ಳುವುದನ್ನು ಮರೆತುಬಿಡಬಹುದು. ಈ ಬಗ್ಗೆ ಮನೆಯವರು ಅವರ ಆರೈಕೆ ಬಗ್ಗೆ ಗಮನ ಹರಿಸಬೇಕು ಎಂದರು.

ಈ ಸಂದರ್ಭದಲ್ಲಿ ಸಂಘದ ಅಧ್ಯಕ್ಷ ಕೆ.ಪಿ.ಚಂದ್ರಪ್ಪ ಮಾತನಾಡಿ 2023 ರಲ್ಲಿ ಸ್ಥಾಪನೆಗೊಂಡು ಸರ್ವರ ಸಹಕಾರದಿಂದ ಉತ್ತಮವಾಗಿ ಕಾರ್ಯ ನಿರ್ವಹಿಸುತ್ತಾ ಬಂದಿದೆ ಪ್ರಸ್ತುತ ಸಂಘದಲ್ಲಿ 120 ಮಂದಿ ಸದಸ್ಯರಿದ್ದು, 76 ಜನ ಅಜೀವ ಸದಸ್ಯತ್ವ ಪಡೆದಿದ್ದಾರೆ ಆದ್ದರಿಂದ ಎಲ್ಲರೂ ಅಜೀವ ಸದಸ್ಯತ್ವ ಪಡೆಯುವ ಮೂಲಕ ಸಂಘದ ಅಭಿವೃದ್ಧಿಗೆ ಸಹಕರಿಸಬೇಕು ಸಂಘದ ಕಾರ್ಯಚಟುವಟಿಕೆಗಳನ್ನು ನಡೆಸಲು ಹಳೆಯ ಶಿಕ್ಷಕರ ಸಭಾಂಗಣದ ಪ್ರಾಂಗಣದಲ್ಲಿ ತಾತ್ಕಾಲಿಕ ಸ್ಥಳಾವಕಾಶ ಕಲ್ಪಿಸಬೇಕು ಎಂದರು. ಈ ಸಂದರ್ಭದಲ್ಲಿ ಸಂಘದ ಎಂ.ಎನ್.ಮಲ್ಲಪ 2024-25 ನೇ ಸಾಲಿನಲ್ಲಿ ವಾರ್ಷಿಕ ವರದಿ ವಾಚಿಸಿದರು. ಕಾರ್ಯಕ್ರಮದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿ ರವಿ ಪ್ರಸನ್ನ, ಸಂಘದ ಉಪಾಧ್ಯಕ್ಷ ಎಂ.ರಾಮೇಗೌಡ, ಖಜಾಂಚಿ ಶಿವಸ್ವಾಮಿ, ಸಹ ಕಾರ್ಯದರ್ಶಿ ಎಸ್.ಕೆ.ಸೋಮಶೇಖರ್, ಜಂಟಿ ಕಾರ್ಯದರ್ಶಿ ಬ್ರಹ್ಮೇಗೌಡ, ನಿರ್ದೇಶಕರಾಗಿ ಬಿ.ಆರ್. ಬಸವಲಿಂಗೇಗೌಡ, ಹೆಚ್.ಆರ್.ಕುಮಾರಸ್ವಾಮಿ, ನಾರಾಯಣ ಶೆಟ್ಟಿ, ಸ್ವಾಮಿ ನಾಯ್ಕ, ಕೆ.ಎಂ.ನಾಗಪ್ಪ, ಹೆಚ್.ಎಸ್ ಗೌರಮ್ಮ, ಕುಶಾಲ್ ಉಪಸ್ಥಿತರಿದ್ದರು.

# ಧರ್ಮ ದೀಪದ ಬೆಳಕಿನಿಂದ ಅಜ್ಞಾನ ದೂರ: ಶ್ರೀ ರಂಭಾಪುರಿ ಜಗದ್ಗುರುಗಳು



**ತುಮಕೂರು:** ಆಧುನಿಕ ಕಾಲದಲ್ಲಿ ಮನುಷ್ಯ ಯಂತ್ರದಂತೆ ಕೆಲಸ ಮಾಡಿದರೂ ಬದುಕಿನಲ್ಲಿ ಶಾಂತಿ ನೆಮ್ಮದಿಯಿಲ್ಲ. ಬಾಳಿನ ಭಾಗ್ಯೋದಯಕ್ಕೆ ಆಧ್ಯಾತ್ಮಿಕ ಚಿಂತನಗಳು ಅವಶ್ಯಕ. ಧರ್ಮ ದೀಪದ ಬೆಳಕಿನಿಂದ ಮನುಷ್ಯನ ಅಜ್ಞಾನ ದೂರವಾಗುತ್ತದೆ ಎಂದು ಬಾಳೆಹೊನ್ನೂರು ಶ್ರೀ ರಂಭಾಪುರಿ ಡಾ.ವೀರಸೋಮೇಶ್ವರ ಜಗದ್ಗುರುಗಳು ಅಭಿಪ್ರಾಯಪಟ್ಟರು.

ಅವರು ಶುಕ್ರವಾರ ಶ್ರೀ ವಿಶಾಲಾಕ್ಷಮ್ಮ ಸದಾಶಿವಯ್ಯ ಸಭಾಭವನದಲ್ಲಿ ಶ್ರೀ ಜಗದ್ಗುರು ಪಂಚಾಚಾರ್ಯ ಸೇವಾ ಟ್ರಸ್ಟಿನ ಆಶ್ರಯದಲ್ಲಿ ಶ್ರೀ ರಂಭಾಪುರಿ ಜಗದ್ಗುರುಗಳ ಧನುರ್ಮಾಸದ ಇಷ್ಟಲಿಂಗ ಮಹಾಪೂಜಾ ಅಂಗವಾಗಿ ಜರುಗಿದ ಜನ ಜಾಗೃತಿ 2ನೇ ದಿನದ ಧರ್ಮ ಸಮಾರಂಭದ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡುತ್ತಿದ್ದರು.

ಮನುಷ್ಯ ಜೀವನದಲ್ಲಿ ಧರ್ಮ ಅರ್ಥ ಕಾಮ ಮೋಕ್ಷ ಎಂಬ ಚತುರ್ವಿಧ ಪುರುಷಾರ್ಥಗಳಲ್ಲಿ ಒಂದನ್ನಾದರೂ ಸಂಪಾದಿಸಿಕೊಳ್ಳದಿದ್ದರೆ ಜೀವನ ನಿರರ್ಥಕ. ಭೌತಿಕ ಸಂಪನ್ಮೂಲಗಳಾಗಲಿ ಸಿರಿ ಸಂಪತ್ತಿನ ಸಂಗ್ರಹಗಳಾಗಲಿ ಮನುಷ್ಯನಿಗೆ ಸಂತೃಪ್ತಿ ತಂದು ಕೊಡಲಾರವು. ಅದರೊಂದಿಗೆ ಒಂದಿಷ್ಟಾದರೂ ಆಧ್ಯಾತ್ಮಿಕ ತಿಳುವಳಿಕೆ ಮುಖ್ಯ. ಯಾವ ಸಂಪತ್ತಿಗಾಗಿ ಈ ಜೀವ ಜಗತ್ತು ಬದುಕುತ್ತಿದೆಯೋ ಆ ಸಂಪತ್ತಿನ ಪ್ರಾಪ್ತಿಗಾಗಿ ಶ್ರಮಿಸಬೇಕಾಗುತ್ತದೆ. ಮಲಿನಗೊಂಡ ಮನಸ್ಸಿಗೆ ಶಿವಜ್ಞಾನದ ಅರಿವು ಮೂಡಿಸಿ ಜಾಗೃತಗೊಳಿಸುವ ಶಕ್ತಿ ಶ್ರೀ ಗುರುವಿಗೆ ಇದೆ. ಹೃದಯ ಹೃದ್ಭೂಮಿಯನ್ನು ಕೃಷಿಗೈದು ಸಂಸ್ಕಾರ ಸಚ್ಚಾರಿತ್ರ್ಯದಿಂದ ಬದುಕನ್ನು ಶ್ರೀಮಂತಗೊಳಿಸುವ ಅದ್ಭುತ ಶಕ್ತಿ ಗುರುವಿನಲ್ಲಿದೆ. ಶ್ರೀ ಜಗದ್ಗುರು ರೇಣುಕಾಚಾರ್ಯರು ಸಿದ್ಧಾಂತ ಶಿಖಾಮಣಿ ಗ್ರಂಥದಲ್ಲಿ ಗುರು ಹಿರಿಮೆಯನ್ನು ಕೊಂಡಾಡಿದ್ದಾರೆ ಎಂದರು.

ಸಾಹಿತ್ಯ ಸಂಶೋಧಕರಾದ ಡಾ|| ಎ.ಎಸ್.ವಾಲಿ ಅವರು ಮಾತನಾಡಿ ಶಿವಜ್ಞಾನದ ಅಕ್ಷಯ ಸಿದ್ಧಿಯಾದ ಶ್ರೀ ಗುರುವನ್ನು ಎಷ್ಟು ಕೊಂಡಾಡಿದರೂ ಕಡಿಮೆ ಆಗಿದೆ. ಪರಶಿವನ ಸಾಕಾರ ರೂಪ ಗುರುವೆಂದು ವೀರಶೈವ ಧರ್ಮ ಹೇಳುತ್ತದೆ. ಶಿವ ಪಥವನರಿಯಲು ಗುರು ಪಥವೇ ಮೊದಲು ಎಂದು ಭಕ್ತಿ ಭಂಡಾರಿ ಬಸವಣ್ಣನವ್ರು ಹೇಳಿದ್ದುಂಟು. ನಂಬಿದವರ ಬಾಳಿನಲ್ಲಿ ಶ್ರೀ ಗುರು ಅದ್ಭುತ ಶಕ್ತಿ ತುಂಬಿ ಉಜ್ವಲ ಬಾಳಿಗೆ ಬಲವನ್ನು ದೊರಕಿಸಿಕೊಡುವಲ್ಲಿ ಶ್ರೀ ಜಗದ್ಗುರು ರೇಣುಕಾಚಾರ್ಯರಾಗಲಿ ಶ್ರೀ ಜಗದ್ಗುರು ರೇವಣಸಿದ್ಧೇಶ್ವರರಾಗಲಿ ಧಾರ್ಮಿಕ ಕ್ರಾಂತಿಯ ಜೊತೆಗೆ ಸಾಮಾಜಿಕ ಸತ್ಕ್ರಾಂತಿಗೈದ ಕೀರ್ತಿ ಅವರಿಗೆ ಸಲ್ಲುತ್ತದೆ ಎಂದರು. ತಿಪಟೂರು ಷಡಕ್ಷರಿ ಮಠದ ರುದ್ರಮುನಿ ಸ್ವಾಮಿಗಳು ಮಾತನಾಡಿ ವ್ಯಕ್ತಿತ್ವ ವಿಕಾಸಕ್ಕೆ ಧರ್ಮ-ಆಧ್ಯಾತ್ಮಗಳ ಕೊಡುಗೆ ಅಪಾರ. ಭೌತಿಕ ಸಂಪತ್ತು ಶಾಶ್ವತವಲ್ಲ. ಆಧ್ಯಾತ್ಮದ ಸಂಪತ್ತೇ ನಿಜವಾದ ಸಂಪತ್ತು. ಶ್ರೀ ಜಗದ್ಗುರು ರೇಣುಕಾಚಾರ್ಯರ ಮತ್ತು ಬಸವಾದಿ ಶಿವಶರಣರ ವಿಚಾರ ಧಾರೆಗಳು ಬದುಕಿ ಬಾಳುವ ಜನಾಂಗಕ್ಕೆ ಆಶಾಕಿರಣವೆಂದರು. ಸಮಾರಂಭದ ನೇತೃತ್ವ ವಹಿಸಿದ ಸಿದ್ಧರಬೆಟ್ಟ ಕ್ಷೇತ್ರದ ವೀರಭದ್ರ ಶಿವಾಚಾರ್ಯ ಸ್ವಾಮಿಗಳು ಪ್ರಾಸ್ತಾವಿಕವಾಗಿ ಮಾತನಾಡಿ ಮಾನವೀಯ ಸಂಬಂಧಗಳು ಶಿಥಿಲಗೊಳ್ಳುತ್ತಿರುವ ಇಂದಿನ ಸಂದರ್ಭದಲ್ಲಿ ಇಂಥ ಧಾರ್ಮಿಕ ಸಮಾರಂಭಗಳು ಅವಶ್ಯಕ. ಶ್ರೀ ರಂಭಾಪುರಿ ಜಗದ್ಗುರುಗಳ ಧರ್ಮ ಜಾಗೃತಿ ಅಭಿಯಾನ ನಿರಂತರ ಜರುಗುತ್ತಿರುವುದು ಭಕ್ತರ ಸೌಭಾಗ್ಯವೆಂದರು. ಬಿಳಿಕಿ ರಾಚೋಟೇಶ್ವರ ಶ್ರೀಗಳು, ಬೀರೂರು ರುದ್ರಮುನಿ ಶ್ರೀಗಳು, ಮಾದಿಹಳ್ಳಿ ಚನ್ನಮಲ್ಲಿಕಾರ್ಜುನ ಶ್ರೀಗಳು ಉಪಸ್ಥಿತರಿದ್ದರು.

ಶಾಸಕ ಜಿ.ಬಿ.ಜೋತಿಗಣೇಶ, ಅಂಬಿಕಾ ಹುಲಿನಾಯ್ಕರ್, ಟಿ.ಸಿ.ಓಹಿಲೇಶ್ವರ, ಶಶಿ ಹುಲಿಕುಂಟೆಮಠ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡಿದ್ದರು. ಎನ್.ಆರ್.ವಿಶ್ವಾರಾಧ್ಯರು, ಸಿ.ಎಸ್. ಬಸವರಾಜಯ್ಯ, ಹೆಚ್.ಎನ್.ಚಂದ್ರಶೇಖರ, ಡಿ.ಜಗದೀಶ, ಕೆ.ಎಸ್.ದರ್ಶನ ಮೊದಲಾದ ಗಣ್ಯರಿಗೆ ಶ್ರೀ ರಂಭಾಪುರಿ ಜಗದ್ಗುರುಗಳು ಗುರುರಕ್ಷೆಯಿತ್ತು ಶುಭ ಹಾರೈಸಿದರು.

ಕಾರ್ಯದರ್ಶಿ ಹೆಚ್.ಎಸ್. ಭಸ್ಮಾಗಿ ರುದ್ರಯ್ಯನವರು ಸ್ವಾಗತಿಸಿದರು. ಎಸ್.ಓಂಕಾರಸ್ವಾಮಿ ನಿರೂಪಿಸಿದರು.

# 39 ನೇ ರಾಜ್ಯ ಮಟ್ಟದ ಪತ್ರಕರ್ತರ ಸಮ್ಮೇಳನ



**ಬೆಂಗಳೂರು:** ತುಮಕೂರಿನಲ್ಲಿ ನಡೆಯಲಿರುವ ರಾಜ್ಯ ಮಟ್ಟದ 39ನೇ ಪತ್ರಕರ್ತರ ಸಮ್ಮೇಳನಕ್ಕೆ ಆಗಮಿಸುವ ಪ್ರತಿನಿಧಿಗಳ ನೋಂದಣಿಗಾಗಿ ನೋಂದಣಿ ಆ?ಯಪ್ ನ್ನು ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷರಾದ ಶಿವಾನಂದ ತಗಡೂರು ಅವರು ಬಿಡುಗಡೆ ಮಾಡಿದರು.

ತುಮಕೂರಿನ ಪತ್ರಿಕಾ ಭವನದಲ್ಲಿ ನಡೆದ ಸಮ್ಮೇಳನದ ಪೂರ್ವಬಾವಿ ಸಭೆಯಲ್ಲಿ ಆಪ್ ಬಿಡುಗಡೆ ಮಾಡಿ ಮಾತನಾಡಿದರು.

ಸಮ್ಮೇಳನದಲ್ಲಿ ಭಾಗವಹಿಸುವವರನ್ನು ಖಾತರಿಪಡಿಸಿಕೊಂಡು ಸೂಕ್ತ ವ್ಯವಸ್ಥೆ ಮಾಡಲು ಈ ಆಪ್ ನೋಂದಣಿ ಮಾಡಲಾಗಿದೆ. ಕೂಡಲೇ ಇದರಲ್ಲಿ ಪತ್ರಕರ್ತರು ನೋಂದಣಿ ಮಾಡಿಕೊಳ್ಳಬೇಕು ಎಂದು ಕರೆ ನೀಡಿದರು.

ಜನವರಿ 18 ಮತ್ತು 19 ರಂದು ತುಮಕೂರಿನ ಶ್ರೀ ಸಿದ್ಧಾರ್ಥ ತಾಂತ್ರಿಕ ಮಹಾವಿದ್ಯಾಲಯದ ಆವರಣಫ್ಹಲ್ಲಿ ನಡೆಯಲಿದ್ದು ಇದರ ಯಶಸ್ವಿಗೆ ಎಲ್ಲಾ ಪತ್ರಕರ್ತರು ಒಗ್ಗಟ್ಟಿಂದ ಕೆಲಸ ಮಾಡುವಂತೆ ಕರೆ ನೀಡಿದರು.

ಈ ಹಿಂದೆ ಮೈಸೂರು, ಮಂಗಳೂರು, ಕಲಬುರಗಿ, ವಿಜಯಪುರ ಮತ್ತು ದಾವಣಗೆರೆಯಲ್ಲಿ ನಡೆದ ಸಮ್ಮೇಳನಗಳು ಒಂದೊದೊಂದು ವಿಭಿನ್ನವಾಗಿ ನಡೆದು ಮೈಲಿಗಲ್ಲು ಸ್ಥಾಪಿಸಿವೆ. ಈ ಬಾರಿ ಕಲ್ಪತರು ನಾಡಿನಲ್ಲಿ ನಡೆಯುವ ಈ ಸಮ್ಮೇಳನ ಇತಿಹಾಸದಲ್ಲಿ ದಾಖಲಾಗುವಂತೆ ಅರ್ಥಪೂರ್ಣವಾಗಿ ನಡೆಸಬೇಕೆಂದು ಸಲಹೆ ನೀಡಿದರು.

ಸಮ್ಮೇಳನಕ್ಕೆ ಈಬಾರಿ ಐದಾರು ಸಾವಿರ ಪತ್ರಕರ್ತರು ಬರುವ ನಿರೀಕ್ಷೆ ಇದ್ದು ಊಟ ವಸತಿಗೆ ಯಾವುದೇ ತೊಂದರೆಯಾಗದಂತೆ ಈಗಿನಿಂದಲೇ ಜವಾಬ್ದಾರಿಯಿಂದ, ಎಚ್ಚರ ವಹಿಸಲು ಸೂಚಿಸಿದರು.

ಇದೇ ಸಂದರ್ಭದಲ್ಲಿ ವಿವಿಧ ಉಪ ಸಮಿತಿಗಳು ಇಲ್ಲಿಯವರೆಗೆ ತೆಗೆದುಕೊಂಡ ಕ್ರಮವನ್ನು ಖುದ್ದು ಪರಿಶೀಲಿಸಿ ಸಲಹೆ ಸೂಚನೆ ನೀಡಿದರು. ವಿವಿದ ಸಮಿತಿಗಳ ಅಧ್ಯಕ್ಷರುಗಳಿಗೆ ತಾವು ಕೈಗೊಳ್ಳಬೇಕಾದ ಮಾಹಿತಿ ಪುಸ್ತಕವನ್ನು ವಿತರಿಸಿದರು.

ಕೆಯುಡಬ್ಲ್ಯೂಜೆ ಪ್ರಧಾನ ಕಾರ್ಯದರ್ಶಿ ಜಿ.ಸಿ. ಲೋಕೇಶ, ರಾಜ್ಯ ಕಾರ್ಯದರ್ಶಿ ಸೋಮಶೇಖರ ಕೆರಗೋಡು ಅವರು ಮಾತನಾಡಿ, ಯಾವುದೇ ಕೊಂಕು ಮಾತುಗಳಿಗೆ ತಲೆಕೊಡಿಸಿಕೊಳ್ಳದೆ ಸಮ್ಮೇಳನ ಯಶಸ್ವಿಗೆ ಎಲ್ಲರು ದುಡಿಯಬೇಕೆಂದು ಮನವಿ ಮಾಡಿದರು. ಜಿಲ್ಲಾ ಸಂಘದ ಜಿಲ್ಲಾಧ್ಯಕ್ಷ ಪುರುಷೋತ್ತಮ್ ಇಲ್ಲಿಯವರೆಗೆ ಆಗಿರುವ ಕೆಲಸದ ಬಗ್ಗೆ ಮಾಹಿತಿ ಸಭೆಗೆ ನೀಡಿದರು.

# ದೈಹಿಕ ಸದೃಢತೆಗೆ ಕ್ರೀಡೆ ಸಹಕಾರಿ

## ಚಾಮರಾಜನಗರದಲ್ಲಿ ನೆಟ್ ಬಾಲ್ ಚಾಂಪಿಯನ್ ಶಿಪ್ ಪಂದ್ಯಾವಳಿ



**ಚಾಮರಾಜನಗರ:** ವಿದ್ಯಾರ್ಥಿಗಳು ದೈಹಿಕವಾಗಿ ಹಾಗೂ ಮಾನಸಿಕವಾಗಿ ಸದೃಢವಾಗಲುಕ್ರೀಡೆ ಅತ್ಯಗತ್ಯವಾಗಿದೆಎಂದುಕೇಂದ್ರ ಪರಿಹಾರ ಸಮಿತಿ ನಿಕಟ ಪೂರ್ವರಾಜ್ಯಾಧ್ಯಕ್ಷರು ಹಾಗೂ ಜಿಲ್ಲಾ ಪಂಚಾಯಿತಿ ಮಾಜಿಅಧ್ಯಕ್ಷರಾದಎಂ. ರಾಮಚಂದ್ರುಅವರು ತಿಳಿಸಿದರು.

ಚಾಮರಾಜ ನಗರಜಿಲ್ಲಾ ನೆಟ್ಬಾಲ್ ಅಸೋಸಿಯೇಷನ್ ವತಿಯಿಂದ ನಗರದಡಾ.ಬಿ.ಆರ್. ಅಂಬೇಡ್ಕರ್ ಜಿಲ್ಲಾಕ್ರೀಡಾಂಗಣದಲ್ಲಿ ಶುಕ್ರವಾರಆಯೋಜಿಸಲಾಗಿದ್ದ 6ನೇ ರಾಜ್ಯ ಮಟ್ಟದ 19 ವರ್ಷದೊಳಗಿನ ನೆಟ್ಬಾಲ್ ಪಂದ್ಯಾವಳಿ 2024ರ ಸಮಾರೋಪ ಸಮಾರಂಭವನ್ನು ಉದ್ಘಾಟಿಸಿ ನಂತರಕ್ರೀಡೆಯಲ್ಲಿ ಗೆಲುವು ಸಾಧಿಸಿದ ವಿದ್ಯಾಥಿಗಳ ತಂಡಕ್ಕೆ ಬಹುಮಾನವನ್ನುವಿತರಿಸಿ ಮಾತನಾಡಿದರು.

ನೆಟ್ಬಾಲ್ ಪಂದ್ಯಾವಳಿಗೆ ರಾಜ್ಯದಎಲ್ಲಾಜಿಲ್ಲೆಯ ಕ್ರೀಡಾಪಟುಗಳು ಪಾಲ್ಗೊಳ್ಳುವ ಮೂಲಕ ಕ್ರೀಡೆಯಲ್ಲಿಉತ್ತಮ ಪ್ರದರ್ಶನ ನೀಡಿದ್ದೀರಿ. ಕ್ರೀಡಾಪಟುಗಳು ಸೋಲು ಹಾಗೂ ಗೆಲುವನ್ನು ಸಮಾನಾಂತರವಾಗಿ ಸ್ವೀಕರಿಸಬೇಕು ಸೋತಾಗಕುಗ್ಗದೆ, ಗೆದ್ದಾಗ ಹಿಗ್ಗಬಾರದುಎಂದು ಕಿವಿಮಾತು ಹೇಳಿದರು.

ವಿದ್ಯಾರ್ಥಿಗಳು ಓದಿನ ಜೊತೆಗೆಕ್ರೀಡೆಯಲ್ಲಿ ತೊಡಗಿಸಿಕೊಳ್ಳಬೇಕು. ಇದರಿಂದ ಮುಂದಿನ ಭವಿಷ್ಯಉಜ್ವಲವಾಗಲು ಸಹಕಾರಿಯಾಗಲಿದೆಎಂದಅವರು, ನಮ್ಮಜಿಲ್ಲೆಯ ಕ್ರೀಡಾಪಟುಗಳು ರಾಜ್ಯ ಮತ್ತುರಾಷ್ಟ್ರಮಟ್ಟದಲ್ಲೂತಮ್ಮ ಅದ್ಭುತ ಪ್ರದರ್ಶನ ನೀಡುವ ಮೂಲಕ ಉತ್ತಮ ಹೆಸರು ಗಳಿಸುತ್ತಿರುವುದು ಹೆಮ್ಮೆಯ ವಿಚಾರಎಂದು ಸಂತಸ ವ್ಯಕ್ತಪಡಿಸಿದರು. ನಂತರಕ್ರೀಡೆಯಲ್ಲಿ ಗೆಲುವು ಸಾಧಿಸಿದ ವಿದ್ಯಾಥಿಗಳ ತಂಡಕ್ಕೆ ಬಹುಮಾನವನ್ನು ವಿತರಿಸಿದರು.

ಅಸೋಸಿಯೇಷನ್ನ ಗೌರವಾಧ್ಯಕ್ಷ ಶ್ರೀಮತಿ ನರ್ಗೀಸ್ಬಾನುಅವರು ಮಾತನಾಡಿ, ನಮ್ಮ ಅಸೋಸಿಯೇಷನ್ ಪ್ರಾರಂಭವಾದ ವರ್ಷದೊಳಗೆ ಇಂತಹಅವಕಾಶವನ್ನು ನಮಗೆ ರಾಜ್ಯಅಮೆಚೂರ್ ನೆಟ್ಬಾಲ್ ಅಸೋಸಿಯೇಷನ್ ನಮಗೆ ಕಲ್ಪಿಸಿರುವುದು ನಮಗೆ ಸಂತೋಷದ ವಿಚಾರಎಂದರು.

ಒಂದುಕಾರ್ಯಕ್ರಮ ಯಶಸ್ವಿಯಾಗಬೇಕಾದರೆ ಎಲ್ಲರ ಸಹಕಾರಅತ್ಯಗತ್ಯವಾಗಿದೆ.ನಮ್ಮ ಪಂದ್ಯಾವಳಿ ಯಶಸ್ವಿಯಾಗಿರುವುದಕ್ಕೆ ಹಲವರು ದಾನಿಗಳ ಸಹಾಯ ಹಾಗೂ ಸಹಕಾರಕ್ಕೆಧನ್ಯವಾದವನ್ನು ತಿಳಿಸಿದರು.

ವಿದ್ಯಾರ್ಥಿಗಳು ಪಂದ್ಯಾವಳಿಯಲ್ಲಿ ಭಾಗವಹಿಸುವುದು ಬಹಳ ಮುಖ್ಯವಾಗುತ್ತದೆ. ಗೆಲುವು ಸಂತೋಷಕೊಡುತ್ತದೆ.ಸೋಲು ಪಾಠ ಕಲಿಸುತ್ತದೆ. ಎಲ್ಲಿಎಡವಿದ್ದೇವೆಎಂಬುದನ್ನು ಸರಿಪಡಿಸಿಕೊಳ್ಳಲು ಸಹಕಾರಿಯಾಗುತ್ತದೆ.ಸೋಲೆ ಗೆಲುವಿನ ಸೋಪಾನ ಎಂಬಂತೆ ಸೋತವರು ಬೇಸರಪಟ್ಟು ಕೊಳ್ಳಬಾರದು ಕ್ರೀಡೆಯಲ್ಲಿ ತಾಳ್ಮೆ ಅಗತ್ಯ ಎಂದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಅಸೋಸಿಯೇಷನ್ ಅಧ್ಯಕ್ಷರಾದ ವಿ.ಶ್ರೀನಿವಾಸ ಪ್ರಸಾದ್ ಮಾತನಾಡಿ, ಕಳೆದ ಎರಡು ತಿಂಗಳುಗಳ ನಿರಂತರ ಪ್ರಯತ್ನದಿಂದಾಗಿಇಂದುಕಾರ್ಯಕ್ರಮ ಯಶಸ್ವಿಯಾಗಿ ನಡೆದಿದೆಎಂದರು.

ವಿದ್ಯಾರ್ಥಿಗಳಿಗೆ ಶಿಕ್ಷಣದ ಗುಣಮಟ್ಟ ಹೆಚ್ಚಾಗಿರಬೇಕು.ಶಿಕ್ಷಣದ ಜೊತೆಜೊತೆಗೆಕ್ರೀಡೆಯಲ್ಲಿ ಪಾಲ್ಗೊಳ್ಳುವುದು ಸಹ ಅತ್ಯಗತ್ಯವಾಗಿದೆಎಂದರು.

16 ಬಾಲಕರತಂಡ, 12 ಬಾಲಕಿಯರತಂಡದ ಪೈಕಿ ಬಾಲಕಿಯರತಂಡದಲ್ಲಿ ಪ್ರಥಮ ಸ್ಥಾನವನ್ನುಚಾಮರಾಜನಗರದ ಬಾಲಕಿಯರತಂಡ ಪಡೆದುಕೊಂಡಿತು. ದ್ವಿತೀಯ ಸ್ಥಾನವನ್ನು ಹಾಸನ, ತೃತೀಯ ಸ್ಥಾನವನ್ನು ಬೆಂಗಳೂರು ನಗರ ಹಾಗೂ ದಾವಣಗೆರೆತೃತೀಯ ಸ್ಥಾನ ಪಡೆದುಕೊಂಡಿದೆ

ಬಾಲಕರ ವಿಭಾಗದಲ್ಲಿ ಹಾಸನ ಜಿಲ್ಲೆಯ ಬಾಲಕರತಂಡ ಪ್ರಥಮ ಸ್ಥಾನ, ಸಮಬಲದ ಹೋರಾಟ ಮಾಡುವ ಮೂಲಕ ದ್ವಿತೀಯ ಸ್ಥಾನವನ್ನುಚಾಮರಾಜನಗರದ ಬಾಲಕರಜಿಲ್ಲಾತಂಡ ಪಡೆದಿದ್ದು, ತೃತೀಯ ಸ್ಥಾನವನ್ನು ಬೆಂಗಳೂರು ನಗರ ಹಾಗೂ ದಕ್ಷಿಣಕನ್ನಡಜಿಲ್ಲೆಜಂಟಿತೃತೀಯ ಸ್ಥಾನವನು ಪಡೆದುಕೊಂಡಿದೆ.

ಇದೇವೇಳೆ ಗುರುವಾರರಾತ್ರಿ ನಿಧನರಾದ ಮಾಜಿ ಪ್ರಧಾನಿ ಮನಮೋಹನ್ ಸಿಂಗ್ ಅವರಗೌರವಾರ್ಥಒಂದು ನಿಮಿಷ ಮೌನಾಚರಣೆ ಮಾಡಲಾಯಿತು. ರಾಜ್ಯ ನೆಟ್ಬಾಲ್ ಅಸೋಸಿಯೇಷನ್ನ ಕಾರ್ಯದರ್ಶಿ ಸಿ.ಗಿರೀಶ್, ರಾಜ್ಯಉಪಾಧ್ಯಕ್ಷ ಅನಿಲ್, ರಾಜ್ಯಖಜಾಂಚಿ ವಿಶ್ವನಾಥ್ ಎ.ಸಿ., ಭಾರತತಂಡದ ನೆಟ್ಬಾಲ್ಆಟಗಾರ್ತಿ ಸುರಭಿ, ಮೈಸೂರು ನೆಟ್ಬಾಲ್ ಅಸೋಸಿಯೇಷನ್ನ ಕಾರ್ಯದರ್ಶಿ ಲೋಕೇಶ್, ಗೌರವ ಸಲಹೆಗಾರರಾದಅಲಿಖಾನ್ ಸಾಹೇಬ್, ಜಿಲ್ಲಾ ಖೋ ಖೋ ಅಸೋಸಿಯೇಷನ್ನ ಅಧ್ಯಕ್ಷರಾದ ಶಮಿತ್ಕುಮಾರ್, ಹಿರಿಯಕ್ರೀಡಾಪಟು ಶ್ರೀನಿವಾಸಗೌಡ, ಆರ್.ಕೃಷ್ಣಮೂರ್ತಿ, ಜಿಲ್ಲಾನೆಟ್ಬಾಲ್ ಅಸೋಸಿಯೇಷನ್ನ ಉಪಾಧ್ಯಕ್ಷರಾದರಾಜೇಂದ್ರ ಸಿ., ಪ್ರಧಾನ ಕಾರ್ಯದರ್ಶಿ ಮಹದೇವಪ್ರಸಾದ್ ಬಿ., ಸಹ ಕಾರ್ಯದರ್ಶಿ ಸುರೇಶ್ಕುಮಾರ್ ಜಿ., ಖಜಾಂಚಿ ಎಂ.ಸಿ.ಮಹದೇವಸ್ವಾಮಿ, ಸಂಘಟನಾ ಕಾರ್ಯದರ್ಶಿ ಮಧುಕುಮಾರ್ ಸಿ.ಎಂ, ಸದಸ್ಯರಾದದುಂಡಯ್ಯ, ಮಂಜುನಾಥ್, ಅಕ್ಷಯ್ಸಿ.ಎಸ್, ಲೋಕೇಶ್, ನಾಗೇಂದ್ರ ಸಿ., ಶ್ರೀಧರ್, ಶಾಂತಕುಮಾರ್ಎಲ್., ಗಂಗಪ್ಪ ಮತ್ತಿತರರಿದ್ದರು.

# ಕುಡಿಯುವ ನೀರಿನ ಘಟಕ ಸ್ವಚ್ಛಗೊಳಿಸುವ ಕೌಶಲ್ಯ ಕಲಿಯಿರಿ

**ಚಿತ್ರದುರ್ಗ:** ಶಾಲಾ ಕಾಲೇಜುಗಳಲ್ಲಿ, ಬಸ್ ಸ್ಟ್ಯಾಂಡ್ ಗಳಲ್ಲಿ, ಸಾರ್ವಜನಿಕ ಸ್ಥಳಗಳಲ್ಲಿ, ಸ್ಥಾಪನೆ ಮಾಡಿರುವ ಕುಡಿಯುವ ನೀರಿನ ಘಟಕಗಳನ್ನ ಸ್ವತಃ ಕಾರ್ಮಿಕರೇ ಸ್ವಚ್ಚಗೊಳಿಸಿಕೊಂಡು, ಅವುಗಳನ್ನು ನಿರ್ವಹಣೆ ಮಾಡಿದರೆ ಮಾತ್ರ ನಾವು ಅವುಗಳನ್ನ ಸುರಕ್ಷಿತವಾಗಿಟ್ಟುಕೊಂಡು, ಸಾರ್ವಜನಿಕರಿಗೆ, ಮಕ್ಕಳಿಗೆ, ಕಾಲೇಜ್ ವಿದ್ಯಾರ್ಥಿಗಳಿಗೆ ಸಮರ್ಪಕವಾಗಿ ಕುಡಿಯುವ ನೀರನ್ನು ಒದಗಿಸಬಹುದು. ಹಾಗಾಗಿ ಇನ್ನು ಮುಂದೆ ನಾವು ಕುಡಿಯುವ ನೀರಿನ ಘಟಕಗಳನ್ನು ರಿಪೇರಿ ಮಾಡುವುದು ಮತ್ತು ಅವುಗಳನ್ನು ಸರಿಯಾಗಿ ಇಟ್ಟುಕೊಳ್ಳುವುದರ ಬಗ್ಗೆ ಶಾಲಾ-ಕಾಲೇಜುಗಳಲ್ಲಿರುವ ಕೆಲವು ನೌಕರರಿಗೆ, ಸಿಬ್ಬಂದಿಗಳಿಗೆ, ಆಸಕ್ತಿ ಇರುವವರಿಗೆ, ಸೇವಾ ಮನೋಭಾವನೆ ಇರುವವರಿಗೆ ಕಲಿಸಿಕೊಟ್ಟರೆ, ಸ್ವತಃ ಅವರೇ ಕುಡಿಯುವ ನೀರಿನ ಸೋಸುವಿಕೆ ಘಟಕಗಳನ್ನ ಸರಿಪಡಿಸಿ, ಸ್ವಚ್ಛವಾದ, ಆರೋಗ್ಯ ಪೂರ್ಣವಾದ ನೀರನ್ನು ಸ್ವತಃ ಪಡೆದು, ವಿತರಣೆ ಮಾಡಿಕೊಂಡು, ಹಣ ಉಳಿತಾಯದ ಜೊತೆಗೆ, ಕೌಶಲ್ಯ ಅಭಿವೃದ್ಧಿ ಮಾಡಿಕೊಳ್ಳಬಹುದು.ಎಂದು ಕರ್ನಾಟಕ ಜ್ಞಾನ ವಿಜ್ಞಾನ ಸಮಿತಿ ಮತ್ತು ರಾಜ್ಯ ಉಪಾಧ್ಯಕ್ಷ ಮತ್ತು ಕರ್ನಾಟಕ ಸರ್ವೋದಯ ಮಂಡಳಿಯ ಜಿಲ್ಲಾಧ್ಯಕ್ಷ ಡಾ ಎಚ್ ಕೆ ಎಸ್ ಸ್ವಾಮಿಯವರು ಶಾಲಾ ಕಾಲೇಜುಗಳ ಸಿಬ್ಬಂದಿಗಳನ್ನು ವಿನಂತಿಸಿಕೊಂಡಿದ್ದಾರೆ.

ಬಹಳಷ್ಟು ಕುಡಿಯುವ ನೀರಿನ ಘಟಕಗಳನ್ನ ಸ್ಥಾಪನೆ ಮಾಡಿ, ನಂತರ ಅವುಗಳನ್ನ ಸರಿಯಾಗಿ ಇಟ್ಟುಕೊಳ್ಳಲಾರದೆ, ರಿಪೇರಿ ಮಾಡಿಕೊಳ್ಳಲಾಗದೆ, ಸರಿಪಡಿಸಿಕೊಳ್ಳಲಾರದೆ, ಅವುಗಳನ್ನು ಬಾಗಿಲು ಮುಚ್ಚಿ, ಮೂಲೆಗುಂಪು ಮಾಡಿರುವುದನ್ನು ಪ್ರತಿ ಶಾಲಾ ಕಾಲೇಜುಗಳಲ್ಲಿ ನೋಡಬಹುದು. ಆದರೆ ಕುಡಿಯುವ ನೀರಿನ ಘಟಕವನ್ನು ಸಹ ಸ್ವತಃ ನಾವೇ ಕೈಯಿಂದ ಸ್ವಚ್ಛಗೊಳಿಸಿ, ಅವುಗಳನ್ನ ನಿರ್ವಹಣೆ ಮಾಡುವುದನ್ನು ಕಲಿತುಬಿಟ್ಟರೆ, ಯಾವ ಕುಡಿಯುವ ನೀರಿನ ಘಟಕಗಳನ್ನು ವ್ಯರ್ಥವಾಗಿ ಹಾಳು ಮಾಡುವುದಕ್ಕೆ ಬಿಡದೆ, ಸಾರ್ವಜನಿಕ ಹಣವನ್ನ, ಹಾಕಿದ ಬಂಡವಾಳವನ್ನು ಸರಿಯಾಗಿ ಬಳಸಿಕೊಳ್ಳಬಹುದು. ಆಗ ಇಂಥ ಕೌಶಲ್ಯಗಳನ್ನು ಸಾಕಷ್ಟು ಸೇವಾಕೇಂದ್ರಗಳಲ್ಲಿ, ಕೈಗಾರಿಕಾ ತರಬೇತಿಗಳಲ್ಲಿ ನೀಡಿ, ಜನರನ್ನ ಕುಡಿಯುವ ನೀರನ್ನು ಹೇಗೆ ಶುದ್ಧೀಕರಿಸುವುದು, ಎಂಬುವುದನ್ನು ಮಾಹಿತಿ ನೀಡಿದರೆ, ನಾವು ಈಗ ಕುಡಿಯುತ್ತಿರುವಂತಹ ಉಪ್ಪು ನೀರನ್ನು ಶೋಧಿಸಿ, ಆರೋಗ್ಯ ಪೂರ್ಣವಾದ ನೀರನ್ನು ಕುಡಿಯಲು ಅನುಕೂಲಕರವಾಗುವುದು ಎಂದರು.

ಮನೆಯಲ್ಲಿರುವ ಕುಡಿಯುವ ನೀರಿನ ಘಟಕಗಳನ್ನೇ ನಾವು ಸರಿಯಾಗಿ ನಿರ್ವಹಣೆ ಮಾಡಿಕೊಳ್ಳಲಾರದೆ, ಕೆಡಿಸಿಕೊಂಡಿರುತ್ತೇವೆ ಅಥವಾ ಅವುಗಳನ್ನು ರಿಪೇರಿ ಮಾಡಲು ಅತಿ ಹೆಚ್ಚು ಹಣವನ್ನು ವ್ಯರ್ಥ ಮಾಡುತ್ತಿರುತ್ತೇವೆ, ಹಾಗಾಗಿ ಇನ್ನು ಮುಂದೆ ನಾವು ಮನೆಯಲ್ಲೂ ಸಹ ಕುಡಿಯುವ ನೀರಿನ ಘಟಕಗಳನ್ನು ರಿಪೇರಿ ಮಾಡಿಕೊಳ್ಳುವುದು ಹೇಗೆ ಎಂಬುದನ್ನು ತಿಳಿಸಿಕೊಟ್ಟರೆ, ಸಾಕಷ್ಟು ಹಣ ಉಳಿತಾಯದ ಜೊತೆಗೆ, ಜನರು ಸ್ವಾವಲಂಬಿ ಜೀವನವನ್ನು ಸಾಗಿಸಿಕೊಂಡು, ತಮ್ಮಲ್ಲಿರುವಂತಹ ಕುಡಿಯುವ ನೀರಿನ ಘಟಕಗಳನ್ನು ಸರಿಯಾಗಿ ನಿರ್ವಹಣೆ ಮಾಡಿಟ್ಟುಕೊಳ್ಳುತ್ತಾರೆ ಎಂದರು.

ಈಗಾಗಲೇ ಕೆಲವು ಹೋಟೆಲ್ಗಳಲ್ಲಿ, ಬಸ್ ಸ್ಟ್ಯಾಂಡ್ ಗಳಲ್ಲಿರುವ ಕುಡಿಯುವ ಘಟಕಗಳನ್ನ ಅನಾವಶ್ಯಕವಾಗಿ ಮೂಲಗುಂಪು ಮಾಡಿರುವನ್ನ, ತರಬೇತಿಗಾದರೂ ಅವುಗಳನ್ನು ಬಿಚ್ಚಿ, ರಿಪೇರಿ ಮಾಡುವುದು ಮತ್ತು ನಿರ್ವಹಣೆ ಮಾಡುವುದನ್ನು ನಿರುದ್ಯೋಗಿ ಯುವಕರಿಗೆ ತರಬೇತಿ ನೀಡಿದರೆ, ಅವರ ಬದುಕಿಗೊಂದು ಆಶ್ರಯಾಗುತ್ತದೆ ಎಂದರು.

# ನಾಡು, ನುಡಿ, ಭಾಷೆಗಾಗಿ ಹೋರಾಟ

**ಮಾಲೂರು:** ಜೈ ಕನ್ನಡ ರಕ್ಷಣಾ ವೇದಿಕೆಯ ನೂತನ ತಾಲ್ಲೂಕು ಅಧ್ಯಕ್ಷರಾಗಿ ಮುರಳಿ.ಕೆ ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ನಡೆದ ಸಭೆಯಲ್ಲಿ ರಾಜ್ಯಾಧ್ಯಕ್ಷ ನೆಲಮಂಗಲ ಬಾಬು ಅವರ ಆದೇಶದಂತೆ ರಾಜ್ಯ ಉಪಾಧ್ಯಕ್ಷ ಚನ್ನಕಲ್ ಗುರೇಶ್ ಅಧ್ಯಕ್ಷತೆಯಲ್ಲಿ ಎಲ್ಲಾ ಪದಾಧಿಕಾರಿಗಳು ಸರ್ವಾನುಮತದಿಂದ ತಾಲ್ಲೂಕು ಅಧ್ಯಕ್ಷರನ್ನಾಗಿ ಮುರಳಿ.ಕೆ ಅವರನ್ನು ಘೋಷಣೆ ಮಾಡಲಾಯಿತು. ನೂತನ ತಾಲ್ಲೂಕು ಅಧ್ಯಕ್ಷ ಕೆ.ಮುರಳಿ ಮಾತನಾಡಿ, ಜೈ ಕನ್ನಡ ರಕ್ಷಣಾ ವೇದಿಕೆಯ ತಾಲ್ಲೂಕು ಜವಾಬ್ದಾರಿಯನ್ನು ನೀಡಿದ್ದು, ಸಂಘಟನೆಯು ಬಡವರ ಪರವಾಗಿ ಹಾಗೂ ನಾಡು, ನುಡಿ, ಜಲ, ಭಾಷೆಗೆ ನಿರಂತರವಾಗಿ ಹೋರಾಟಗಳನ್ನು ನಡೆಸಿಕೊಂಡು ಬರುತ್ತಿದೆ. ರಾಜ್ಯ ಸರ್ಕಾರ ಶೇಕಡ 60ರಷ್ಟು ಕಡ್ಡಾಯವಾಗಿ ಕನ್ನಡ ನಾಮಫಲಕಗಳನ್ನ ಅಳವಡಿಸಲು ಆದೇಶಿಸಿದ್ರು ಇನ್ನೂ ಸಹ ಇಂಗ್ಲಿಷ್ ನಾಮಫಲಕ ತೆರವು ಗೊಳಿಸುವಲ್ಲಿ ವಿಫಲರಾಗಿದ್ದಾರೆ. ಅಲ್ಲದೆ ಕಾರ್ಖಾನೆಗಳಲ್ಲಿ ಹಿಂದಿ ಹಾಗೂ ಪರ ಭಾಷೆಯ ಕಾರ್ಮಿಕರು ಹೆಚ್ಚಾಗಿ ವಲಸೆ ಬರುತ್ತಿದ್ದು, ಕನ್ನಡಿಗರಿಗೆ ಉದ್ಯೋಗಾವಕಾಶ ಸಿಗದೇ ವಂಚಿತರಾಗುತ್ತಿದ್ದು, ಮುಂದಿನ ದಿನಗಳಲ್ಲಿ ಕನ್ನಡಿಗರಿಗೆ ಉದ್ಯೋಗ ಮೀಸಲಾತಿಗಾಗಿ ಬೃಹತ್ ಪ್ರತಿಭಟನೆ ನಡೆಸಿ ಸಂಘಟನೆಯನ್ನು ಇನ್ನೂ ಹೆಚ್ಚು ಬಲಿಷ್ಠಗಳಿಸುತ್ತೇವೆ ಎಂದು ಹೇಳಿದರು,




# ರಾಜ್ಯ ಮಟ್ಟದ ಕವಿಗೋಷ್ಠಿಗೆ ಕವನಗಳ ಆಹ್ವಾನ

**ಬೆಂಗಳೂರು:** ಮಣೂರ ಪ್ರಕಾಶನ ಕಲಬುರಗಿ ಇವರ ವತಿಯಿಂದ ಮಕರ ಸಂಕ್ರಾ೦ತಿ ನಿಮಿತ್ತ ಚೆನ್ನಮ್ಮಾಜಿಯವರ ಐಕ್ಯ ಸ್ಥಳವಾದ ಬೈಲಹೊಂಗಲದಲ್ಲಿ ಜನವರಿ 12ರಂದು ರಾಜ್ಯಮಟ್ಟದ ಕವಿಗೋಷ್ಠಿ ಆಯೋಜಿಸಲಾಗಿದೆ.ಈ ನಿಮಿತ್ತ ಉದಯೋನ್ಮುಖ ಹಾಗೂ ಪ್ರತಿಭಾವಂತ ಕವಿಗಳಿಂದ ಕರ್ನಾಟಕದ ಸಾಂಸ್ಕೃತಿಕ ನಾಯಕ ಬಸವಣ್ಣ, ವೀರರಾಣಿ ಕಿತ್ತೂರು ಚನ್ನಮ್ಮ, ಸ್ವಾತಂತ್ರ್ಯ ಹೋರಾಟಗಾರರು, ಕನ್ನಡ ನಾಡು, ನುಡಿ, ಇತಿಹಾಸ, ಸಂಸ್ಕೃತಿ, ಪರಂಪರೆ, ಪರಿಸರ ಪ್ರೇಮ, ರಾಷ್ಟ್ರಪ್ರೇಮ, ಮಾನವೀಯ ಮೌಲ್ಯಗಳು ಇತ್ಯಾದಿ ವಿಷಯಗಳಿಗೆ ಸಂಬಂಧಿಸಿದಂತೆ ಕವನಗಳನ್ನು ಆಹ್ವಾನಿಸಲಾಗಿದೆ. ಕವನವು 30 ಸಾಲುಗಳಿಗೆ ಮಿಕ್ಕದಂತೆ ಕಾಗದದ ಒಂದೇ ಮಗ್ಗುಲಲ್ಲಿ ಬರೆದು ಅಥವಾ ಡಿಟಿಪಿ ಮಾಡಿಸಿರಬೇಕು. ಸ್ವವಿಳಾಸ, ಕಿರುಪರಿಚಯ, ಭಾವಚಿತ್ರ, ವಾಟ್ಸಪ್ ಮೊಬೈಲ್ ಸಂಖ್ಯೆಯೊ೦ದಿಗೆ ಜನವರಿ 5ರ ಒಳಗಾಗಿ ಮೋಹನ ಬಸನಗೌಡ ಪಾಟೀಲ, ಮಾಜಿ ಜಿಲ್ಲಾಧ್ಯಕ್ಷರು, ಕನ್ನಡ ಸಾಹಿತ್ಯ ಪರಿಷತ್ತು, 'ಬಸವ ನಿವಾಸ', ಚನ್ನಮ್ಮನಗರ ಮೊದಲನೆಯ ಅಡ್ಡರಸ್ತೆ, ಬೈಲಹೊಂಗಲ- 591102, ಬೆಳಗಾವಿ ಜಿಲ್ಲೆ. ಈ ವಿಳಾಸಕ್ಕೆ ನೋಂದಾಯಿತ ಅಂಚೆ ಮೂಲಕ ಕಳಿಸಬೇಕು. ಹೆಚ್ಚಿನ ಮಾಹಿತಿಗಾಗಿ ಮೊಬೈಲ್ 94489 20888 ಸಂಪರ್ಕಿಸಬೇಕೆ೦ದು ಮಣೂರ ಪ್ರಕಾಶನದ ಮುಖ್ಯಸ್ಥರಾದ ಡಾ. ಫಾರೂಕ್ ಅಹಮ್ಮದ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# 45ಕ್ಕೂ ಹೆಚ್ಚು ದೇವರು ದರ್ಶನ

**ತಿಪಟೂರು:** ನಮ್ಮ ತಂದೆ ದಿ ಟಿ.ವೀರಯ್ಯನವರ ಹೆಸರು ಚಿರಶಾಶ್ವತವಾಗಿ ಉಳಿಯಲೆಂದು ಮತ್ತು ಅವರ ಸವಿನೆನಪಿನೊಂದಿಗೆ, ದೇವರುಗಳಲ್ಲಿ ಪ್ರಾರ್ಥಿಸುತ್ತ ತಾಲೂಕಿಗೆ ಉತ್ತಮವಾದ ಮಳೆ ಬೆಳೆಯಾಗಿ ರೈತರಲ್ಲಿ ಮಂದಹಾಸ ಮೂಡಿ, ಸುಖದಿಂದ ಜೀವನ ನಡೆಸಲೆಂದು ಮತ್ತು ಧಾರ್ಮಿಕತೆಗೆ ಹೆಸರಾದ ತಿಪಟೂರನ್ನು ಉನ್ನತ ಮಟ್ಟಕ್ಕೆ ಕೊಂಡಯ್ಯಲೆಂದು ನಮ್ಮ ತಾಲೂಕಿನ,ಅಕ್ಕಪಕ್ಕ ತಾಲೂಕುಗಳಾದ ಅರಸೀಕೆರೆ ಮತ್ತು ಚಿಕ್ಕನಾಯಕನಹಳ್ಳಿ ಒಳಗೊಂಡ ಸುಮಾರು 45ಕ್ಕೂ ಹೆಚ್ಚು ಗ್ರಾಮದೇವರ ಶಕ್ತಿದೇವರಗಳನ್ನು ಒಂದೇ ವೇದಿಕೆಯಡಿ ಕರೆತಂದು, ಸಮ್ಮಿಲನದೊಂದಿಗೆ ತಾಲೂಕಿನ ಕಸಬಾ ಹೋಬಳಿಯ ಅಯ್ಯನಬಾವಿ ಹತ್ತಿರವಿರುವ ಬೊಮ್ಮಲಾಪುರ ರಸ್ತೆಯ ತೋಟದ ಮನೆಯಲ್ಲಿ ದೇವತಾ ಕಾರ್ಯವನ್ನು ನಮ್ಮ ಕುಟುಂಬದಿಂದ ಹಮ್ಮಿಕೊಂಡಿದ್ದೇವೆ ಎಂದು ಕೆಪಿಸಿಸಿ ಸದಸ್ಯ ವಿ. ಯೋಗೇಶ್ ತಿಳಿಸಿದರು. ಸುಮಾರು ಐದು ವರ್ಷದಿಂದ ಇಂತಹ ಧಾರ್ಮಿಕ ಕಾರ್ಯಕ್ರಮವನ್ನು ಹಮ್ಮಿಕೊಂಡು ಬರುತ್ತಿದ್ದು, ಮುಂದೆ ಕೂಡ ಶಕ್ತಿ ದೇವರುಗಳ ಆಶೀರ್ವಾದದಿಂದ ಇಂತಹ ಧಾರ್ಮಿಕ ಮತ್ತು ದೇವತಾ ಕಾರ್ಯಕ್ರಮವನ್ನು ನಡೆಸಿಕೊಂಡು ಹೋಗುತ್ತೇವೆ. ದೇವತಾ ಕಾರ್ಯಕ್ರಮದ ಕಾರ್ಯಕ್ರಮದ ಹಿಂದಿನ ದಿನ ಎಲ್ಲಾ ದೇವರುಗಳ ಮಣೇವು ಮತ್ತು ಉತ್ಸವ ಹಮ್ಮಿಕೊಂಡಿದ್ದು,ಮಾರನೇ ದಿನ ಸಾವಿರಾರು ಭಕ್ತಾದಿಗಳಿಗೆ ಮತ್ತು ಸಾರ್ವಜನಿಕರಿಗೆ ದಾಸೋಹ ವ್ಯವಸ್ಥೆಯನ್ನು ಕಲ್ಪಿಸಲಾಗಿತ್ತು. ಲೋಕೇಶ್ ವೀರಯ್ಯ ಸೇರಿದಂತೆ ಕುಟುಂಬದವರು, ನಗರಸಭಾ ಸದಸ್ಯರುಗಳು, ಚುನಾಯಿತ ಜನಪ್ರತಿನಿಧಿಗಳು, ವಿವಿಧ ಪಕ್ಷಗಳ ಮುಖಂಡರುಗಳು ಮತ್ತು ಪಕ್ಷ ಭೇದ ಮರೆತು ನೂರಾರು ಮುಖಂಡರು ಈ ದೇವತಾ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ದಸರೀಘಟ್ಟ ಶ್ರೀ ಚೌಡೇಶ್ವರಿ, ಹಂದನಕೆರೆ ಶ್ರೀ ಗುರು ಗಿರಿಸಿದ್ದೇಶ್ವರ,ತಿಪಟೂರು ಶ್ರೀ ಕೆಂಪಾಂಬ,ಶ್ರೀ ಬಿದಿರಾಂಬಿಕ, ಹೆಚ್.ಬೈರಾಪುರ ಶ್ರೀ ಕರಿಯಮ್ಮ,ಶ್ರೀ ಹೊಸ ಪಟ್ಟಣದಮ್ಮ ಮತ್ತು ಚೌಲೀಹಳ್ಳಿ ಶ್ರೀ ಕರಿ ಕಲ್ಲಮ್ಮ ಸೇರಿದಂತೆ ಸುಮಾರು 45ಕ್ಕೂ ಹೆಚ್ಚು ಗ್ರಾಮದ ಶಕ್ತಿ ದೇವರುಗಳು ಆಗಮಿಸಿದ್ದು ವಿಶೇಷವಾಗಿತ್ತು.

# ಮ್ಯಾನ್ಯುಯಲ್ ಸ್ಕ್ಯಾವೆಂಜರ್ಸ್ ಸರ್ವೇ ವಿವರ ಪ್ರಕಟ: ಆಕ್ಷೇಪಣೆ ಸಲ್ಲಿಕೆಗೆ ಅವಕಾಶ

**ಚಾಮರಾಜನಗರ:** ರಾಷ್ಟ್ರೀಯ ಸಫಾಯಿ ಕರ್ಮಚಾರಿ ಆಯೋಗದ ವತಿಯಿಂದ ಮ್ಯಾನ್ಯುಯಲ್ ಸ್ಕ್ಯಾವೆಂಜರ್ಸ್-2024ರ ಸಮೀಕ್ಷೆ ಕೈಗೊಳ್ಳಲಾಗಿದೆ. ಸರ್ವೇ ಕಾರ್ಯದ ವಿವರಗಳನ್ನು ತಾಲೂಕು ಪಂಚಾಯಿತಿ ಮತ್ತು ಗ್ರಾಮ ಪಂಚಾಯಿತಿಗಳ ಸೂಚನಾ ಫಲಕದಲ್ಲಿ ಪ್ರಚುರಪಡಿಸಲಾಗಿದ್ದು, ಆಕ್ಷೇಪಣೆಗಳಿದ್ದಲ್ಲಿ ಡಿಸೆಂಬರ್ 31 ರೊಳಗೆ ಸಂಬಂಧಪಟ್ಟ ತಾಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಸಲ್ಲಿಸುವಂತೆ ಮ್ಯಾನ್ಯುಯಲ್ ಸ್ಕ್ಯಾವೆಂಜರ್ ಸಮೀಕ್ಷೆಯ ನೋಡೆಲ್ ಅಧಿಕಾರಿ ಹಾಗೂ ಜಿಲ್ಲಾ ಪಂಚಾಯತ್ ಉಪ ಕಾರ್ಯದರ್ಶಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ವಿಶ್ವವಿಖ್ಯಾತ ಪಿ.ಸಿ ಸರ್ಕಾರ್ ಮ್ಯಾಜಿಕ್ ಶೋ

**ಬೆಂಗಳೂರು:** ವಿಶ್ವವಿಖ್ಯಾತ ಜಾದುಗಾರರಾದ ಪಿ.ಸಿ ಸರ್ಕಾರ್ (ಪೋರುಶ್) ಅವರು ಮತ್ತೊಮ್ಮೆ ಡಿಸೆಂಬರ್ 28 ಮತ್ತು 29 ರಂದು ನಗರದ ಟೌನ್ ಹಾಲ್‌ನಲ್ಲಿ ಮೆಗಾ ಮ್ಯಾಜಿಕ್ ಶೋ ಇಂದ್ರಜಾಲ ಪ್ರದರ್ಶನ ನಡೆಸಿಕೊಡಲಿದ್ದಾರೆ. ವಿಶ್ವವಿಖ್ಯಾತ ಜಾದೂಗಾರ ಪಿ.ಸಿ. ಸರ್ಕಾರ್ (ಪೋರುಶ್) ನಗರದಲ್ಲಿದ್ದು, ತಮ್ಮ ಮಂತ್ರಮುಗ್ಧಗೊಳಿಸುವ ಮೆಗಾ ಮ್ಯಾಜಿಕ್ ಶೋ ಇಂದ್ರಜಾಲ ಪ್ರದರ್ಶನದ ಮೂಲಕ ಜನರನ್ನು ರಂಜಿಸಲಿದ್ದಾರೆ. ಜೆ.ಸಿ.ರಸ್ತೆಯಲ್ಲಿರುವ ಟೌನ್ ಹಾಲ್ ನಲ್ಲಿ ಡಿಸೆಂಬರ್ 28 ಮತ್ತು 29 ರಂದು (ಕೇವಲ 2 ದಿನಗಳ) ಮ್ಯಾಜಿಕ್ ಪ್ರದರ್ಶನ ನೀಡಲಿದ್ದಾರೆ. ಡಿಸೆಂಬರ್ 28 ಎರಡು ಪ್ರದರ್ಶನಗಳು ಹಾಗೂ ಡಿಸೆಂಬರ್ 29 ರಂದು ಮೂರು ಪ್ರದರ್ಶನಗಳನ್ನು ಆಯೋಜಿಸಲಾಗಿದೆ.ವಿವರಗಳಿಗೆ: 96064 34666.

# ಟೌನ್ ಕಾಂಗ್ರೆಸ್‌ನಿಂದ ಶ್ರದ್ಧಾಂಜಲಿ ಸಭೆ



**ವಿಜಯಪುರ:** ಪಟ್ಟಣದ ಪ್ರವಾಸಿಮಂದಿರದಲ್ಲಿ ಶುಕ್ರವಾರ ಮಾಜಿ ಪ್ರಧಾನಿ ಡಾ.ಮನಮೋಹನ್ ಸಿಂಗ್ ಅವರಿಗೆ ಟೌನ್ ಕಾಂಗ್ರೆಸ್ ವತಿಯಿಂದ ಶ್ರದ್ಧಾಂಜಲಿ ಸಭೆ ಆಯೋಜನೆ ಮಾಡಲಾಗಿತ್ತು. ಕಾಂಗ್ರೆಸ್ ಮುಖಂಡರು, ಡಾ.ಮನಮೋಹನ್ ಸಿಂಗ್ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು.

ಕೆಪಿಸಿಸಿ ಕಾರ್ಯದರ್ಶಿ ವಿ.ಮಂಜುನಾಥ್ ಮಾತನಾಡಿ, ಪ್ರಧಾನಿಯಾಗಿ 10 ವರ್ಷಗಳ ಕಾಲ ಈ ರಾಷ್ಟವನ್ನು ಮುನ್ನಡೆಸುವುದರ ಜೊತೆಗೆ, 1991 ರಲ್ಲಿ ಪ್ರಧಾನಿಯಾಗಿದ್ದ ಪಿ.ವಿ.ನರಸಿಂಹರಾವ್ ಅವರ ಸಂಪುಟದಲ್ಲಿ ಹಣಕಾಸು ಸಚಿವರಾಗಿ ಕಾರ್ಯನಿರ್ವಹಿಸುವ ಮೂಲಕ ದೇಶವನ್ನು ಆರ್ಥಿಕ ಸಂಕಷ್ಟದಿಂದ ಪಾರು ಮಾಡಿದ್ದರು. ವಿದೇಶಗಳು ಆರ್ಥಿಕವಾಗಿ ಸಂಕಷ್ಟ ಎದುರಿಸುವಾಗ ಸಲಹೆ ನೀಡುತ್ತಿದ್ದ ಅವರು, ದೇಶದಲ್ಲಿ ಉತ್ತಮ ಆರ್ಥಿಕ ತಜ್ಞರಾಗಿದ್ದರು. ರಿಸರ್ವ್ ಬ್ಯಾಂಕಿನ ಗೌರ್ವನರ್ ಆಗಿ ಕೆಲಸ ಮಾಡಿದ್ದಾರೆ. ಮಾಹಿತಿ ಹಕ್ಕು ಕಾಯಿದೆ, ಆಹಾರ ಭದ್ರತಾ ಕಾಯಿದೆ, ನರೇಗಾ ಯೋಜನೆ ಸೇರಿದಂತೆ ಹಲವಾರು ಯೋಜನೆಗಳನ್ನು ಜಾರಿಗೊಳಿಸುವ ಮೂಲಕ ದೇಶವನ್ನು ವಿಶ್ವದಲ್ಲೆ ಸಂಪದ್ಭರಿತ ರಾಷ್ಟವನ್ನಾಗಿ ಮಾಡಿದ್ದರು. ಇಂತಹ ಸರಳ ಸ್ವಭಾವ ಹಾಗೂ ಅವರ ಜೀವನ ಶೈಲಿಯನ್ನು ರಾಜಕಾರಣಿಯನ್ನು ನಾವೆಲ್ಲರೂ ಮಾದರಿಯಾಗಿ ತೆಗೆದುಕೊಳ್ಳಬೇಕು ಎಂದರು.

ಜಿಲ್ಲಾ ಕಾಂಗ್ರೆಸ್ ಅಲ್ಪಸಂಖ್ಯಾತ ಘಟಕದ ಅಧ್ಯಕ್ಷ ಗೌಸ್ ಖಾನ್ ಮಾತನಾಡಿ, ಸರಳ ಸ್ವಭಾವದ ಮನಮೋಹನ್ ಸಿಂಗ್ ಅವರು ಪ್ರಧಾನಿಯಾಗಿದ್ದಾಗ ತೆಗೆದುಕೊಂಡಿದ್ದ ತೀರ್ಮಾನಗಳಿಂದಾಗಿ ಇಂದು ದೇಶವು ವಿಶ್ವಮಟ್ಟದಲ್ಲಿ ಗುರ್ತಿಸಿಕೊಳ್ಳುವಂತಾಗಿದೆ. ಅವರ ಅವಧಿಯಲ್ಲಿನ ಪಾರದರ್ಶಕವಾದ ಆಡಳಿತದಿಂದಾಗಿ ಕೋಟ್ಯಾಂತರ ಮಂದಿ ಜೀವನ ರೂಪಿಸಿಕೊಳ್ಳಲು ಸಾಧ್ಯವಾಗಿದೆ. ಅವರ ರಾಜಕೀಯದ ಹಾದಿಯಲ್ಲಿನ ಅನುಭವಗಳು ನಮಗೆ ಸ್ಪೂರ್ತಿಯಾಗಿವೆ ಎಂದರು. ಪುರಸಭೆ ಸದಸ್ಯ ಎ.ಆರ್. ಹನೀಫುಲ್ಲಾ ಮಾತನಾಡಿ, ವಿಶ್ವದ ಆರ್ಥಿಕ ತಜ್ಞರ ಪೈಕಿ ಒಬ್ಬರಾಗಿದ್ದ ಮನಮೋಹನ್ ಸಿಂಗ್ ಅವರು, ಈ ದೇಶದ ಎಲ್ಲಾ ಜಾತಿ ವರ್ಗಗಳ ಜನರ ಸೇವಕನಾಗಿ ಕೆಲಸ ಮಾಡಿದ್ದಾರೆ. ವಿದೇಶಗಳಲ್ಲಿ ಅವರ ಬಗ್ಗೆ ಇರುವ ಅಪಾರವಾದ ಪ್ರೀತಿ ಮತ್ತು ಕಾಳಜಿಯನ್ನು ಗಮನಿಸಿದಾಗ ಅವರ ವ್ಯಕ್ತಿತ್ವ ಎಂತಹದ್ದು ಎಂಬುದು ಅರ್ಥವಾಗುತ್ತದೆ ಎಂದರು. ಟೌನ್ ಕಾಂಗ್ರೆಸ್ ಅಧ್ಯಕ್ಷ ವಿ.ಎಂ.ನಾಗರಾಜ್, ಪ್ರಧಾನ ಕಾರ್ಯದರ್ಶಿ ಎಸ್.ಮಂಜುನಾಥ್, ಪುರಸಭೆ ಸದಸ್ಯರಾದ ಎಂ.ನಾರಾಯಣಸ್ವಾಮಿ, ಎಂ.ರಾಜಣ್ಣ, ಅಲ್ಪಸಂಖ್ಯಾತ ಘಟಕದ ಜಿಲ್ಲಾ ಉಪಾಧ್ಯಕ್ಷ ವಲ್ಲಿಜಾನ್, ಜೆ.ಎನ್.ಶ್ರೀನಿವಾಸ್, ಬಿ.ವಿ.ಕೃಷ್ಣಪ್ಪ, ಮಧು, ಎಜಾಜ್, ಎಂ.ವೇಣುಗೋಪಾಲ್, ಹರೀಶ್, ಸೊಣ್ಣೇಗೌಡ, ರಮೇಶ್, ಮುಂತಾದವರು ಹಾಜರಿದ್ದರು.

# ಅಪರೂಪದ ರಾಜಕಾರಣಿ ಸಿಂಗ್

**ವಿಜಯಪುರ:** ಅತ್ಯಂತ ಕ್ಲಿಷ್ಟ ಪರಿಸ್ಥಿತಿಯಲ್ಲಿ ದೇಶ ಸಂಪೂರ್ಣ ಆರ್ಥಿಕತೆಯಲ್ಲಿ ಹಿನ್ನೆಡೆಯಲ್ಲಿದ್ದಾಗ ಅತ್ಯುತ್ತಮ ಬಜೆಟ್ ಗಳನ್ನು ಮಂಡಿಸುವ ಮೂಲಕ ನಂತರ ದೇಶದಲ್ಲಿ ಆಹಾರ ಭದ್ರತಾ ಯೋಜನೆಯನ್ನು ಜಾರಿಗೊಳಿಸುವ ಮೂಲಕ ದೇಶದಲ್ಲಿ ಯಾರು ಹಸಿವಿನಿಂದ ಸಾಯಬಾರದೆಂದು ಚಿಂತನೆ ನಡೆಸಿದ ಮಾಜಿ ಪ್ರಧಾನಿ ಮನಮೋಹನ್ ಸಿಂಗ್ ರವರು ಆಗಿದ್ದರೆಂದು ಪುರಸಭಾ ಮಾಜಿ ಅಧ್ಯಕ್ಷ ಎಂ ಸತೀಶ್ ಕುಮಾರ್ ತಿಳಿಸಿದರು.

ಅವರು ಇಲ್ಲಿನ ಪ್ರಗತಿ ಪ್ರೌಢಶಾಲಾ ಆವರಣದಲ್ಲಿ ಕಾಂಗ್ರೆಸ್ ಪಕ್ಷದ ವತಿಯಿಂದ ಆಯೋಜಿಸಲಾಗಿದ್ದ ಮಾಜಿ ಪ್ರಧಾನಿ ಡಾಕ್ಟರ್ ಮನಮೋಹನ್ ಸಿಂಗ್ ರವರ ಶ್ರದ್ಧಾಂಜಲಿ ಸಭೆಯಲ್ಲಿ ಮಾತನಾಡುತ್ತಿದ್ದರು. ಪ್ರಗತಿ ಶಿಕ್ಷಣ ಸಂಸ್ಥೆಗಳ ವತಿಯಿಂದ ಆಯೋಜಿಸಿದ್ದ ಎರಡು ದಿನಗಳ ಕಾಲದ ಪ್ರಗತಿ ಮಹೋತ್ಸವ 2024 25ನ್ನು ಮುಂದುವರಿದ ನಂತರ ಮುಂದೂಡಿದ ನಂತರ ಡಾಕ್ಟರ ಮನಮೋಹನ್ ಸಿಂಗ್ ರವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಮಾತನಾಡಿದರು. ಇವರು ಹಣಕಾಸು ಸಚಿವರಾಗಿ ಮಾದರಿಯಾದ ಉದಾರಿಕರಣದ ಬಜೆಟ್ ಗಳನ್ನು ಮಂಡಿಸುವ ಮೂಲಕ ಉದಾರೀಕರಣ,ಜಾಗತೀಕರಣ,ಮೂಲಕ ದೇಶ ವಿದೇಶಗಳಿಂದ ಹೆಚ್ಚಿನ ಹಣಕಾಸಿನ ಹರಿವನ್ನು ಹರಿದು ಬರುವಂತೆ ಮಾಡಿದರೆಂದು ತಿಳಿಸಿದರು.

ಈ ಸಂದರ್ಭದಲ್ಲಿ ಪುರಸಭಾ ಮಾಜಿ ಸ್ಥಾಯಿ ಸಮಿತಿ ಅಧ್ಯಕ್ಷರಾದ ಮುನಿಚಿನ್ನಪ್ಪ, ಸದಸ್ಯರಾದ ನಂದಕುಮಾರ್ ಮಾಜಿ ಸದಸ್ಯರುಗಳಾದ ಸಂಪತ್ ಕುಮಾರ್, ಹರೀಶ್, ಮುಖಂಡರುಗಳಾದ ಕೆಎಂ ಮಧು, ವಿನಯ್, ಮೇಲೂರು ಎಚ್ ಟಿ ನಾರಾಯಣಸ್ವಾಮಿ ,ಹನುಮಂತರಾಯಪ್ಪ, ಪ್ರಗತಿ ಪ್ರೌಢಶಾಲಾ ಮುಖ್ಯ ಶಿಕ್ಷಕರಾದ ವಿ ಬಸವರಾಜು, ಪ್ರಾಥಮಿಕ ಶಾಲಾ ಮುಖ್ಯ ಶಿಕ್ಷಕರಾದ ಪ್ರಕಾಶ್, ಪ್ರಗತಿ ಐಟಿಐ ಕಾಲೇಜಿನ ಪ್ರಾಂಶುಪಾಲರಾದ ಹರೀಶ್, ಪ್ರಗತಿ ಬಾಲಕಿಯರ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲರಾದ ಮಧು, ಪ್ರಗತಿ ಸಂಯುಕ್ತ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲರಾದ ಸುರೇಶ್, ಶಾಂತಕುಮಾರ್, ನಟರಾಜ್, ನಳಿನಿ ಮತ್ತು ಇತರೆ ಉಪನ್ಯಾಸಕ ಸಿಬ್ಬಂದಿ ವರ್ಗದ ವರ್ಗಗಳು ಉಪಸ್ಥಿತರಿದ್ದರು



ಸಂಜೆ ಟಿಪ್ಸ್

## ಆರ್ಥಿಕ ದುರುಪಯೋಗ: ಪೊಲೀಸರಿಗೆ ದೂರು

ಕಾರ್ಡ್ ರೋಡ್ ಹಾಸ್ಪಿಟಲ್ ಪ್ರೈವೇಟ್ ಲಿಮಿಟೆಡ್‌ನ 50% ಷೇರುದಾರ ನಿರ್ದೇಶಕರಾದ ಶ್ರೀ ಪ್ರಕಾಶ್ ಡಿಯೋ ಅವರು ತಮ್ಮ ಸಹ ನಿರ್ದೇಶಕರಾದ, ಕಾರ್ಡ್ ರೋಡ್ ಹಾಸ್ಪಿಟಲ್ ಪ್ರೈವೇಟ್ ಲಿಮಿಟೆಡ್‌ನ 40% ಷೇರುದಾರ ನಿರ್ದೇಶಕರಾದ ಶ್ರೀಮತಿ ಡಿ.ಎಂ. ಶೋಭಾ ಮಹೇಶ್ ಮತ್ತು ಅವರ ಪುತ್ರ 10% ಷೇರುದಾರರಾದ ಶ್ರೀ. ಶಶಾಂಕ್ ಮಹೇಶ್ ವಿರುದ್ಧ ಆರ್ಥಿಕ ದುರುಪಯೋಗ ಕುರಿತಾಗಿ ಪೊಲೀಸ್ ದೂರು ದಾಖಲಿಸಿದ್ದಾರೆ. ಆರೋಪಿಯು ಸಹ ನಿರ್ದೇಶಕಿ ಶ್ರೀಮತಿ ಡಿಎಂ ಶೋಭಾ ಅವರ ಪುತ್ರನಾಗಿದ್ದಾರೆ. ಎಫ್‌ಐಆರ್ ನಂ. 225/224 ಮತ್ತು ಚಾರ್ಜ್ ಶೀಟ್ ಸಂಖ್ಯೆ. 29644/2024ರ ಅಡಿಯಲ್ಲಿ ದಾಖಲಿಸಲಾದ ದೂರಿನಲ್ಲಿ ಆರೋಪಿಯು 2020 – 2023ರ ಅವಧಿಯಲ್ಲಿ ತಾನು ತೀವ್ರ ಅನಾರೋಗ್ಯಕ್ಕೆ ಒಳಗಾದಾಗ ಆರೋಪಿಗಳು ಕಂಪನಿಯಿಂದ ಕೋಟ್ಯಂತರ ರೂಪಾಯಿಗಳ ವಂಚನೆ ಮಾಡಿದ್ದಾರೆ ಎಂದು ಆರೋಪಿಸಿದ್ದಾರೆ. ಎಂ.ಆರ್. ಶಶಾಂಕ್ ಮಹೇಶ್ ಅವರು ಫ್ರಂಟ್ ಆಫೀಸ್ ಉದ್ಯೋಗಿಯಾಗಿರುವ ಶ್ರೀ ಗಿರೀಶ್ ಅವರೊಂದಿಗೆ ಸೇರಿಕೊಂಡು ಈ ವಂಚನೆ ಮಾಡಿದ್ದಾರೆ ಎಂದು ಎಫ್‌ಐಆರ್ ನಲ್ಲಿ ದಾಖಲಿಸಿದ್ದಾರೆ. ಪ್ರಕಾಶ್ ಡಿಯೋ ಅವರು, ತಮ್ಮನ್ನು ಕಂಪನಿಯ ಕಾರ್ಯಾಚರಣೆಗಳಿಂದ ಅನ್ಯಾಯವಾಗಿ ದೂರ ಇಟ್ಟಿದ್ದಾರೆ ಮತ್ತು ನಾವು ಅನಾರೋಗ್ಯದಿಂದ ಬಳಲುತ್ತಿದ್ದಾಗ ಕಂಪನಿಯ ಹಣಕಾಸಿನ ದಾಖಲೆಗಳನ್ನು ನೋಡುವ ಅವಕಾಶದಿಂದ ವಂಚಿತರನ್ನಾಗಿ ಮಾಡಿದ್ದಾರೆ. ವ್ಯವಹಾರವನ್ನು ಉತ್ತಮ ರೀತಿಯಲ್ಲಿ ನಿರ್ವಹಿಸುವ ಮತ್ತು ಸಂಬಳ ಪಾವತಿಸುವುದನ್ನು ಮುಂದುವರಿಸುವ ಭರವಸೆಯ ನೀಡಿರುವ ಹೊರತಾಗಿಯೂ ಆರೋಪಿಯು ಫೆಬ್ರವರಿ 2021ರಿಂದ ತನ್ನ ಸಂಬಳವನ್ನು ತಡೆಹಿಡಿದಿದ್ದಾರೆ ಮತ್ತು ಕಂಪನಿಯ ಬ್ಯಾಂಕ್ ಖಾತೆಗಳನ್ನು ಬಳಸದಂತೆ ಮಾಡಿದ್ದಾರೆ ಎಂದು ಹೇಳಿದ್ದಾರೆ. ಇದಲ್ಲದೆ, ಪ್ರಕಾಶ್ ಡಿಯೋ ಅವರು ಕಂಪನಿಯ ಚಾರ್ಟರ್ಡ್ ಅಕೌಂಟೆಂಟ್, ಶ್ರೀ ಮುರಳೀಧರ್ ಕೆ.ಎಸ್ ವಿರುದ್ಧ ದೆಹಲಿಯ ಇನ್‌ಸ್ಟಿಟ್ಯೂಟ್ ಆಫ್ ಚಾರ್ಟರ್ಡ್ ಅಕೌಂಟೆಂಟ್ಸ್ ಆಫ್ ಇಂಡಿಯಾ (ಐಸಿಎಐ) ದಲ್ಲಿ ವೃತ್ತಿಪರ ದುರ್ನಡತೆ ಆರೋಪದ ಮೇಲೆ ದೂರು ದಾಖಲಿಸಿದ್ದಾರೆ. ದೂರುಗಳಲ್ಲಿ ಮಂಡಳಿಯ ಸಭೆಗಳಲ್ಲಿ ಪ್ರಕಾಶ್ ದೇವ್ ಅವರು ಆಕ್ಷೇಪಣೆಗಳನ್ನು ಎತ್ತಿದ್ದರೂ ಸಹ ಚಾರ್ಟರ್ಡ್ ಅಕೌಂಟೆಂಟ್ ಅವರು ತಪ್ಪಾದ ಆದಾಯ ತೆರಿಗೆ ರಿಟರ್ನ್ಸ್ ಸಲ್ಲಿಸಿದ್ದಾರೆ ಎಂದು ಹೇಳಲಾಗಿದೆ.

## ಕ್ಯಾರೆಟ್ ಬರ್ಫಿ

### ಪಾಕ ಶಾಲೆ



### ಬೇಕಿರುವ ಸಾಮಗ್ರಿ

ತುರಿದ ತೆಂಗಿನಕಾಯಿ 1 ಬಟ್ಟಲು, ತುರಿದ ಕ್ಯಾರೆಟ್ 1 ಬಟ್ಟಲು, ಸಕ್ಕರೆ ಒಂದೂವರೆ ಬಟ್ಟಲು, ತುಪ್ಪ 2–3 ಚಮಚ, ಏಲಕ್ಕಿ ಪುಡಿ 1 ಚಮಚ, ದ್ರಾಕ್ಷಿ, ಗೋಡಂಬಿ– ಸ್ವಲ್ಪ

### ಮಾಡುವ ವಿಧಾನ

ಮೊದಲಿಗೆ ಬಾಣಲೆಯಲ್ಲಿ ತುಪ್ಪವನ್ನು ಹಾಕಿ. ಬಿಸಿ ಮಾಡಿಕೊಳ್ಳಿ. ನಂತರ ತುರಿದ ಕ್ಯಾರೆಟ್ ಹಾಗೂ ತೆಂಗಿನ ತುರಿ ಸೇರಿಸಿ ಹಸಿ ವಾಸನೆ ಹೋಗುವವರೆಗೆ 3–4 ನಿಮಿಷ ಹುರಿಯಿರಿ. ಸಕ್ಕರೆ ಸೇರಿಸಿ ಎಲ್ಲವನ್ನೂ ಚೆನ್ನಾಗಿ ಮಿಶ್ರಣ ಮಾಡಿ.

ಸಕ್ಕರೆ ಕರಗಲು ಪ್ರಾರಂಭವಾದ ಬಳಿಕ ಉರಿಯನ್ನು ಮಧ್ಯಮದಲ್ಲಿಟ್ಟು, ಕೈಯಾಡಿಸುತ್ತಿರಿ. ಸಕ್ಕರೆ ಸಂಪೂರ್ಣವಾಗಿ ಕರಗಿದ ಬಳಿಕ ಗುಳ್ಳೆಗಳು ಕಾಣಿಸಿಕೊಂಡು ದಪ್ಪವಾಗಲು ಪ್ರಾರಂಭವಾಗುತ್ತದೆ. ಈಗ ಏಲಕ್ಕಿ ಪುಡಿ ಹಾಕಿ ಮಿಶ್ರಣ ಮಾಡಿ. ಮಿಶ್ರಣ ಮುದ್ದೆಯಾಗಿ, ಪ್ಯಾನ್ನಿಂದ ಬೇರ್ಪಡಲು ಪ್ರಾರಂಭವಾಗುತ್ತಿದ್ದಂತೆ ತಕ್ಷಣ ಅದನ್ನು ಕೆಳಗಿಳಿಸಿ. ಈಗ ತುಪ್ಪ ಸವರಿದ ತಟ್ಟೆಯ ಮೇಲೆ ಮಿಶ್ರಣವನ್ನು ಸಮಾನವಾಗಿ ಹರಡಿ. ಬಳಿಕ ದ್ರಾಕ್ಷಿ, ಗೋಡಂಬಿಗಳಿಂದ ಅಲಂಕರಿಸಿ. ಬೆಚ್ಚಗಿರುವಾಗಲೇ ಚಾಕು ಸಹಾಯದಿಂದ ತುಂಡುಗಳಾಗಿ ಕತ್ತರಿಸಿ. ತಣ್ಣಗಾಗಲು ಬಿಡಿ. ಇದೀಗ ರುಚಿಕರವಾದ ಕ್ಯಾರೆಟ್ ಬರ್ಫಿ ಸವಿಯಲು ಸಿದ್ಧ.





## ಫ್ಲೈಯಿಂಗ್ ಕಿಸ್ ಕೊಟ್ಟ ರಾಹಾ

ಬಿಟೌನ್ ಕ್ಯೂಟ್ ಜೋಡಿ ಆಲಿಯಾ–ರಣಬೀರ್ ಕಪೂರ್ ಮುದ್ದಿನ ಮಗಳು ರಾಹಾ ಕಪೂರ್ ವೀಡಿಯೊ ಇಂಟರ್ನೆಟ್‌ನಲ್ಲಿ ವೈರಲ್ ಆಗುತ್ತಿದೆ. ವಿಮಾನ ನಿಲ್ದಾಣದಲ್ಲಿ ಮಾಧ್ಯಮದವರನ್ನು ನೋಡಿದ ರಾಹಾ ಪ್ರತಿಕ್ರಿಯೆ ನೆಟ್ಟಿಗರ ಗಮನ ಸೆಳೆಯುತ್ತಿದೆ.. ಪುತ್ರಿಯ ರಿಯಾಕ್ಷನ್ ನೋಡಿ ಆಲಿಯಾ ಭಟ್ ಕೂಡ ನಕ್ಕಿದ್ದಾರೆ...

ಬಾಲಿವುಡ್ನ ಕ್ಯೂಟ್ ಕಪಲ್‌ಗಳಲ್ಲಿ ಆಲಿಯಾ ಭಟ್ ಮತ್ತು ರಣಬೀರ್ ಕಪೂರ್ ಜೋಡಿ ಒಂದು. ಈ ಸ್ಟಾರ್ ಕಪಲ್ ಪುತ್ರಿ, ರಾಹಾ ಕಪೂರ್ ತನ್ನ ಕ್ಯೂಟ್‌ನೆಸ್‌ನಿಂದ ಲಕ್ಷಾಂತರ ಜನರ ಹೃದಯವನ್ನು ಗೆಲ್ಲುತ್ತಿದ್ದಾರೆ. ಕಳೆದ ವರ್ಷ ಕ್ರಿಸ್‌ಮಸ್‌ನಲ್ಲಿ ರಣವೀರ್ ಕಪೂರ್ ಮತ್ತು ಆಲಿಯಾ ಭಟ್ ಮೊದಲ ಬಾರಿಗೆ ತಮ್ಮ ಮಗಳ ಮುಖವನ್ನು ಸಾರ್ವಜನಿಕರಿಗೆ ತೋರಿಸಿದರು.

ಅಂದಿನಿಂದ ರಾಹಾ ಕಪೂರ್ ಸಾಮಾಜಿಕ ಜಾಲತಾಣಗಳಲ್ಲಿ ಆವರಿಸಿಕೊಂಡಿದ್ದಾರೆ. ಅಲ್ಲದೆ, ವೈರಲ್ ಆಗಿರುವ ಆಲಿಯಾ ಭಟ್ ಮತ್ತು ರಣಬೀರ್ ಕಪೂರ್ ಅವರ ಮಗಳ ವೀಡಿಯೊವನ್ನು ನೋಡಿ ಲಕ್ಷಾಂತರ ಜನರು ಮೆಚ್ಚುಗೆ ವ್ಯಕ್ತಪಡಿಸುತ್ತಿದ್ದಾರೆ... ಪುಟ್ಟ ರಾಹಾಳ ಕ್ಯೂಟ್ ವಿಡಿಯೋ ಇಂಟರ್ನೆಟ್‌ನಲ್ಲಿ ವೈರಲ್ ಆಗುತ್ತಿದೆ. ಆಲಿಯಾ ಭಟ್ ಮತ್ತು ರಣವೀರ್ ಕಪೂರ್ ಇತ್ತೀಚೆಗೆ ವಿಮಾನ ನಿಲ್ದಾಣದಲ್ಲಿ ಕಾಣಿಸಿಕೊಂಡರು. ಈ ವೇಳೆ ಪಾಪರಾಜಿಗಳು ಫೋಟೋ ತೆಗೆಯಲು ಮುಂದಾದರು.. ಆಗ ಅವರತ್ತ ನೋಡಿದ ರಾಹಾ ಹಾಯ್ ಅಂತ ಕೈ ಮಾಡಿ ಫ್ಲೈಯಿಂಗ್ ಕಿಸ್ ನೀಡಿದ್ದಾರೆ.. ಮಗಳ ತುಂಟಾಟ ನೋಡಿ ಆಲಿಯಾ ಸಹ ಬಿದ್ದು ಬಿದ್ದು ನಕ್ಕರು.

## ಆಮ್ಲೀಯತೆಗೆ ಕಾರಣಗಳು



ಹೆಲ್ತ್ ಟಿಪ್ಸ್

ಊಟವನ್ನು ಮಾಡದಿರುವುದು ಅಥವಾ ಅತಿಯಾದ ಊಟ ಅಥವಾ ಹೊತ್ತಲ್ಲದ ಹೊತ್ತಲ್ಲಿ ಊಟ ಮಾಡುವುದು,ಅಧಿಕ ಮಸಾಲೆಭರಿತ ಆಹಾರ ಸೇವನೆ,ಹೊಟ್ಟೆಹುಣ್ಣು,ಅಸ್ತಮಾ,ಮಧುಮೇಹ ಮತ್ತು ಜಠರದ ಹುಣ್ಣುಗಳಂತಹ ಈಗಾಗಲೇ ಇರುವ ಅನಾರೋಗ್ಯ,ಕೆಲವು ಔಷಧಿಗಳ ಅಡ್ಡಪರಿಣಾಮಗಳು,ಒತ್ತಡ ಮತ್ತು ನಿದ್ರಾಹೀನತೆ,ಮದ್ಯಪಾನ ಇವೂ ಆಮ್ಲೀಯತೆಯನ್ನುಂಟು ಮಾಡುವ ಕಾರಣಗಳಲ್ಲಿ ಸೇರಿವೆ.

**ಲಕ್ಷಣಗಳು:** ಗಂಟಲು,ಹೊಟ್ಟೆ ಮತ್ತು ಎದೆಯಲ್ಲಿ ಉರಿಯ ಅನುಭವ, ಆಹಾರ ನುಂಗಲು ಕಷ್ಟ,ವಾಕರಿಕೆ,ಅಜೀರ್ಣ. ಮಲಬದ್ಧತೆ, ಬಾಯಿಯ ದುರ್ವಾಸನೆ ಮತ್ತು ದಂತ ಸಮಸ್ಯೆಗಳು,ಪ್ರಕ್ಷುಬ್ಧತೆ,ಬಾಯಿಯಲ್ಲಿ ಕಹಿರುಚಿ,ತೇಗು ಮತ್ತು ದೀರ್ಘಕಾಲೀನ ನ್ಯುಮೋನಿಯಾ ಇವು ಆಮ್ಲೀಯತೆಯ ಅತ್ಯಂತ ಸಾಮಾನ್ಯ ಲಕ್ಷಣಗಳಾಗಿವೆ.

**ಬೆನ್ನುನೋವು ಉಂಟಾಗುತ್ತದೆಯೇ?:**‘ ಈ ಪ್ರಶ್ನೆಗೆ ಹೌದು ಎಂದೇ ಉತ್ತರಿಸಬೇಕಾಗುತ್ತದೆ. ಬೆನ್ನಿನ ಮೇಲ್ಭಾಗ,ಮಧ್ಯಭಾಗ ಮತ್ತು ಕೆಳಭಾಗದಲ್ಲಿ ನೋವು,ಎದೆಯಲ್ಲಿ ನೋವು ಇವೆಲ್ಲ ಆಮ್ಲೀಯತೆಯೊಂದಿಗೆ ಗುರುತಿಸಿಕೊಂಡಿವೆ. ಆಹಾರವು ಜೀರ್ಣಗೊಳ್ಳಲು ನಮ್ಮ ಶರೀರದಲ್ಲಿ ಹೈಡ್ರೋಕ್ಲೋರಿಕ್ ಆಮ್ಲದ ಉತ್ಪಾದನೆಯಾಗುತ್ತದೆ. ಇದು ಉಂಟು ಮಾಡುವ ಹಾನಿಕಾರಕ ಪರಿಣಾಮಗಳಲ್ಲಿ ಶರೀರದಾದ್ಯಂತ ನರತಂತುಗಳಿಗೆ ಹಾನಿಯೂ ಸೇರಿದೆ. ಬೆನ್ನು ಮತ್ತು ಭುಜಗಳಲ್ಲಿ ನೋವು ಕಾಣಿಸಿಕೊಳ್ಳುತ್ತದೆ. ತೀವ್ರ ಆಮ್ಲೀಯತೆಯಿಂದ ಬಳಲುತ್ತಿರುವವರು ಹೈಡ್ರೋಕ್ಲೋರಿಕ್ ಆಮ್ಲ ಅನ್ನನಾಳವನ್ನು ಸೇರುವುದನ್ನು ತಪ್ಪಿಸಲು ಎತ್ತರಿಸಿದ ಭಂಗಿಯಲ್ಲಿ ಮಲಗುತ್ತಾರೆ. ಇದು ಆಮ್ಲದ ಹರಿವು ಮತ್ತು ಅದಕ್ಕೆ ಸಂಬಂಧಿಸಿದ ಲಕ್ಷಣಗಳನ್ನು ನಿವಾರಿಸಲು ಒಳ್ಳೆಯದಿರಬಹುದು,ಆದರೆ ಇದು ಬೆನ್ನುಮೂಳೆಯ ಆರೋಗ್ಯಕ್ಕೆ ಒಳ್ಳೆಯದಲ್ಲ. ಈ ಭಂಗಿಯಲ್ಲಿ ತುಂಬ ಹೊತ್ತು ಮಲಗುವುದರಿಂದ ಮತ್ತು ದಿನಗಟ್ಟಲೆ ಇದನ್ನು ಮುಂದುವರಿಸುವುದರಿಂದ ಮೃದು ಅಂಗಾಂಶಗಳಿಗೆ ಶಾಶ್ವತ ಹಾನಿಯಾಗುತ್ತದೆ ಮತ್ತು ತೀವ್ರ ಬೆನ್ನುನೋವಿಗೆ ಕಾರಣವಾಗುತ್ತದೆ. ನೋವಿನ ತೀವ್ರತೆ ವ್ಯಕ್ತಿಯಿಂದ ವ್ಯಕ್ತಿಗೆ ಭಿನ್ನವಾಗಿರುತ್ತದೆ. ಇದಕ್ಕೆ ತಕ್ಷಣ ಚಿಕಿತ್ಸೆ ಪಡೆದುಕೊಳ್ಳದಿದ್ದರೆ ಸ್ಥಿತಿ ಇನ್ನಷ್ಟು ಹದಗೆಡುತ್ತದೆ.

**ಚಿಕಿತ್ಸೆ ಹೇಗೆ?:** ಆಮ್ಲೀಯತೆಯಿಂದ ಉಂಟಾಗುವ ಬೆನ್ನುನೋವಿನಲ್ಲಿ ಸ್ನಾಯು ಸೆಳೆತ ಅಥವಾ ಗಾಯದ ಪಾತ್ರವಿಲ್ಲ,ಅದಕ್ಕೆ ಜೀರ್ಣ ವ್ಯವಸ್ಥೆಯಲ್ಲಿ ಹೆಚ್ಚುವರಿ ಆಮ್ಲದಿಂದಾಗಿ ಉಂಟಾಗುವ ಉರಿಯೂತ ಕಾರಣ. ಹೀಗಾಗಿ ಆಮ್ಲೀಯತೆಯಿಂದ ಉಂಟಾಗುವ ಬೆನ್ನುನೋವಿನ ಶಮನಕ್ಕಾಗಿ ನೋವು ನಿವಾರಕ ಮಾತ್ರೆಗಳ ಸೇವನೆಯಿಂದ ಯಾವುದೇ ಪ್ರಯೋಜನವಾಗುವುದಿಲ್ಲ.

ನೋವನ್ನು ನಿವಾರಿಸಲು ಅದರ ಮೂಲ ಕಾರಣವೇನು ಎನ್ನುವುದನ್ನು ಕಂಡುಕೊಳ್ಳಬೇಕಾಗುತ್ತದೆ. ಈ ಪ್ರಕರಣದಲ್ಲಿ ಆಮ್ಲೀಯತೆ ಕಾರಣವಾಗಿದೆ. ಕ್ರಮ ತಪ್ಪಿದ ಆಹಾರ ಸೇವನೆ ಮತ್ತು ಕೆಲವು ಜೀವನಶೈಲಿಗಳು ಆಮ್ಲೀಯತೆಗೆ ಸಾಮಾನ್ಯ ಕಾರಣಗಳಾಗಿವೆ.ಸೌಮ್ಯ ಸ್ವರೂಪದ ಆಮ್ಲೀಯತೆಗೆ ಔಷಧಿ ಅಂಗಡಿಗಳಲ್ಲಿ ಔಷಧಿಗಳು ದೊರೆಯುತ್ತವೆ. ಆದರೆ ವ್ಯಕ್ತಿ ಸುದೀರ್ಘ ಸಮಯದಿಂದ ಆಮ್ಲೀಯತೆಯಿಂದ ನರಳುತ್ತಿದ್ದರೆ ವೈದ್ಯಕೀಯ ತಪಾಸಣೆ ಅಗತ್ಯವಾಗುತ್ತದೆ. ಆದರೆ ಆಮ್ಲೀಯತೆಯ ಹಲವಾರು ಔಷಧಿಗಳು ಕೂಡ ಕೆಲವು ಅಡ್ಡ ಪರಿಣಾಮಗಳನ್ನುಂಟು ಮಾಡುತ್ತವೆ ಎನ್ನುವುದು ನಿಮಗೆ ನೆನಪಿರಲಿ.

## ಮಾಜಿ ಪಿಎಂ ದೇವೇಗೌಡರನ್ನು ಭೇಟಿಯಾಗಿ ಮದುವೆಗೆ ಆಹ್ವಾನಿಸಿದ ಡಾಲಿ



ಸ್ಯಾಂಡಲ್‌ವುಡ್ ನಟ ಡಾಲಿ ಧನಂಜಯ ಅವರು ಫೆ.16ರಂದು ದಾಂಪತ್ಯ ಜೀವನಕ್ಕೆ ಕಾಲಿಡಲು ಸಜ್ಜಾಗಿದ್ದಾರೆ. ಈ ಹಿನ್ನೆಲೆ ಮಾಜಿ ಪಿಎಂ ಹೆಚ್.ಡಿ. ದೇವೇಗೌಡರನ್ನು ಮದುವೆಯ ಆಮಂತ್ರಣ ಪತ್ರಿಕೆ ನೀಡಿ ಆಹ್ವಾನ ನೀಡಿದ್ದಾರೆ.

ಭಾವಿ ಪತ್ನಿ ಧನ್ಯತಾ ಜೊತೆ ಮಾಜಿ ಪಿಎಂ ಹೆಚ್.ಡಿ. ದೇವೇಗೌಡ ನಿವಾಸಕ್ಕೆ ಭೇಟಿ ನೀಡಿ, ಮದುವೆ ಆಹ್ವಾನ ಪತ್ರಿಕೆ ನೀಡಿದ್ದಾರೆ.

ಅಂದಹಾಗೆ, ಇತ್ತೀಚೆಗೆ ಡಿಕೆ ಶಿವಕುಮಾರ್, ಡಿಕೆ ಸುರೇಶ್ ಮತ್ತು ಸಿಎಂ ಸಿದ್ದರಾಮಯ್ಯ ಅವರನ್ನು ಕೂಡ ಭಾವಿ ಪತ್ನಿಯ ಜೊತೆ ಭೇಟಿಯಾಗಿ ಮದುವೆಗೆ ಆಹ್ವಾನ ನೀಡಿದ್ದರು.

ಇನ್ನೂ ಡಾಕ್ಟರ್ ಧನ್ಯತಾ ಜೊತೆ ಡಾಲಿ ಮೈಸೂರಿನಲ್ಲಿ ಮದುವೆಯಾಗುತ್ತಿದ್ದಾರೆ. ಗುರುಹಿರಿಯರ ಸಮ್ಮುಖದಲ್ಲಿ ಈ ಜೋಡಿ ಹಸೆಮಣೆ ಏರಲಿದ್ದಾರೆ. ಈ ಮದುವೆಯಲ್ಲಿ ಸ್ಯಾಂಡಲ್‌ವುಡ್ ಕಲಾವಿದರು, ರಾಜಕೀಯ ಗಣ್ಯರು ಭಾಗಿಯಾಗಲಿದ್ದಾರೆ.

## ಫಂಗಲ್ ಇನ್ಫೆಕ್ಷನ್‌ಗೆ ಮನೆಮದ್ದು

### ಬ್ಯೂಟಿ ಟಿಪ್ಸ್



ಮುಖ್ಯವಾಗಿ ಕಾಲಿನ ಹೆಬ್ಬೆರಳು ತನ್ನ ಉಗುರಿನ ಭಾಗದಲ್ಲಿ ಫಂಗಲ್ ಸೋಂಕನ್ನು ನೋಡುತ್ತದೆ. ಉಗುರಿನ ಬಣ್ಣ ಹಳದಿ, ಬಿಳಿ ಅಥವಾ ಕಂದು ಬಣ್ಣಕ್ಕೆ ತಿರುಗಿದಾಗ ಈ ಬಗ್ಗೆ ತಿಳಿದು ಬರುತ್ತದೆ. ಕೆಲವರಿಗೆ ಉಗುರು ಸೀಳು ಬಿಡುವುದು ಉಂಟು. ಟೀಟ್ರೀ ಆಯಿಲ್ ನಲ್ಲಿ ಆಂಟಿ ಫಂಗಲ್ ಮತ್ತು ಆಂಟಿಸೆಪ್ಟಿಕ್ ಗುಣಲಕ್ಷಣಗಳು ಹೆಚ್ಚಾಗಿ ಕಂಡುಬರುತ್ತವೆ. ಮತ್ತು ಇದು ಅತ್ಯಂತ ಉಪಯುಕ್ತವಾದ ಎಸೆನ್ಸಿಯಲ್ ಆಯಿಲ್ ಎಂದು ಹೇಳಬಹುದು. ಅತ್ಯಂತ ಪರಿಣಾಮಕಾರಿಯಾಗಿ ನಿಮ್ಮ ಕಾಲಿನ ಭಾಗದ ಹೆಬ್ಬೆರಳಿನ ಫಂಗಲ್ ಸೋಂಕನ್ನು ನಿವಾರಣೆ ಮಾಡುತ್ತದೆ. ಒಂದು ಹತ್ತಿಯ ಉಂಡೆಯನ್ನು ತೆಗೆದುಕೊಂಡು ಅದಕ್ಕೆ ಸ್ವಲ್ಪ ಟೀಟ್ರೀ ಆಯಿಲ್ ಅನ್ವಯಿಸಿ ಅದನ್ನು ಫಂಗಲ್ ಸೋಂಕು ಉಂಟಾಗಿರುವ ಹೆಬ್ಬೆರಳಿನ ಭಾಗಕ್ಕೆ ಹಚ್ಚಿ. ಆರ್ಗನೋ ಆಯಿಲ್ ನಲ್ಲಿ ಆಂಟಿ ಬ್ಯಾಕ್ಟೀರಿಯಲ್ ಮತ್ತು ಆಂಟಿ ಫಂಗಲ್ ಗುಣಲಕ್ಷಣಗಳು ಪ್ರಮಾಣ ತುಂಬಾ ಹೆಚ್ಚಾಗಿ ಕಂಡುಬರುತ್ತದೆ. ಇದು ಚರ್ಮದ ಭಾಗದ ಸೋಂಕನ್ನು ಸುಲಭವಾಗಿ ನಿವಾರಣೆ ಮಾಡುವ ಗುಣ ಪಡೆದುಕೊಂಡಿದೆ. ಮೇಲೆ ಹೇಳಿದ ಹಾಗೆ ಒಂದು ಹತ್ತಿಯ ಉಂಡೆ ಸಹಾಯದಿಂದ ಇದನ್ನು ಸಹ ಕಾಲಿನ ಭಾಗದ ಹೆಬ್ಬೆರಳಿನ ಉಗುರಿನ ಸೋಂಕಿಗೆ ಅನ್ವಯಿಸಬಹುದು. ಬೇಕೆಂದರೆ ಟೀಟ್ರೀ ಆಯಿಲ್ ಜೊತೆಗೆ ಮಿಶ್ರಣ ಮಾಡಿ ಕೂಡ ಅನ್ವಯಿಸಬಹುದು. ಸೂರ್ಯಕಾಂತಿ ಎಣ್ಣೆ ಮತ್ತು ಆಲಿವ್ ಆಯಿಲ್ ಬ್ಯಾಕ್ಟೀರಿಯಗಳು ಸೋಂಕನ್ನು ನಿಯಂತ್ರಣ ಮಾಡುವ ಗುಣ ಪಡೆದುಕೊಂಡಿದೆ.

ಸೋಂಕು ಹೆಚ್ಚಾಗದಂತೆ ತಡೆದು ಬ್ಯಾಕ್ಟೀರಿಯಾ ಫಂಗಸ್ ಮತ್ತು ಈಸ್ಟ್ ಸೋಂಕುಗಳ ವಿರುದ್ಧ ಇದು ಹೋರಾಡುತ್ತದೆ. ಸೂರ್ಯಕಾಂತಿ ಎಣ್ಣೆ ಅತ್ಯಂತ ಪರಿಣಾಮಕಾರಿಯಾಗಿ ಹೆಬ್ಬೆರಳಿನ ಭಾಗದ ಸೋಂಕನ್ನು ಸುಲಭವಾಗಿ ಪರಿಹಾರ ಮಾಡುತ್ತದೆ ದಿನದಲ್ಲಿ 2 ಬಾರಿ ಫಂಗಲ್ ಸೋಂಕಿಗೆ ಗುರಿಯಾಗಿರುವ ಉಗುರಿನ ಮೇಲೆ ಅನ್ವಯಿಸಬಹುದು. ಆಹಾರ ಪದಾರ್ಥಗಳಲ್ಲಿ ಬೇಕೆಂದಾಗ ಬಳಕೆಮಾಡುವ ಆಪಲ್ ಸೈಡರ್ ವಿನಿಗರ್ ಕೂಡ ಫಂಗಲ್ ಸೋಂಕಿನ ವಿರುದ್ಧ ಹೋರಾಡುವ ಗುಣವನ್ನು ಪಡೆದುಕೊಂಡಿದೆ. ಇದಕ್ಕಾಗಿ ಸ್ವಲ್ಪ ವಿನೆಗರ್ ಮತ್ತು ಒಂದು ಬಕೆಟ್ ನಲ್ಲಿನ ಉಗುರು ಬೆಚ್ಚಗಿನ ನೀರನ್ನು ಮಿಶ್ರಣ ಮಾಡಿ ಅದರಲ್ಲಿ ಸುಮಾರು 20 ನಿಮಿಷಗಳ ಕಾಲ ಹೆಬ್ಬೆರಳಿನ ಸೋಂಕು ಒಳಗಾಗಿರುವ ಕಾಲನ್ನು ನೆನಸಬೇಕು. ಇದರಿಂದ ಬಹಳ ವೇಗವಾಗಿ ಉಗುರುಸುತ್ತು ಸಮಸ್ಯೆ ಪರಿಹಾರವಾಗುತ್ತದೆ.

## ಅಜ್ಜ- ಅಜ್ಜಿ ಮೆಸ್‌ಗೆ ಗ್ಯಾಸ್ ಸ್ಟೌ, ರೆಫ್ರಿಜರೇಟರ್, ಕುಕ್ಕರ್, ಮಿಕ್ಸರ್ ಗ್ರೈಂಡರ್, ಮೈಕ್ರೋವೇವ್ ನೀಡಿದ ರಿಲಯನ್ಸ್

**ಮಣಿಪಾಲ್:** ಯಾವುದೇ ವ್ಯಕ್ತಿಯ ಬದುಕಲ್ಲೂ ಕನಸುಗಳು ಇರುತ್ತವೆ. ಆದರೆ ಅದನ್ನು ನಿಜ ಮಾಡಿಕೊಳ್ಳಲು ನಾನಾ ಸವಾಲು- ಅಡೆತಡೆಗಳು ಹೆಜ್ಜೆಹೆಜ್ಜೆಗೂ ಸಿಗುತ್ತವೆ. ಅಂಥದ್ದರಲ್ಲಿ ತಂತ್ರಜ್ಞಾನದ ಸಹಾಯದಿಂದ ದೊಡ್ಡ ಮಟ್ಟದಲ್ಲಿ ಸಹಾಯ ಆಗುವಂಥ ಕನಸುಗಳಿಗೆ ರೆಕ್ಕೆ ಕಟ್ಟುವ ಉದ್ದೇಶದಿಂದ ರಿಲಯನ್ಸ್ ಡಿಜಿಟಲ್ ನಿಂದ ''ಹ್ಯಾಪಿನೆಸ್ ಪ್ರಾಜೆಕ್ಟ್'' ಶುರು ಮಾಡಲಾಗಿದೆ. ಅದರ ಭಾಗವಾಗಿ ಉಡುಪಿ ಜಿಲ್ಲೆಯ ಮಣಿಪಾಲದಲ್ಲಿರುವ ಅಜ್ಜ- ಅಜ್ಜಿ ಊಟ ಎಂಬ ಹೆಸರಿನ ಮೆಸ್ ಗೆ ಟೆಕ್ನಾಲಜಿಯ ನೆರವನ್ನು ನೀಡಲಾಗಿದೆ. ಇದಕ್ಕಾಗಿ ಕಾರ್ಯಕ್ರಮದ ಮುಖ್ಯ ನಿರೂಪಕಿ ಫರಾಹ್ ಖಾನ್ ಹಾಗೂ ಸಹ ನಿರೂಪಕರಾದ ಸಂಜೋತ್ ಕೀರ್ ಕರ್ನಾಟಕದಲ್ಲಿನ ಮಣಿಪಾಲಕ್ಕೆ ಬಂದು ಈ ಅಜ್ಜ- ಅಜ್ಜಿ ಊಟದ ಮೆಸ್ ಗೆ ಅಗತ್ಯ ಇರುವಂಥದ್ದನ್ನು ತಲುಪಿಸಿದ್ದಾರೆ. ಗೋಪಾಲಕೃಷ್ಣ ಪ್ರಭು ಹಾಗೂ ವಸಂತಿಪ್ರಭು ಅವರು ಮಣಿಪಾಲದಲ್ಲಿ ಮೆಸ್ ನಡೆಸುತ್ತಾರೆ. ಇಲ್ಲಿ ಸಿಗುವ ಅನ್ ಲಿಮಿಟೆಡ್ ಬಾಳೆ ಎಲೆ ಊಟಕ್ಕೆ ಅವರು ಪಡೆಯುವುದು ಅರವತ್ತು ರೂಪಾಯಿ ಮಾತ್ರ. ಈ ದಂಪತಿಗೆ ಬಹಳ ವಯಸ್ಸಾಗಿದೆ. ಅದರಲ್ಲಿ ಗೋಪಾಲಕೃಷ್ಣ ಅವರಿಗೆ ನಡು ಬಗ್ಗಿದೆ. ಆದರೂ ಇವರಿಬ್ಬರ ಉತ್ಸಾಹ, ದುಡಿಮೆಯ ಪ್ರೀತಿ ಹಾಗೂ ಇಲ್ಲಿಗೆ ಬರುವವರಿಗೆ ಊಟ ಉಣಬಡಿಸುವುದರಲ್ಲಿನ ಅಕ್ಕರಾಸ್ಥೆ ಕಣ್ಣಲ್ಲಿ ನೀರು ಬರುವಂತೆ ಮಾಡುತ್ತದೆ. ಈ ದಂಪತಿ ಪ್ರತಿ ದಿನ ತರಕಾರಿಗಳು ತರುವುದಕ್ಕೆ ಅಂತಲೇ ಆಟೋದಲ್ಲಿ ಕೆಲವು ಕಿಲೋಮೀಟರ್ ಹೋಗಿಬರಬೇಕಿತ್ತು. ಅದೇ



ರೀತಿ ಸೌದೆ ಒಲೆಯಲ್ಲಿ ಅಡುಗೆ ಮಾಡುತ್ತಿದ್ದರು. ಅದರ ಹೊಗೆಯಿಂದಲೂ ಕಣ್ಣಿನ ಉರಿ ಮೊದಲಾದ ಸಮಸ್ಯೆಗಳು ಇದ್ದವು. ಇದೀಗ ರಿಲಯನ್ಸ್ ಡಿಜಿಟಲ್ ನವರ ''ಹ್ಯಾಪಿನೆಸ್ ಪ್ರಾಜೆಕ್ಟ್'' ಅಡಿಯಲ್ಲಿ ಅಜ್ಜ- ಅಜ್ಜಿ ಮೆಸ್ ಗೆ ನಾಲ್ಕು ಬರ್ನರ್ ಇರುವ ಗ್ಯಾಸ್ ಸ್ಟೌ, ರೆಫ್ರಿಜರೇಟರ್, ಅನ್ನದ ಕುಕ್ಕರ್, ಮಿಕ್ಸರ್ ಗ್ರೈಂಡರ್, ಮೈಕ್ರೋವೇವ್ ಹಾಗೂ ಸ್ಮಾರ್ಟ್ ಫೋನ್ ಗಳನ್ನು ಸಹ ಉಚಿತವಾಗಿ ನೀಡಲಾಗಿದೆ.

ಇವೆಲ್ಲವನ್ನೂ ನೋಡುವಾಗ ವಸಂತಿ ಪ್ರಭು ಅವರ ಕಣ್ಣಲ್ಲಿ ಸಂತೋಷದ ಕಣ್ಣೀರು. ಇನ್ನು ಮುಂದೆ ನಾಲ್ಕೈದು ದಿನಕ್ಕೆ ಆಗುವಷ್ಟು ತರಕಾರಿ ಒಮ್ಮೆಲೆ ತಂದುಕೊಂಡು ಬಿಡುತ್ತೇವೆ ಅನ್ನುವಾಗ ಗೋಪಾಲಕೃಷ್ಣ ಪ್ರಭು ಅವರ ಮುಖದಲ್ಲಿ ಮಿಂಚು ತರಿಸುವಷ್ಟು ಸಂಭ್ರಮ. ಬಿಸಿ ಬಿಸಿ ಊಟ ಮಾಡಬಹುದು ಮೈಕ್ರೋವೇವ್ ಓವನ್, ರೈಸ್ ಕುಕ್ಕರ್, ಸ್ಟೌ, ಗ್ರೈಂಡರ್ ಇವೆಲ್ಲದರಿಂದ ಬಹಳ ಅನುಕೂಲವಾಯಿತು ಅನ್ನುತ್ತಾ ಈ ದಂಪತಿ ತಮ್ಮ ಖುಷಿ ಹೇಳಿಕೊಂಡರು. ''ನೀವು ಇಷ್ಟೆಲ್ಲ ತಂದುಕೊಡ್ತೀರಿ ಅಂತ ಅಂದುಕೊಂಡೇ ಇರಲಿಲ್ಲ. ತುಂಬ ದೊಡ್ಡ ಫ್ರಿಜ್ ಇದು,'' ಎಂದು ತಮ್ಮ ಖುಷಿ ಹೇಳಿಕೊಂಡರು ಈ ವೃದ್ಧ ದಂಪತಿ.

ಹ್ಯಾಪಿನೆಸ್ ಪ್ರಾಜೆಕ್ಟ್ ಇರುವುದೇ ಈ ಬದಲಾವಣೆ ತರುವುದಕ್ಕೆ. ಲಾಭದ ಅಪೇಕ್ಷೆಯೇ ಇಲ್ಲದೆ, ಬರುವ ಜನರಿಗೆ ತಮ್ಮದೇ ಮಕ್ಕಳು- ಮೊಮ್ಮಕ್ಕಳಿಗೆ ಊಟ ಬಡಿಸುತ್ತಿದ್ದೇವೆ ಎಂಬ ಪ್ರೀತಿಯಿಂದ ಗೋಪಾಲಕೃಷ್ಣ ಪ್ರಭು ಹಾಗೂ ವಸಂತಿಪ್ರಭು ಊಟಕ್ಕೆ ಹಾಕುತ್ತಾರೆ. ಅವರ ಅಗತ್ಯಗಳು ಏನಿದ್ದವು ಇದೀಗ ರಿಲಯನ್ಸ್ ಡಿಜಿಟಲ್ ನಿಂದ ಪೂರ್ತಿ ಆಗಿದೆ.

ಈ ಕಾರ್ಯಕ್ರಮದ ಬಗ್ಗೆ ಮಾತನಾಡಿದ ರಿಲಯನ್ಸ್ ಡಿಜಿಟಲ್ನ ವಕ್ತಾರರು, ''ತಂತ್ರಜ್ಞಾನ ಎಂಬುದು ಇವತ್ತಿಗೆ ಜಗತ್ತಿನಲ್ಲಿ ಆಟವನ್ನೇ ಬದಲಿಸುವಂಥದ್ದಾಗಿದೆ. ರಿಲಯನ್ಸ್ ಡಿಜಿಟಲ್ನಲ್ಲಿ, ನಾವು ತಂತ್ರಜ್ಞಾನದ ಶಕ್ತಿಯನ್ನು ಗುರುತಿಸುತ್ತೇವೆ ಮತ್ತು ನಮ್ಮ ವಿಶಿಷ್ಟವಾಗಿ ವೈಯಕ್ತಿಕ ಸವಾಲುಗಳನ್ನು ಎದುರಿಸುವುದಕ್ಕೆ ಸೂಕ್ತವಾದ ಪರಿಹಾರಗಳನ್ನು ನೀಡುವ ಮೂಲಕ ಅದನ್ನು ವೈಯಕ್ತಿಕ ಮಟ್ಟದಲ್ಲಿ ನಂಬುತ್ತೇವೆ. ತಂತ್ರಜ್ಞಾನದ ಸಬಲೀಕರಣ ಧ್ಯೇಯದೊಂದಿಗೆ ಹ್ಯಾಪಿನೆಸ್ ಪ್ರಾಜೆಕ್ಟ್ ಬರುತ್ತಿದ್ದು, ಭಾರತವು ಹೊಸ ಮತ್ತು ಉಜ್ವಲವಾದ ನಾಳೆಗೆ ಜಿಗಿಯುತ್ತಿರುವಾಗ ನಮ್ಮ ಬ್ರ್ಯಾಂಡ್ಗೆ ಸಂಪೂರ್ಣವಾಗಿ ತಾಳೆಯಾಗುತ್ತದೆ,'' ಎಂದು ಹೇಳಿದ್ದಾರೆ.

## ರಾಶಿ ಭವಿಷ್ಯ



ಜಯಶ್ರೀ.ಬಿ.ಆರ್
ಖ್ಯಾತ ಜ್ಯೋತಿಷಿ
ದೂರವಾಣಿ–9964739507
www.jyotishyavaastu.com

**ಮೇಷ:** ಹೊಸ ಅವಕಾಶಗಳು ಹುಡುಕಿಕೊಂಡು ಬರಲಿದೆ, ನಿಮ್ಮ ಶ್ರಮಕ್ಕೆ ತಕ್ಕ ಪ್ರತಿಫಲ, ಪ್ರೀತಿಯಲ್ಲಿ ಎಚ್ಚರಿಕೆ.

**ವೃಷಭ:** ಕುಟುಂಬದಲ್ಲಿ ಶುಭ ಕಾರ್ಯಗಳು ನಡೆಯುತ್ತದೆ, ಕೋರ್ಟ್ ಕೇಸ್ನಲ್ಲಿ ಜಯ, ಮನೆಯಲ್ಲಿ ಹಿರಿಯರಿಗೆ ಅನಾರೋಗ್ಯ.

**ಮಿಥುನ:** ಅಪರಿಚಿತರೊಂದಿಗೆ ಅತಿಯಾದ ಸಲುಗೆ ಅಪಾಯ, ಹೊಸ ವಾಹನ ಖರೀದಿ ಸಾಧ್ಯತೆ, ಕನಸುಗಳನ್ನು ನನಸಾಗಿಸುವ ಪ್ರಯತ್ನ.

**ಕಟಕ:** ವ್ಯಾಪಾರದಲ್ಲಿ ಲಾಭ, ಕುಟುಂಬದಲ್ಲಿ ಗೌರವ ಹೆಚ್ಚುತ್ತದೆ, ಅತಿಯಾದ ಕೋಪ ಒಳ್ಳೆಯದಲ್ಲ.

**ಸಿಂಹ:** ಉದ್ಯೋಗಿಗಳಿಗೆ ಮಧ್ಯಮ ಫಲ, ಕಲೆ ಮತ್ತು ಸಂಗೀತದ ಕಡೆಗೆ ಒಲವು, ಕಾಲು ನೋವು ಬಾಧಿಸುತ್ತದೆ.

**ಕನ್ಯಾ:** ವೈವಾಹಿಕ ಜೀವನದಲ್ಲಿ ಸಂತೋಷ, ಉದ್ಯೋಗದಲ್ಲಿ ಬಡ್ತಿ ಸಿಗುವ ಸಾಧ್ಯತೆ, ಮಕ್ಕಳೊಂದಿಗೆ ಭಿನ್ನಾಭಿಪ್ರಾಯ ಉಂಟಾಗಬಹುದು.

**ತುಲಾ:** ಅವಿವಾಹಿತರಿಗೆ ವಿವಾಹ ಯೋಗ, ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಉತ್ತಮ ಫಲಿತಾಂಶ, ಸಕಾರಾತ್ಮಕ ಆಲೋಚನೆಗಳಿಂದ ಹೆಚ್ಚಿನ ಆತ್ಮವಿಶ್ವಾಸ.

**ವೃಶ್ಚಿಕ:** ದೀರ್ಘಾವಧಿ ಶೇರು ಹೂಡಿಕೆಯಲ್ಲಿ ಲಾಭ, ದೇವತಾ ಸಾನ್ನಿಧ್ಯಕ್ಕೆ ಭೇಟಿ ನೀಡುವಿರಿ, ಹಿತ ಶತ್ರುಗಳಿಂದ ತೊಂದರೆ.

**ಧನು:** ಕೃಷಿ ಭೂಮಿಯಲ್ಲಿ ಉತ್ತಮ ಬೆಳೆ, ದೇವಾಲಯದ ಅಭಿವೃದ್ಧಿ ಕಾರ್ಯಕ್ಕೆ ಚಾಲನೆ, ಆರೋಗ್ಯದ ಬಗ್ಗೆ ಜಾಗ್ರತರಾಗಿರಿ.

**ಮಕರ:** ವಸ್ತ್ರ, ಆಭರಣ ವ್ಯಾಪಾರಿಗಳಿಗೆ ಲಾಭ, ಎಲೆಕ್ಟ್ರಾನಿಕ್ಸ್ ಸಾಮಗ್ರಿಗಳ ಖರೀದಿ, ವೈದ್ಯಕೀಯ ವೃತ್ತಿಯಲ್ಲಿರುವವರಿಗೆ ಹೆಚ್ಚಿದ ಒತ್ತಡ.

**ಕುಂಭ:** ಹೊಸ ವ್ಯಾಪಾರ ಆರಂಭ, ರಾಜಕೀಯ ನಾಯಕರಿಗೆ ಪದವಿ ಪಲ್ಲಟ, ಕುಟುಂಬದಲ್ಲಿ ಅಶಾಂತಿ.

**ಮೀನ:** ಧರ್ಮ ಮಾರ್ಗದಲ್ಲಿ ನಡೆಯಲು ಆಸಕ್ತಿ, ಗ್ರಾಹಕರ ಪ್ರಚಾರದಿಂದ ವ್ಯಾಪಾರದಲ್ಲಿ ಅನುಕೂಲ, ಆತ್ಮೀಯರೊಡನೆ ಮನಸ್ತಾಪ.

## ಇಂಟರ್‌ನ್ಯಾಷನಲ್ ಸೆಲ್ಲೋ ಡೇ

ಎಲ್ಲಾ ಸೆಲಿಸ್ಟ್‌ಗಳು ಡಿಸೆಂಬರ್ 29 ರಂದು ಅಂತರರಾಷ್ಟ್ರೀಯ ಸೆಲ್ಲೋ ಡೇಗೆ ಒಂದಾಗುತ್ತಾರೆ. ನಾವೆಲ್ಲರೂ ಸಂಸ್ಕೃತಿ ಮತ್ತು ಸಂಗೀತ ಅಭಿಮಾನಿಗಳನ್ನು ಆಚರಿಸುತ್ತಿದ್ದೇವೆ. ಸೆಲ್ಲೊ ಒಂದು ಬಾಗಿದ ಸ್ಟ್ರಿಂಗ್ ಸಂಗೀತ ವಾದ್ಯವಾಗಿದ್ದು, ನಾಲ್ಕು ತಂತಿಗಳನ್ನು ಪರಿಪೂರ್ಣ ಸಾಮರಸ್ಯಕ್ಕಾಗಿ ಟ್ಯೂನ್ ಮಾಡಲಾಗಿದೆ. ಇದು ದೊಡ್ಡ ಪಿಟೀಲಿನಂತೆ ಕಾಣುತ್ತದೆ, ಒಬ್ಬರು ಕುಳಿತುಕೊಂಡು ಅದನ್ನು ತಮ್ಮ ಕಾಲುಗಳ ನಡುವೆ ಹಿಡಿದಿಟ್ಟುಕೊಳ್ಳಬಹುದು. ಈ ರಜಾದಿನವನ್ನು ಸೆಲ್ಲಿಸ್ಟ್‌ಗಳು ಮಾತ್ರವಲ್ಲದೆ ಸಂಯೋಜಕರು, ಕಂಡಕ್ಟರ್‌ಗಳು ಮತ್ತು ಸಂಗೀತ ಅಭಿಮಾನಿಗಳು ಸಹ ಆಚರಿಸುತ್ತಾರೆ. ಈ ದಿನವು ಹೆಸರಾಂತ ಸೆಲ್ಲಿಸ್ಟ್ ಪ್ಯಾಬ್ಲೋ ಕ್ಯಾಸಲ್ಸ್ ಅವರ ಜನ್ಮದಿನವನ್ನು ಸಹ ಆಚರಿಸುತ್ತದೆ.

ಅಂತರಾಷ್ಟ್ರೀಯ ಸೆಲ್ಲೋ ದಿನವು ಪ್ರಪಂಚದಾದ್ಯಂತದ ಎಲ್ಲಾ ಸೆಲಿಸ್ಟ್‌ಗಳಿಗೆ ಗಮನಾರ್ಹ ದಿನವಾಗಿದೆ. ಎಲ್ಲಾ ಸೆಲ್ಲಿಸ್ಟ್‌ಗಳು ಮತ್ತು ಸಂಯೋಜಕರು ಸಾರ್ವಕಾಲಿಕ ಅತ್ಯಂತ ಪ್ರಸಿದ್ಧ ಸಂಗೀತಗಾರರು ಮತ್ತು ಸಂಯೋಜಕರಲ್ಲಿ ಒಬ್ಬರಾದ ಪ್ಯಾಬ್ಲೋಸ್ ಕ್ಯಾಸಲ್ಸ್ ಅವರ ನೆನಪಿಗಾಗಿ ಒಟ್ಟಿಗೆ ಸೇರುತ್ತಾರೆ. ಕ್ಯಾಸಲ್ಸ್ ಡಿಸೆಂಬರ್ 29, 1876 ರಂದು ಕ್ಯಾಟಲೋನಿಯಾದ ಎಲ್ ವೆಂಡ್ರೆಲ್ನಲ್ಲಿ ಜನಿಸಿದರು. ತಂದೆಯ ಬೋಧನೆಯಿಂದ ಸಂಗೀತ ಲೋಕಕ್ಕೆ ತೆರೆದುಕೊಂಡರು. ನಾಲ್ಕನೇ ವಯಸ್ಸಿನಲ್ಲಿ, ಕ್ಯಾಸಲ್ಸ್ ಪಿಟೀಲು, ಪಿಯಾನೋ ಮತ್ತು ಕೊಳಲು ನುಡಿಸಲು ಕಲಿತರು. ಈ ಎಲ್ಲಾ ವಾದ್ಯಗಳಲ್ಲಿ ಅವರ ಪ್ರೀತಿ ಮತ್ತು ಆಸಕ್ತಿಯಿಂದ, ಅವರು ಬಾರ್ಸಿಲೋನಾದ ಮುನ್ಸಿಪಲ್ ಸ್ಕೂಲ್ ಆಫ್ ಮ್ಯೂಸಿಕ್ ಅನ್ನು ಪ್ರವೇಶಿಸಿದರು ಮತ್ತು ಸೆಲ್ಲೋ ನುಡಿಸಲು ಕಲಿತರು. ಪ್ರಸಿದ್ಧ ಪಿಟೀಲು ವಾದಕ ಮತ್ತು ಸಂಯೋಜಕರಾದ ಫ್ರಿಟ್ಜ್ ಕ್ರೈಸ್ಲರ್ ಅವರಿಂದ ಕ್ಯಾಸಲ್ಸ್ ಅವರನ್ನು ಬಿಲ್ಲು ಸೆಳೆಯುವ ಶ್ರೇಷ್ಠ ಸಂಗೀತಗಾರ ಎಂದು ಹೆಸರಿಸಲಾಗಿದೆ.

ಕ್ಯಾಸಲ್ಸ್ 20 ನೇ ಶತಮಾನದ ಆರಂಭದಲ್ಲಿ ಸಂಗೀತ ಉದ್ಯಮದಲ್ಲಿ ಮತ್ತು ಇಡೀ ಪ್ರಪಂಚದಲ್ಲಿ ಪ್ರಸಿದ್ಧರಾದರು, ಅವರು ಸ್ವತಃ ಹೆಸರು ಮಾಡಿದರು. ಅವರು ಏಕವ್ಯಕ್ತಿ ವಾದಕರಾಗಿ ಮತ್ತು ವಿವಿಧ ಆರ್ಕೆಸ್ಟ್ರಾಗಳೊಂದಿಗೆ ಪ್ರದರ್ಶನ ನೀಡಿದರು. ಅವರು ಸಂಗೀತ ಕ್ಷೇತ್ರಕ್ಕೆ ಅಗಾಧವಾಗಿ ಸೇರಿಸಿದರು. 1930 ರ ದಶಕದ ಉತ್ತರಾರ್ಧದಲ್ಲಿ ಅವರು ರಚಿಸಿದ ಮತ್ತು ಮರುಶೋಧಿಸಿದ 'ಬಾಚ್ ಸೆಲ್ಲೋ ಸೂಟ್' ನ ಅವರ ರೆಕಾರ್ಡಿಂಗ್ಗಳಿಗಾಗಿ ಅವರು ಹೆಚ್ಚು ನೆನಪಿಸಿಕೊಳ್ಳುತ್ತಾರೆ ಮತ್ತು ಅಂಗೀಕರಿಸಲ್ಪಟ್ಟಿದ್ದಾರೆ.

ಇದಕ್ಕೂ ಮೊದಲು, ಅನೇಕ ಸೆಲ್ಲಿಸ್ಟ್‌ಗಳು ಅವುಗಳನ್ನು ವ್ಯಾಯಾಮ ಎಂದು ಮಾತ್ರ ಪರಿಗಣಿಸಿದ್ದರು, ಆದರೆ ಕೆಲವರು ಇದು ನಿಜವಾದ ಪ್ರಕಟಿತ ಸಂಗೀತದ ತುಣುಕು ಎಂದು ನಂಬಲಿಲ್ಲ. ಈ ಹೊಸ ಬಹಿರಂಗಪಡಿಸುವಿಕೆ ಮತ್ತು ಜನಪ್ರಿಯತೆಯೊಂದಿಗೆ, ಸಂಗೀತವು ಒಂದೇ ಆಗಿರಲಿಲ್ಲ. ಸೂಟ್ಗಳ ರೆಕಾರ್ಡಿಂಗ್ಗಳ ಒಳಹರಿವು ಇತ್ತು. ಎಲ್ಲಾ ಸೆಲ್ಲಿಸ್ಟ್‌ಗಳು ಇದ್ದಕ್ಕಿದ್ದಂತೆ ಸೂಟ್ಗಳನ್ನು ತಿಳಿದುಕೊಳ್ಳಬೇಕಾಗಿತ್ತು ಮತ್ತು ಹೆಚ್ಚಿನ ಸಂಯೋಜಕರು ಅವುಗಳನ್ನು ಆಧರಿಸಿ ಕೃತಿಗಳನ್ನು ರಚಿಸಿದ್ದಾರೆ. ಪ್ಯಾಬ್ಲೋ ಕ್ಯಾಸಲ್ಸ್ ಫೆಸ್ಟಿವಲ್ ಎರಡು ವಾರಗಳ ಕಾಲ ನಡೆಯುವ ಒಂದು ಘಟನೆಯಾಗಿದೆ. ಜಗತ್ತಿನಾದ್ಯಂತ ಎಲ್ಲಾ ಕಲಾವಿದರು ಮತ್ತು ಸಂಗೀತಗಾರರನ್ನು ಆಹ್ವಾನಿಸಲಾಗಿದೆ. ಇದು ಇಂದಿಗೂ ಚಾಲನೆಯಲ್ಲಿದೆ

## ಮರಾಠಿಯ ಖ್ಯಾತ ನಟಿ ಊರ್ಮಿಳಾ ಕೊಠಾರೆ ಕಾರು ಹರಿದು ಕಾರ್ಮಿಕ ಸಾವು




**ಮುಂಬೈ:** ಮರಾಠಿ ಕಲಾವಿದೆ ಯೊಬ್ಬರ ಕಾರು ಹರಿದು ಕಾರ್ಮಿಕರೊಬ್ಬರು ಮೃತಪಟ್ಟು, ಇನ್ನೊಬ್ಬರು ಗಂಭೀರವಾಗಿ ಗಾಯಗೊಂಡಿರುವ ಘಟನೆ ಮುಂಬೈಯಲ್ಲಿ ನಡೆದಿದೆ. ಕಾಂದಿವಲಿಯಲ್ಲಿ ಈ ಘಟನೆ ನಡೆದಿದ್ದು, ಮರಾಠಿ ಕಲಾವಿದೆ ಮತ್ತು ಅವರ ಕಾರು ಚಾಲಕ ಕೂಡ ಗಾಯಗೊಂಡಿದ್ದಾರೆ. ಗಾಯಗೊಂಡ ಮರಾಠಿ ನಟಿಯನ್ನು ಊರ್ಮಿಳಾ ಕೊಠಾರೆ ಎಂದು ಗುರುತಿಸಲಾಗಿದೆ

ನಟಿ ಊರ್ಮಿಳಾ ಕೊಠಾರೆ ಅಲಿಯಾಸ್ ಊರ್ಮಿಳಾ ಕನೆಟ್ಕರ್ ಶುಕ್ರವಾರ ರಾತ್ರಿ ಚಿತ್ರೀಕರಣ ಮುಗಿಸಿ ಮನೆಗೆ ಹಿಂದಿರುಗುತ್ತಿದ್ದಾಗ ಅವರ ಚಾಲಕ ಕಾರಿನ ನಿಯಂತ್ರಣ ಕಳೆದುಕೊಂಡು ಪೊಯಿಸರ್ ಮೆಟ್ರೋ ನಿಲ್ದಾಣದ ಬಳಿ ಕೆಲಸ ಮಾಡುತ್ತಿದ್ದ ಇಬ್ಬರು ಕಾರ್ಮಿಕರಿಗೆ ಡಿಕ್ಕಿ ಹೊಡೆದಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ. ಕಾರು ಇಬ್ಬರು ಕಾರ್ಮಿಕರ ಮೇಲೆ ಹರಿದಿದೆ ಮತ್ತು ಅವರಲ್ಲಿ ಒಬ್ಬರು ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ ಮತ್ತು ಇನ್ನೊಬ್ಬರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ. ಘಟನೆಯಲ್ಲಿ ಚಾಲಕನಿಗೂ ಗಂಭೀರ ಗಾಯಗಳಾಗಿವೆ. ಇತ್ತ ಊರ್ಮಿಳಾ ಕೊಠಾರೆ ಅವರಿಗೆ ಸಣ್ಣಪುಟ್ಟ ಗಾಯಗಳಾಗಿವೆ. ಅಪಘಾತಕ್ಕೀಡಾದ ಹುಂಡೈ ವೆರ್ನಾ ಕಾರು ವೇಗದಲ್ಲಿ ಸಾಗುತ್ತಿತ್ತು ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರೆ. ಏರ್ ಬ್ಯಾಗ್ ಸರಿಯಾದ ಸಮಯಕ್ಕೆ ತೆರೆದುಕೊಂಡ ಕಾರಣ ಊರ್ಮಿಳಾ ಕೊಠಾರೆ ಅಪಾಯದಿಂದ ಪಾರಾಗಿದ್ದಾರೆ.

ಸದ್ಯ ಚಾಲಕನ ವಿರುದ್ದ ಪೊಲೀಸರು ದೂರು ದಾಖಲಿಸಿದ್ದಾರೆ. ಅತೀ ವೇಗದ ಚಾಲನೆ ಮತ್ತು ನಿರ್ಲಕ್ಷ್ಯದ ಚಾಲನೆಯಿಂದ ಜೀವ ಹಾನಿ ಸೆಕ್ಷನ್ನಡಿ ಪ್ರಕರಣ ದಾಖಲಿಸಿಕೊಂಡಿರುವುದಾಗಿ ಪೊಲೀಸರು ತಿಳಿಸಿದ್ದಾರೆ.

## ಅರ್ಧಕ್ಕೆ ಧ್ವಜ ಹಾರಿಸಿ ಮನಮೋಹನ್ ಸಿಂಗ್‌ಗೆ ಗೌರವ ಸೂಚಿಸಿದ ಮಾರಿಷಸ್



**ಪೋರ್ಟ್ ಲೂಯಿಸ್ (ಮಾರಿಷಸ್):** ಮಾಜಿ ಪ್ರಧಾನಿ ಡಾ. ಮನಮೋಹನ್ ಸಿಂಗ್ ಅವರ ನಿಧನಕ್ಕೆ ನೆರೆಯ ಮಾರಿಷಸ್ ಸರ್ಕಾರ ಸಂತಾಪ ಸೂಚಿಸಿದೆ. ಅವರ ಅಂತ್ಯಕ್ರಿಯೆ ಹಿನ್ನೆಲೆ ಶನಿವಾರ ಇಡೀ ದಿನ ರಾಷ್ಟ್ರಧ್ವಜವನ್ನು ಅರ್ಧಕ್ಕೆ ಹಾರಿಸಿ ಗೌರವ ಸಲ್ಲಿಸಿದೆ.

ಭಾರತದ ಮಾಜಿ ಪ್ರಧಾನಿಗೆ ಗೌರವ ಸೂಚಿಸಲು ಶನಿವಾರ ಸೂರ್ಯಾಸ್ತದವರೆಗೆ ಎಲ್ಲಾ ಸರ್ಕಾರಿ ಮತ್ತು ಖಾಸಗಿ ಕಟ್ಟಡಗಳ ಮೇಲಿನ ಮಾರಿಷಸ್ ಧ್ವಜವನ್ನು ಅರ್ಧಕ್ಕೆ ಹಾರಿಸಲು ಪ್ರಧಾನ ಮಂತ್ರಿ ಕಚೇರಿ ಪ್ರಕಟಣೆ ಹೊರಡಿಸಿತ್ತು. ಶನಿವಾರ ಜರುಗಿದ ಆರ್ಥಿಕ ತಜ್ಞನ ಅಂತ್ಯಕ್ರಿಯೆಯಲ್ಲಿ ಮಾರಿಷಸ್ ಸರ್ಕಾರದ ವಿದೇಶಾಂಗ ಸಚಿವ ಧನಂಜಯ್ ರಾಮ್ಫುಲ್ ಅವರು ಭಾಗವಹಿಸಿದ್ದರು. ದೆಹಲಿಗೆ ಆಗಮಿಸಿದ್ದ ಅವರು, ಡಾ. ಸಿಂಗ್ ಅವರಿಗೆ ಅಂತಿಮ ನಮನ ಸಲ್ಲಿಸಿದರು.

ಮನಮೋಹನ್ ಸಿಂಗ್ ಅವರ ಸಾವಿನ ಸುದ್ದಿ ತಿಳಿದ ಮಾರಿಷಸ್ ಪ್ರಧಾನಿ ನವೀನ್ ರಾಮಗೂಲಂ ಅವರು ರಾಜಧಾನಿ ಪೋರ್ಟ್ ಲೂಯಿಸ್ನಲ್ಲಿರುವ ಭಾರತದ ಹೈಕಮಿಷನ್ಗೆ ಶುಕ್ರವಾರ ಭೇಟಿ ನೀಡಿ, ಅಲ್ಲಿದ್ದ ಸಿಂಗ್ ಅವರ ಭಾವಚಿತ್ರಕ್ಕೆ ನಮನ ಸಲ್ಲಿಸಿದರು. ಬಳಿಕ ಸಂತಾಪ ಪುಸ್ತಕದಲ್ಲಿ ಸಹಿ ಹಾಕಿದರು. ಮಾರಿಷಸ್ನಲ್ಲಿರುವ ಭಾರತೀಯ ಹೈ ಕಮಿಷನ್ ಈ ಚಿತ್ರಗಳನ್ನು ತನ್ನ ಎಕ್ಸ್ ಖಾತೆಯಲ್ಲಿ ಹಂಚಿಕೊಂಡಿದೆ.

**ಸಂತಾಪ:** ಮಾರಿಷಸ್ ಪ್ರಧಾನಿ ರಾಮಗೂಲಂ ಅವರು ಫೇಸ್ಬುಕ್ನಲ್ಲಿ ಸಂತಾಪ ಸೂಚಿಸಿದ್ದು, ಭಾರತದ ಮಾಜಿ ಪ್ರಧಾನಿ ಡಾ. ಮನಮೋಹನ್ ಸಿಂಗ್ ಅವರ ನಿಧನ ವಾರ್ತೆ ನನಗೆ ತೀವ್ರ ದುಃಖ ತರಿಸಿದೆ. 2005 ರಲ್ಲಿ ನಾನು ವಿರೋಧ ಪಕ್ಷದ ನಾಯಕನಾಗಿದ್ದಾಗ ಮತ್ತು ಅವರು ಇಲ್ಲಿಗೆ ಬಂದಾಗ ಮೊದಲ ಬಾರಿಗೆ ಭೇಟಿ ಆಗಿದ್ದೆ. ಡಾ.ಸಿಂಗ್ ಒಬ್ಬ ಸಜ್ಜನ ರಾಜಕಾರಣಿ ಮತ್ತು ಪ್ರಖ್ಯಾತ ಅರ್ಥಶಾಸ್ತ್ರಜ್ಞರಾಗಿದ್ದರು ಎಂದು ಗುಣಗಾನ ಮಾಡಿದ್ದಾರೆ.

## ರೋಟಿ ಹಂಚಲು ತಡಮಾಡಿದ್ದಕ್ಕೆ ಬೇರೆ ಯುವತಿಯನ್ನು ಮದುವೆಯಾದ ವರ

**ಲಕ್ನೋ:** ಮದುವೆಯಲ್ಲಿ ರೋಟಿ ಹಂಚಲು ತಡಮಾಡಿದ್ದಕ್ಕೆ ಬೇರೆ ಯುವತಿಯನ್ನು ವರ ಮದುವೆಯಾಗಿರುವ ವಿಚಿತ್ರ ಘಟನೆ ಉತ್ತರ ಪ್ರದೇಶದ ಚಂದೌಲಿ ಜಿಲ್ಲೆಯ ಹಮೀದ್‌ಪುರ ಗ್ರಾಮದಲ್ಲಿ ವಿಚಿತ್ರ ಘಟನೆಯೊಂದು ನಡೆದಿದೆ. ಊಟ ಬಡಿಸಲು ತಡವಾದ ಕಾರಣಕ್ಕೆ ವರನು ತನ್ನ ಮದುವೆಯಿಂದ ಹೊರನಡೆದು ಬೇರೆ ಯುವತಿಯೊಂದಿಗೆ ಮದುವೆಯಾಗಿದ್ದಾನೆ. ಇದನ್ನು ತಿಳಿದ ವಧು ಆತನ ವಿರುದ್ಧ ದೂರು ದಾಖಲಿಸಿದ್ದಾಳೆ. ಏಳು ತಿಂಗಳ ಹಿಂದೆ ಮೆಹ್ತಾಬ್ ಎಂಬ ಯುವಕನೊಂದಿಗೆ ವಧುವಿನ ವಿವಾಹ ನಿಶ್ಚಯವಾಗಿತ್ತು. ಡಿ.22 ರಂದು ಕಾರ್ಯಕ್ರಮಗಳು ಪ್ರಾರಂಭವಾಗಿದ್ದವು. ಈ ವೇಳೆ ವರನ ಕಡೆಯವರಿಗೆ ಊಟವನ್ನು ತಡವಾಗಿ ಬಡಿಸಿದ್ದಕ್ಕೆ ಗಲಾಟೆ ಮಾಡಿದ್ದಾರೆ. ವಧುವಿನ ಕಡೆಯವರು ವರನ ಕುಟುಂಬಸ್ಥರನ್ನು ಸಮಾಧಾನಪಡಿಸಲು ಪ್ರಯತ್ನಪಟ್ಟರು. 1.5 ಲಕ್ಷ ರೂ. ವರದಕ್ಷಿಣೆ ಸೇರಿದಂತೆ 7 ಲಕ್ಷ ರೂ. ಆರ್ಥಿಕ ನಷ್ಟವನ್ನು ಹೇಳಿಕೊಂಡರು. ಆದರೆ ವರನ ಕಡೆಯವರು ವಧುವಿನ ಮನೆಯವರನ್ನು ದೂಷಿಸುತ್ತಾ ಅಲ್ಲಿಂದ ಹೊರನಡೆದಿದ್ದಾರೆ. ಬಳಿಕ ವರ ಬೇರೆ ಯುವತಿಯನ್ನು ಮದುವೆಯಾಗಿರುವುದನ್ನು ತಿಳಿದು ವಧು ಇಂಡಸ್ಟ್ರಿಯಲ್ ನಗರ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದು, ಎಫ್‌ಐಆರ್ ದಾಖಲಾಗಿದೆ. ಆದರೆ ವರನ ವಿರುದ್ಧ ಯಾವುದೇ ಕ್ರಮ ಕೈಗೊಳ್ಳದಿದ್ದಾಗ ಡಿ.24 ರಂದು ಪೊಲೀಸ್ ವರಿಷ್ಠಾಧಿಕಾರಿಗೆ ವಧು ಮನವಿ ಮಾಡಿಕೊಂಡಿದ್ದಾರೆ. ಆರ್ಥಿಕ ನಷ್ಟ ಹಾಗೂ ವರನ ಕಡೆಯ ಐದು ವ್ಯಕ್ತಿಗಳ ವಿರುದ್ಧ ಎಫ್‌ಐಆರ್ ದಾಖಲಿಸಿ ಕಾನೂನು ಕ್ರಮ ಕೈಗೊಳ್ಳುವಂತೆ ಕೋರಿದ್ದಾರೆ. ಕ್ರಮ ಕೈಗೊಳ್ಳುವುದಾಗಿ ಎಸ್‌ಪಿ ಭರವಸೆ ನೀಡಿದ್ದು, ಪೊಲೀಸರಿಗೆ ವರನ ಕುಟುಂಬಸ್ಥರನ್ನು ಸಂಪರ್ಕಿಸುವಂತೆ ಸೂಚನೆ ನೀಡಿದ್ದಾರೆ.

## ರಾಹುಲ್ ಗಾಂಧಿ ಹೇಳಿಕೆ : ಸಂಬಿತ್ ಪಾತ್ರ ತಿರುಗೇಟು



**ನವದೆಹಲಿ:** ಮಾಜಿ ಪ್ರಧಾನಿ ಡಾ. ಮನಮೋಹನ್ ಸಿಂಗ್ ಅವರ ಅಂತ್ಯಕ್ರಿಯೆ ವಿಚಾರದಲ್ಲಿ ಕೆಟ್ಟ ರಾಜಕೀಯ ಮಾಡಬೇಡಿ ಎಂದು ಬಿಜೆಪಿ ಸಂಸದ ಸಂಬಿತ್ ಪಾತ್ರ ತಿರುಗೇಟು ನೀಡಿದ್ದಾರೆ.

ದೆಹಲಿಯಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ರಾಹುಲ್ ಗಾಂಧಿ ಹೇಳಿಕೆ ನಾಚಿಗೇಡು ಮತ್ತು ದುರದೃಷ್ಟಕರ ಸಂಗತಿ, ಕೀಳುಮಟ್ಟದ ರಾಜಕೀಯ ಎಂದು ಕಿಡಿ ಕಾರಿದರು.

ದೇಶದ ಶ್ರೇಷ್ಠ ವ್ಯಕ್ತಿಯನ್ನು ಕಳೆದುಕೊಂಡಿದ್ದೇವೆ. ಅವರ ಸಾವಿನಲ್ಲಿ ಘನತೆ ಮೆರೆಬೇಕು. ಆದ್ರೆ ರಾಹುಲ್ ಅವರ ಹೇಳಿಕೆ ನಾಡಿಗೇಡಿನ ಸಂಗತಿಯಾಗಿದೆ. ಕಾಂಗ್ರೆಸ್ ಮನಮೋಹನ್ ಸಿಂಗ್ ಅವರ ಸ್ಮಾರಕಕ್ಕೆ ಜಾಗ ನೀಡುವಂತೆ ಮನವಿ ಮಾಡಿತ್ತು. ಅದಕ್ಕೆ ಸರ್ಕಾರ ಒಪ್ಪಿದೆ, ಸಿಂಗ್ರ ಗೌರವಾರ್ಥವಾಗಿ ಸ್ಮಾರಕ ನಿರ್ಮಿಸುವ ಉದ್ದೇಶವನ್ನು ವ್ಯಕ್ತಪಡಿಸಿದೆ. ಸ್ಮಾರಕ ಮಾಡುವುದರಿಂದ ಇಡೀ ಜಗತ್ತು ಅವರ ಸಕಾರಾತ್ಮ ಕಾರ್ಯಗಳನ್ನು ನೆನಪಿಸಿಕೊಳ್ಳುತ್ತದೆ ಎಂದು ಹೇಳಿದರು.

ಸ್ಮಾರಕ ನಿರ್ಮಾಣ ಮಾಡುವುದಕ್ಕೆ ಕೆಲವು ಕಾರ್ಯವಿಧಾನವಿದೆ. ಆದ್ರೆ ಅಂತ್ಯಕ್ರಿಯು ಕಾಯಲು ಸಾಧ್ಯವಿಲ್ಲದ ಪ್ರಕ್ರಿಯೆಯಾಗಿದೆ. ಆದ್ದರಿಂದಲೇ ಬೋಧ್ ಘಾಟ್ನಲ್ಲಿ ಅವರ ಅಂತ್ಯಕ್ರಿಯೆ ನೆರವೇರಿಸಲಾಯಿತು.

ಭಾರತಮಾತೆಯ ಮಹಾನ್ ಪುತ್ರ ಹಾಗೂ ಸಿಖ್ ಸಮುದಾಯದ ಮೊದಲ ಪ್ರಧಾನಿ ಡಾ.ಮನಮೋಹನ್ ಸಿಂಗ್ ಅವರ ಅಂತಿಮ ಸಂಸ್ಕಾರವನ್ನು ನಿಗಮಬೋಧ್ ಘಾಟ್ನಲ್ಲಿ ನೆರವೇರಿಸುವ ಮೂಲಕ ಪ್ರಸ್ತುತ ಸರ್ಕಾರ ಅವರಿಗೆ ಸಂಪೂರ್ಣ ಅವಮಾನ ಮಾಡಿದೆ. ಮನಮೋಹನ್ ಸಿಂಗ್ ಒಂದು ದಶಕದ ಕಾಲ ಭಾರತದ ಪ್ರಧಾನಿಯಾಗಿದ್ದರು. ಅವರ ಅಧಿಕಾರಾವಧಿಯಲ್ಲಿ ದೇಶವು ಆರ್ಥಿಕ ಮಹಾಶಕ್ತಿಯಾಯಿತು ಮತ್ತು ಅವರ ನೀತಿಗಳು ಇನ್ನೂ ದೇಶದ ಬಡ ಮತ್ತು ಹಿಂದುಳಿದ ವರ್ಗಗಳಿಗೆ ಬೆಂಬಲ ನೀಡುತ್ತಿವೆ.

ಇಲ್ಲಿಯವರೆಗೆ, ಎಲ್ಲಾ ಮಾಜಿ ಪ್ರಧಾನಿಗಳ ಘನತೆಯನ್ನು ಗೌರವಿಸಿ, ಅವರ ಅಂತಿಮ ವಿಧಿಗಳನ್ನು ಅಧಿಕೃತ ಸಮಾಧಿಗಳಲ್ಲಿ ನಡೆಸಲಾಯಿತು, ಇದರಿಂದ ಪ್ರತಿಯೊಬ್ಬ ವ್ಯಕ್ತಿಯೂ ಯಾವುದೇ ಅನಾನುಕೂಲತೆ ಇಲ್ಲದೇ ಗೌರವ ಸಲ್ಲಿಸಬದಾಗಿದೆ. ಹಾಗೆಯೇ ದೇಶದ ಈ ಮಹಾನ್ ಪುತ್ರ ಮತ್ತು ಅವರ ಸಮುದಾಯದ ಬಗ್ಗೆ ಸರ್ಕಾರ ಗೌರವ ತೋರಿಸಬೇಕಿತ್ತು. ಆದ್ರೆ ಸಂಪೂರ್ಣ ಅಪಮಾನ ಮಾಡಿದೆ ಎಂದು ಹಿಂದಿಯಲ್ಲಿ ಬರೆದುಕೊಂಡಿದ್ದಾರೆ.



## ಭಾರತ-ಚೀನಾ ಯುದ್ಧಸಂಘರ್ಷ ಕಂಡ ಪ್ರದೇಶದಲ್ಲೇ ಛತ್ರಪತಿ ಶಿವಾಜಿ ಪ್ರತಿಮೆ ಸ್ಥಾಪನೆ

**ದೆಹಲಿ:** ಈಗ ಛತ್ರಪತಿ ಶಿವಾಜಿ ಮಹಾರಾಜರ ಧ್ವಜವು ಭಾರತದ ಪೂರ್ವ ಗಡಿಯಲ್ಲಿ ಹಾರಾಡಲಿದೆ. ಲಡಾಖ್ನ ಪಾಂಗಾಂಗ್ ಸರೋವರದ ದಡದಲ್ಲಿ 14300 ಅಡಿ ಎತ್ತರದಲ್ಲಿ ಶಿವಾಜಿಯ ಭವ್ಯವಾದ ಪ್ರತಿಮೆಯನ್ನು ಸ್ಥಾಪಿಸಲಾಗಿದೆ. ಸೇನೆಯ ಪ್ರಕಾರ, ಶಿವಾಜಿಯ ಈ ಪ್ರತಿಮೆಯು ಶೌರ್ಯ, ದೂರದೃಷ್ಟಿ ಮತ್ತು ಅಚಲ ನ್ಯಾಯದ ದೊಡ್ಡ ಸಂಕೇತವಾಗಿದೆ.

ಸೇನೆಯ ಫೈರ್ ಅಂಡ್ ಫ್ಯೂರಿ ಕಾರ್ಪ್ಸ್ ಹೇಳಿಕೆಯಲ್ಲಿ, '26 ಡಿಸೆಂಬರ್ 2024 ರಂದು, ಛತ್ರಪತಿ ಶಿವಾಜಿ ಮಹಾರಾಜರ ಪ್ರತಿಮೆಯನ್ನು 14,300 ಅಡಿ ಎತ್ತರದಲ್ಲಿ ಪ್ಯಾಂಗೊಂಗ್ ತ್ಸೋ ದಡದಲ್ಲಿ ಅನಾವರಣಗೊಳಿಸಲಾಯಿತು. ಶೌರ್ಯ, ದೂರದೃಷ್ಟಿ ಮತ್ತು ಅಚಲ ನ್ಯಾಯದ ಈ ಬೃಹತ್ ಸಂಕೇತವನ್ನು ಲೆಫ್ಟಿನೆಂಟ್ ಜನರಲ್ ಹಿತೇಶ್ ಭಲ್ಲಾ (SC, SM, VSM), GOCಆಫ್ ಫೈರ್ ಅಂಡ್ ಫ್ಯೂರಿ ಕಾರ್ಪ್ಸ್ ಮತ್ತು ಮರಾಠಾ ಲೈಟ್ ಪದಾತಿದಳದ ಕರ್ನಲ್: ಫೈರ್ ಅಂಡ್ ಫ್ಯೂರಿ ಕಾರ್ಪ್ಸ್ ಉದ್ಘಾಟಿಸಿದರು.

ಭಾರತ ಮತ್ತು ಚೀನಾ ನಡುವಿನ ಗಡಿಯಾಗಿರುವ ಲೈನ್ ಆಫ್ ಆಕ್ಚುವಲ್ ಕಂಟ್ರೋಲ್ (ಎಲ್‌ಎಸಿ) ನೀರಿನ ಮೂಲಕ ಹಾದುಹೋಗುವ ಸರೋವರವು ಪ್ಯಾಂಗೊಂಗ್ ಆಗಿದೆ. ಸರೋವರದ ಪಶ್ಚಿಮ ತುದಿಯು ಭಾರತದ ಭೂಪ್ರದೇಶದಲ್ಲಿದೆ ಮತ್ತು ಪೂರ್ವದ ತುದಿಯು ಚೀನಾದಿಂದ ನಿಯಂತ್ರಿಸಲ್ಪಡುವ ಟಿಬೆಟ್‌ನಲ್ಲಿದೆ. 1962ರ ಭಾರತ-ಚೀನಾ ಯುದ್ಧದ ನಂತರ ಹಲವು ಸಂಘರ್ಷಗಳನ್ನು ಕಂಡ ಪ್ರದೇಶವಿದು. 2017ರ ಆಗಸ್ಟ್‌ನಲ್ಲಿ ಈ ಸರೋವರದ ದಡದಲ್ಲಿ ಉಭಯ ದೇಶಗಳ ಸೈನಿಕರ ನಡುವೆ ಘರ್ಷಣೆ ನಡೆದಿತ್ತು. ಮೇ 2020 ರಲ್ಲಿ ಸಹ ಸುಮಾರು 250 ಸೈನಿಕರು ಮುಖಾಮುಖಿಯಾಗಿದ್ದರು.

ಆಗಸ್ಟ್ 2020 ರಲ್ಲಿ, ಭಾರತೀಯ ಸೇನೆಯು ಸರೋವರದ ದಕ್ಷಿಣ ದಂಡೆಯಲ್ಲಿ ಪ್ರಮುಖ ಭಾಗಗಳನ್ನು ವಶಪಡಿಸಿಕೊಂಡಿತು. ಇವುಗಳಲ್ಲಿ ರೆಜಾಂಗ್ ಲಾ, ರೆಕ್ವಿನ್ ಲಾ, ಬ್ಲ್ಯಾಕ್ ಟಾಪ್, ಗುರುಂಗ್ ಹಿಲ್, ಗೂರ್ಖಾ ಹಿಲ್ ಇತ್ಯಾದಿ ಸೇರಿವೆ. ಆದರೆ, ನಂತರ ಭಾರತವು ಈ ಪ್ರದೇಶವನ್ನು ಖಾಲಿ ಮಾಡಿತು. ಈಗ ಅಲ್ಲಿ ಶಿವಾಜಿಯ ಪ್ರತಿಮೆಯನ್ನು ಸ್ಥಾಪಿಸುವುದು ಚೀನಾಕ್ಕೆ ಸಂದೇಶ ಎಂಬಂತೆ ನೋಡಲಾಗುತ್ತಿದೆ.

## ಭಾರೀ ಹಿಮಪಾತ; ಹಿಮಾಚಲದ ಕುಲುವಿನಲ್ಲಿ ಸಿಲುಕಿದ್ದ 5,000 ಪ್ರವಾಸಿಗರ ರಕ್ಷಣೆ

**ಡೆಹ್ರಾಡೂನ್:** ಹಿಮಾಚಲ ಪ್ರದೇಶದಲ್ಲಿ ಭಾರೀ ಹಿಮಪಾತದ ನಡುವೆ ಶುಕ್ರವಾರ ಹಿಮಾಚಲ ಪ್ರದೇಶದ ಕುಲುವಿನ ಸ್ಕೀ ರೆಸಾರ್ಟ್ ಸೋಲಾಂಗ್ ನಾಲಾದಲ್ಲಿ ಸಿಲುಕಿದ್ದ ಸುಮಾರು 5,000 ಪ್ರವಾಸಿಗರನ್ನು ಪೊಲೀಸರು ರಕ್ಷಿಸಿದ್ದಾರೆ. ಸೋಲಾಂಗ್ ನಾಲಾದಲ್ಲಿ ಸುಮಾರು 1,000 ವಾಹನಗಳು ಸಿಲುಕಿಕೊಂಡಿದ್ದವು. ಶುಕ್ರವಾರ ರಕ್ಷಣಾ ಕಾರ್ಯಾಚರಣೆ ನಡೆಸಲಾಯಿತು ಎಂದು ಕುಲು ಪೊಲೀಸರು ತಿಳಿಸಿದ್ದಾರೆ. ಭಾರೀ ಹಿಮಪಾತದಿಂದಾಗಿ ಸುಮಾರು 1,000 ಪ್ರವಾಸಿಗರು ಮತ್ತು ಇತರ ವಾಹನಗಳು ಸೋಲಾಂಗ್ ನಾಲಾದಲ್ಲಿ ಸಿಲುಕಿಕೊಂಡಿವೆ. ಈ ವಾಹನಗಳಲ್ಲಿ ಸುಮಾರು 5,000 ಪ್ರವಾಸಿಗರು ಇದ್ದರು. ವಾಹನಗಳು ಮತ್ತು ಪ್ರವಾಸಿಗರನ್ನು ಕುಲು ಪೊಲೀಸರು ರಕ್ಷಿಸಿದ್ದು, ಸುರಕ್ಷಿತ ಸ್ಥಳಗಳಿಗೆ ಕೊಂಡೊಯ್ದಿದ್ದಾರೆ. ರಕ್ಷಣೆ ಕಾರ್ಯಾಚರಣೆ ಇನ್ನೂ ನಡೆಯುತ್ತಿದೆ ಎಂದು ಕುಲು ಪೊಲೀಸರು ಎಕ್ಸ್‌ನಲ್ಲಿ ಪೋಸ್ಟ್ ಹಾಕಿದ್ದರು. ಭಾರೀ ಹಿಮಪಾತ ಮತ್ತು ಶೀತ ಅಲೆಗಳು ಹಿಮಾಚಲ ಪ್ರದೇಶವನ್ನು ಮತ್ತಷ್ಟು ಕಾಡಲಿದೆ ಎಂದು ಭಾರತೀಯ ಹವಾಮಾನ ಇಲಾಖೆ (ಐಎಂಡಿ) ಶುಕ್ರವಾರ ತಿಳಿಸಿದೆ. ಹಿಮಾಚಲ ಪ್ರದೇಶವು ಲಾಹೌಲ್-ಸ್ಪಿತಿ, ಚಂಬಾ, ಕಂಗ್ರಾ, ಕುಲು, ಶಿಮ್ಲಾ ಮತ್ತು ಕಿನ್ನೌರ್ ಸೇರಿದಂತೆ ಆರು ಜಿಲ್ಲೆಗಳಲ್ಲಿ ಭಾರೀ ಮಳೆ ಮತ್ತು ಹಿಮಪಾತಕ್ಕೆ ಸಾಕ್ಷಿಯಾಗಿದೆ. ಡಿ.29 ರಿಂದ ಬಿಲಾಸ್ಪುರ್, ಹಮೀರ್ಪುರ್ ಮತ್ತು ಉನಾ ಜಿಲ್ಲೆಗಳನ್ನು ಒಳಗೊಂಡಂತೆ ಬಯಲು ಪ್ರದೇಶಗಳ ಮೇಲೆ ಚಳಿಗಾಳಿಯು ಪರಿಣಾಮ ಬೀರುವ ನಿರೀಕ್ಷೆಯಿದೆ. ಮಂಡಿ, ಕುಲು ಮತ್ತು ಚಂಬಾ ಸೇರಿದಂತೆ ಈ ಪ್ರದೇಶಗಳಲ್ಲಿ ಜ.1 ರವರೆಗೆ ತೀವ್ರ ಚಳಿ ಇರಲಿದೆ.



## ಕರಾಚಿಯಲ್ಲಿ ಭೂಗತ ಪಾತಕಿ ದಾವೂದ್ ಇಬ್ರಾಹಿಂ 69ನೇ ಬರ್ತ್ ಡೇ

**ಮುಂಬೈ:** ಭಾರತದ ಮೋಸ್ಟ್ ವಾಂಟೆಡ್ ಭೂಗತ ಪಾತಕಿ, ವಿಶ್ವಸಂಸ್ಥೆಯಿಂದ ಗೊತ್ತುಪಡಿಸಿದ ಜಾಗತಿಕ ಭಯೋತ್ಪಾದಕ ದಾವೂದ್ ಇಬ್ರಾಹಿಂ ಕರಾಚಿಯಲ್ಲಿ ತನ್ನ 69ನೇ ಹುಟ್ಟುಹಬ್ಬವನ್ನು ಅದ್ದೂರಿಯಾಗಿ ಆಚರಿಸಿಕೊಂಡಿದ್ದಾನೆ. ಮೂಲಗಳ ಪ್ರಕಾರ ಆತ ಕರಾಚಿಯಲ್ಲಿ ಅದ್ದೂರಿ ಬರ್ತ್ಡೇ ಪಾರ್ಟಿ ಆಯೋಜಿಸಿದ್ದ ಎನ್ನಲಾಗಿದೆ. ಅಕ್ಟೋಬರ್ 1, 2023 ರಂದು ಮಾಧ್ಯಮಗಳು ವರದಿ ಮಾಡಿದಂತೆ ದಾವೂದ್ಗೆ ಪಾಕಿಸ್ತಾನದ ಇಂಟರ್-ಸರ್ವೀಸಸ್ ಇಂಟೆಲಿಜೆನ್ಸ್ ಹೆಚ್ಚುವರಿ ಡೈರೆಕ್ಟರ್-ಜನರಲ್ ಗೌರವ ಸ್ಥಾನವನ್ನು ನೀಡಲಾಗಿದೆ.ಇನ್ನು ಈ ಬರ್ತ್ಡೇ ಪಾರ್ಟಿಗಾಗಿ ಪಾಕಿಸ್ತಾನದ ಸಶಸ್ತ್ರ ಪಡೆಗಳ ಗಣ್ಯರು, ರಾಜಕೀಯ ಮತ್ತು ಕಾರ್ಪೊರೇಟ್ ಸಂಸ್ಥೆಗಳನ್ನು ಆಹ್ವಾನಿಸಲಾಗಿದೆ ಎಂದು ತಿಳಿದುಬಂದಿದೆ. ಈ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಭಾರತದ ಕೆಲವು ಉದ್ಯಮಿಗಳು ಸೇರಿದಂತೆ ಹಲವಾರು ಉದ್ಯಮಿಗಳು ತಮ್ಮ ಖಾಸಗಿ ಜೆಟ್ಗಳಲ್ಲಿ ದುಬೈನಿಂದ ಕರಾಚಿಗೆ ತೆರಳಿದ್ದಾರೆ ಎಂದು ತಿಳಿದುಬಂದಿದೆ.

ಮುಂಬೈ ಪೊಲೀಸರ ಕಾನ್ಸ್ಟೇಬಲ್ನ ಮಗ, ಕೊಂಕಣಿ ಮುಸ್ಲಿಂ, ಭಾರತದ ಮೋಸ್ಟ್ ವಾಂಟೆಡ್ ಪಾತಕಿ ದಾವೂದ್ ಇಂದು ಐಎಸ್ಐನ ಅತ್ಯಂತ ಅಮೂಲ್ಯ ಆಸ್ತಿಯಾಗಿದ್ದಾನೆ. ಇಂದು ಹಲವಾರು ಹಂತದ ಭದ್ರತೆಯೊಂದಿಗೆ ಅವನನ್ನು ರಕ್ಷಿಸುತ್ತದೆ. ಹಲವಾರು ಉನ್ನತ ಮಟ್ಟದ ಐಎಸ್‌ಐ ಅಧಿಕಾರಿಗಳು ಆತನ ಮಾದಕ ವಸ್ತು ದಂಧೆಯಲ್ಲಿ ಪಾಲುದಾರರಾಗಿದ್ದಾರೆ. ಇನ್ನು ಆತ ಶಸ್ತ್ರಾಸ್ತ್ರ ಸಾಗಾಟ ಮತ್ತು ನಕಲಿ ಕರೆನ್ಸಿ ದಂಧೆಯನ್ನೂ ನಡೆಸುತ್ತಿದ್ದಾನೆ.

ಅವರು ರಿಯಲ್ ಎಸ್ಟೇಟ್ ಅಭಿವೃದ್ಧಿ, ಸ್ಟಾಕ್ ಮತ್ತು ಸರಕುಗಳ ವ್ಯಾಪಾರ, ಚಿನ್ನ, ವಜ್ರ ಮತ್ತು ಆಭರಣ ವ್ಯಾಪಾರದ ಅಸಲಿ ವ್ಯವಹಾರದಲ್ಲಿ ಶತಕೋಟಿ ಡಾಲರ್ಗಳ ಬೃಹತ್ ಹೂಡಿಕೆಗಳನ್ನು ಹೊಂದಿದ್ದಾನೆ. ಅಲ್ಲದೇ ಮುಂಬೈನಲ್ಲಿ ರಿಯಲ್ ಎಸ್ಟೇಟ್ ಉದ್ಯಮದಲ್ಲಿ ಪ್ರಮುಖ ಪಾಲನ್ನು ಹೊಂದಿದ್ದಾನೆ. ಮುಂಬೈ ಪೊಲೀಸ್ ಮೂಲಗಳು ಡಿ ಗ್ಯಾಂಗ್ ಮುಂಬೈ ಮಹಾನಗರದಲ್ಲಿ ಸಕ್ರಿಯವಾಗಿಲ್ಲ. ಲೋಕಸಭೆ ಮತ್ತು ಮಹಾರಾಷ್ಟ್ರ ವಿಧಾನಸಭೆಗೆ ನಡೆದ ಇತ್ತೀಚಿನ ಚುನಾವಣೆಗಳಲ್ಲಿ, ಗ್ಯಾಂಗ್ ಕೆಲವು ಅಭ್ಯರ್ಥಿಗಳ ಪ್ರಚಾರಕ್ಕೆ ಹಣಕಾಸು ಸಹಾಯ ಮಾಡಿದೆ ಎಂದು ನಂಬಲಾಗಿದೆ.

## ಕ್ರಿಸ್ಮಸ್ ಸಂಭ್ರಮದಲ್ಲಿದ್ದ ಕ್ರಿಶ್ಚಿಯನ್ ಸಮುದಾಯದ 19 ಮನೆಗಳಿಗೆ ಬೆಂಕಿ

**ಢಾಕಾ:** ಬಾಂಗ್ಲಾದೇಶದಲ್ಲಿ ಮಧ್ಯಂತರ ಸರ್ಕಾರ ಬಂದ ಬಳಿಕ ಅಲ್ಪಸಂಖ್ಯಾತರ ಮೇಲಿನ ದಾಳಿ ಹೆಚ್ಚುತ್ತಲೇ ಇವೆ. ಹಿಂದೂ ದೇಗುಲಗಳ ಮೇಲಿನ ದಾಳಿ ಬಳಿಕ ಇದೀಗ ಚಿತ್ತಗಾಂಗ್ ಪ್ರದೇಶದಲ್ಲಿ ಕ್ರಿಸ್ಮಸ್ ಸಂಭ್ರಮಾಚರಣೆ ವೇಳೆ ಕ್ರಿಶ್ಚಿಯನ್ ಸಮುದಾಯದ 19 ಮನೆಗಳಿಗೆ ಬೆಂಕಿ ಹಚ್ಚಿದ ಘಟನೆ ನಡೆದಿದೆ.ಬಂದರ್ಬನ್ ಜಿಲ್ಲೆಯ ನೋಟುನ್ ತೊಂಗ್‌ಹಿರಿ ತ್ರಿಪುರಾ ಪರಾ ಪ್ರದೇಶದಲ್ಲಿ ಈ ಘಟನೆ ನಡೆದಿದೆ. 17 ಮನೆಗಳು ಸಂಪೂರ್ಣ ಭಸ್ಮವಾಗಿದ್ದು, ಎರಡು ಮನೆಗಳು ಭಾಗಶಃ ಸುಟ್ಟಿವೆ. ಈ ಬಗ್ಗೆ ಬಾಂಗ್ಲಾ ಸರ್ಕಾರ ಒಂದೇ ಸಮುದಾಯದ ಎರಡು ಗುಂಪುಗಳ ನಡುವಿನ ವೈಷಮ್ಯವೇ ಇದಕ್ಕೆ ಕಾರಣ ಎಂದು ಹೇಳಿಕೊಂಡಿದೆ.ಕ್ರಿಸ್ಮಸ್ ಹಿನ್ನೆಲೆಯಲ್ಲಿ ಸಾಮೂಹಿಕ ಪ್ರಾರ್ಥನೆಗೆಂದು ಚರ್ಚ್‌ಗೆ ಹೋಗಿದ್ದಾಗ ದುಷ್ಕರ್ಮಿಗಳು ಬೆಂಕಿ ಇಟ್ಟಿದ್ದಾರೆ ಎಂದು ಜನರು ಆರೋಪಿಸಿದ್ದಾರೆ. ಸಮುದಾಯದ ಮುಖಂಡರ ದೂರು ಆಧರಿಸಿ ಎಫ್‌ಐಆರ್ ದಾಖಲಿಸಲಾಗಿದೆ. ಈಗಾಗಲೇ ನಾಲ್ವರನ್ನು ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

## ಅಝರ್ ಬೈಜಾನ್ ವಿಮಾನ ದುರಂತಕ್ಕಾಗಿ ಕ್ಷಮೆಯಾಚಿಸಿದ ಪುಟಿನ್



**ಮಾಸ್ಕೋ:** ಕಝಕಿಸ್ತಾನದಲ್ಲಿ ಕ್ರಿಸ್‌ಮಸ್ ದಿನದಂದು 38 ಮಂದಿಯ ಸಾವಿಗೆ ಕಾರಣವಾದ ಅಝರ್‌ಬೈಜಾನ್ ಏರ್‌ಲೈನ್ಸ್ ವಿಮಾನದ ಪತನವು ಒಂದು 'ದುರಂತಮಯ ಘಟನೆ'ಯಾಗಿದ್ದು, ಇದಕ್ಕಾಗಿ ತಾನು ಕ್ಷಮೆಯಾಚಿಸುವುದಾಗಿ ರಶ್ಯದ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಅವರು ಹೇಳಿದ್ದಾರೆ.

ರಶ್ಯದ ವಾಯುಕ್ಷೇತ್ರದಲ್ಲಿ ಈ ಘಟನೆ ನಡೆದಿರುವುದರಿಂದ ತಾನು ಕ್ಷಮೆಯಾಚಿಸುವುದಾಗಿ ಪುಟಿನ್ ಹೇಳಿದ್ದಾರೆಂದು

ಇದರೊಂದಿಗೆ ಅಝರ್‌ಬೈಜಾನ್ನ ವಿಮಾನವನ್ನು ರಶ್ಯನ್ ಪಡೆಗಳು ಹೊಡೆದುರುಳಿಸಿರುವುದನ್ನು ಪುಟಿನ್ ಅವರು ಪರೋಕ್ಷವಾಗಿ ಒಪ್ಪಿಕೊಂಡಂತಾಗಿದೆಯೆಂದು ವಿದೇಶಿ ಮಾಧ್ಯಮಗಳು ಬಣ್ಣಿಸಿವೆ.

ರಶ್ಯದ ವಾಯುರಕ್ಷಣಾ ವ್ಯವಸ್ಥೆಯು ಅಝರ್ ಬೈಜಾನ್ ವಿಮಾನದ ಪತನಕ್ಕೆ ಕಾರಣವಾಗಿದೆಯೆಂದು ವೈಮಾನಿಕ ತಜ್ಞರು ಹೇಳಿದ್ದಾರೆ.

ಕಝಕಸ್ತಾನದ ಗ್ರೋಝ್ನಿಯಲ್ಲಿ ಉಕ್ರೇನ್ ಡ್ರೋನ್ ದಾಳಿ ನಡೆಸಿದ್ದರಿಂದ ರಶ್ಯದ ವಾಯುರಕ್ಷಣಾ ವ್ಯವಸ್ಥೆಗಳು ಪ್ರತಿದಾಳಿ ನಡೆಸಿರುವುದಾಗಿ ರಶ್ಯವು ಶನಿವಾರ ಅಧಿಕೃತ ಹೇಳಿಕೆಯೊಂದರಲ್ಲಿ ತಿಳಿಸಿದೆ. ಆದರೆ ಇದು ವಿಮಾನದ ಪತನಕ್ಕೆ ಕಾರಣವಾಗಿದೆಯೆಂದು ಹೇಳಿಕೊಂಡಿರಲಿಲ್ಲ.

## ಕಾಶ್ಮೀರದಲ್ಲಿ ಹಿಮಪಾತ: ವಿಮಾನಗಳ ಹಾರಾಟ ರದ್ದು



**ಶ್ರೀನಗರ:** ಕಣಿವೆ ನಾಡು ಕಾಶ್ಮೀರದಲ್ಲಿ ಮಳೆಯ ನಡುವೆ ವ್ಯಾಪಕ ಹಿಮಪಾತ ಆಗುತ್ತಿರುವುದರಿಂದ ಶ್ರೀನಗರದ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಬರುವ ಮತ್ತು ಇಲ್ಲಿಂದ ಹೊರಡುವ ಎಲ್ಲಾ ವಿಮಾನಗಳನ್ನು ರದ್ದುಗೊಳಿಸಲಾಗಿದೆ. ಹವಾಮಾನ ವೈಪರೀತ್ಯದ ಕಾರಣದಿಂದ ವಿಮಾನಗಳ ಹಾರಾಟವನ್ನು ತಾತ್ಕಾಲಿಕವಾಗಿ ನಿಲ್ಲಿಸಲಾಗಿದ್ದು, ಅನಾನುಕೂಲತೆಗಾಗಿ ನಾವು ವಿಷಾದಿಸುತ್ತೇವೆ ಎಂದು ವಿಮಾನ ನಿಲ್ದಾಣದ ಅಧಿಕಾರಿಗಳು ತಿಳಿಸಿದ್ದಾರೆ.

ಶುಕ್ರವಾರದಿಂದ ಭಾರೀ ಹಿಮಪಾತ ಕಂಡುಬರುತ್ತಿದ್ದು, ಕಣಿವೆನಾಡು ಸಂಪೂರ್ಣವಾಗಿ ಬಿಳಿ ಬಣ್ಣದಿಂದ ಆವರಿಸಿದೆ. ಹಿಮಪಾತದಿಂದ ಶ್ರೀನಗರ-ಜಮ್ಮು ರಾಷ್ಟ್ರೀಯ ಹೆದ್ದಾರಿಯಲ್ಲಿ ಸಂಚಾರ ಅಸ್ತವ್ಯಸ್ತಗೊಂಡಿದೆ. ಎಷ್ಟೋ ಪ್ರವಾಸಿಗರ ವಾಹನಗಳು ಹಿಮಪಾತದಲ್ಲಿ ಸಿಕ್ಕಿಹಾಕಿಕೊಂಡಿವೆ. ಅವುಗಳನ್ನು ತೆರವುಗೊಳಿಸಲಾಗುತ್ತಿದೆ. ಇನ್ನು ನಿರಂತರ ಹಿಮಪಾತ ಮತ್ತು ಅತ್ಯಂತ ಕಡಿಮೆ ಗೋಚರತೆಯಿಂದಾಗಿ, ಶೇಖ್ ಉಲ್-ಆಲಂ ವಿಮಾನ ನಿಲ್ದಾಣಕ್ಕೆ ಬರುವ ಮತ್ತು ಅಲ್ಲಿಂದ ಹೊರಡುವ ಎಲ್ಲಾ ವಿಮಾನಗಳನ್ನು ರದ್ದುಗೊಳಿಸಲಾಗಿದೆ. ಶುಕ್ರವಾರದಿಂದ ಪ್ರತಿಕೂಲ ಹವಾಮಾನವು ವಿಮಾನ ನಿಲ್ದಾಣದಲ್ಲಿ ವಾಯು ಸಂಚಾರದ ಮೇಲೆ ಪರಿಣಾಮ ಬೀರಿದೆ. ಕಡಿಮೆ ಗೋಚರತೆ ಮತ್ತು ರನ್ವೇಯಲ್ಲಿ ಹಿಮದ ಶೇಖರಣೆಗೆ ಆಗುತ್ತಿರುವುದರಿಂದ ಹಾಗೂ ಕೆಟ್ಟ ಹವಾಮಾನದಿಂದಾಗಿ ಎಲ್ಲಾ ವಿಮಾನಗಳನ್ನು ರದ್ದುಗೊಳಿಸಲಾಗಿದೆ. ರೈಲ್ವೆ ಹಳಿಯಲ್ಲಿ ಭಾರೀ ಹಿಮದ ಶೇಖರಣೆಯಾಗಿದ್ದು, ಅದರ ತೆರವು ಬಳಿಕ ರೈಲು ಸೇವೆ ಪುನರಾರಂಭಿಸಲಾಗುವುದು ಎಂದು ವಿಮಾನ ನಿಲ್ದಾಣದ ಅಧಿಕಾರಿಗಳು ತಿಳಿಸಿದ್ದಾರೆ.

## ಟ್ರಂಪ್ ಪದಗ್ರಹಣ: ಅಮೆರಿಕಕ್ಕೆ ಮರಳುವಂತೆ ವಿದೇಶಿ ವಿದ್ಯಾರ್ಥಿಗಳಿಗೆ ಸೂಚನೆ



**ವಾಶಿಂಗ್ಟನ್:** ಅಮೆರಿಕದ ನಿಯೋಜಿತ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಪದಗ್ರಹಣ ಕಾರ್ಯಕ್ರಮ ಸಮೀಪಿಸುತ್ತಿರುವಂತೆಯೇ ತಾಯ್ನಾಡಿಗೆ ತೆರಳಿರುವ ವಿದೇಶಿ ವಿದ್ಯಾರ್ಥಿಗಳು ಜಾಗರೂಕತೆ ವಹಿಸುವಂತೆ ಕೆಲವು ಶಿಕ್ಷಣ ಸಂಸ್ಥೆಗಳು ಎಚ್ಚರಿಕೆ ನೀಡಿವೆ.

ಜನವರಿ 20ರಂದು ಟ್ರಂಪ್ ಅವರ ಅಧಿಕಾರ ಸ್ವೀಕಾರ ಕಾರ್ಯಕ್ರಮ ನಡೆಯುವುದಕ್ಕೆ ಮುನ್ನ ಸ್ವದೇಶಗಳಿಗೆ ತೆರಳಿರುವ ವಿದೇಶಿ ವಿದ್ಯಾರ್ಥಿಗಳು ಕ್ಯಾಂಪಸ್‌ಗೆ ಮರಳುವಂತೆ ಕೆಲವು ಶಿಕ್ಷಣಸಂಸ್ಥೆಗಳು ಸಲಹೆ ನೀಡಿವೆ.

ಟ್ರಂಪ್ ಅವರ ಹಿಂದಿನ ಅಧಿಕಾರಾವಧಿಯಲ್ಲಿ ಕೆಲವು ರಾಷ್ಟ್ರಗಳ ನಾಗರಿಕರಿಗೆ ಅಮೆರಿಕ ಪ್ರವೇಶವನ್ನು ನಿರಾಕರಿಸಿರುವುದನ್ನು ಈ ಬಾರಿಯೂ ಪುನರಾವರ್ತಿಸುವ ಸಾಧ್ಯತೆಯಿದೆಯೆಂಬ ಆತಂಕಗಳ ನಡುವೆ ವಿವಿಗಳು ಈ ಮುನ್ನೆಚ್ಚರಿಕೆಯನ್ನು ನೀಡಿವೆ.

2023-24ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿ 11 ಲಕ್ಷ ವಿದೇಶಿ ವಿದ್ಯಾರ್ಥಿಗಳು ಅಮೆರಿಕದಲ್ಲಿ ಅಧ್ಯಯನ ನಡೆಸುತ್ತಿದ್ದಾರೆ. 17 ಸಾವಿರಕ್ಕೂ ಅಧಿಕ ಅಂತಾರಾಷ್ಟ್ರೀಯ ವಿದ್ಯಾರ್ಥಿಗಳನ್ನು ಹೊಂದಿರುವ ದಕ್ಷಿಣ ಕ್ಯಾಲಿಫೋರ್ನಿಯಾ ವಿಶ್ವವಿದ್ಯಾನಿಲಯ ಕೂಡಾ ಟ್ರಂಪ್ ಅವರ ಪದಗ್ರಹಣ ಕಾರ್ಯಕ್ರಮಕ್ಕೆ ಮುನ್ನ ಅಮೆರಿಕಕ್ಕೆ ಮರಳುವಂತೆ ತನ್ನ ವಿದ್ಯಾರ್ಥಿಗಳಿಗೆ ಸಲಹೆಯನ್ನು ನೀಡಿದೆ.

ಚೀನಾ ಹಾಗೂ ಭಾರತ ಪ್ರಸಕ್ತ ಟ್ರಂಪ್ ಅವರು ಗುರಿಯಿರಿಸಿರುವ ದೇಶಗಳ ಪಟ್ಟಿಯಲ್ಲಿ ಇಲ್ಲವಾದರೂ, ವಿಶ್ವವಿದ್ಯಾನಿಲಯಗಳು ಕಟ್ಟೆಚ್ಚರವನ್ನು ವಹಿಸಿವೆ. ಚೀನಾ ಹಾಗೂ ಭಾರತ ಸೇರಿದಂತೆ ಕೆಲವು ದೇಶಗಳ ವಿದ್ಯಾರ್ಥಿಗಳ ಆಗಮನಕ್ಕೆ ಟ್ರಂಪ್ ಆಡಳಿತವು ಹೊಸ ನಿರ್ಬಂಧಗಳನ್ನು ಹೇರುವ ಸಾಧ್ಯತೆಯಿದೆಯೆನ್ನಲಾಗಿದೆ. 2023-24ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿ 33 ಲಕ್ಷಕ್ಕೂ ಅಧಿಕ ಭಾರತೀಯ ವಿದ್ಯಾರ್ಥಿಗಳು ಕಲಿಯುತ್ತಿದ್ದು, ಚೀನಾವನ್ನು ಹಿಂದಿಕ್ಕಿದೆ.

## ಗಾಝಾ ಆಸ್ಪತ್ರೆಗೆ ಬೆಂಕಿ ಹಚ್ಚಿದ ಇಸ್ರೇಲ್ ಸೇನೆ: ಯುಎಇ ಖಂಡನೆ



**ಅಬುಧಾಬಿ:** ಉತ್ತರ ಗಾಝಾ ಪಟ್ಟಿಯಲ್ಲಿರುವ ಕಮಲ್ ಅಡ್ವಾನ್ ಆಸ್ಪತ್ರೆಯನ್ನು ಇಸ್ರೇಲಿ ಪಡೆಗಳು ಸುಟ್ಟುಹಾಕಿರುವುದನ್ನು ಯುನೈಟೆಡ್ ಅರಬ್ ಎಮಿರೇಟ್ಸ್ (ಯುಎಇ) ಬಲವಾಗಿ ಖಂಡಿಸಿದೆ

ತನ್ನ ವಿದೇಶಾಂಗ ವ್ಯವಹಾರಗಳ ಸಚಿವಾಲಯ ಶುಕ್ರವಾರ ಬಿಡುಗಡೆ ಮಾಡಿದ ಹೇಳಿಕೆಯಲ್ಲಿ, ಯುಎಇ ಈ ಕಾಯ್ದೆಯನ್ನು ತಿರಸ್ಕರಿಸಿದೆ, ಇದು ಅಂತರರಾಷ್ಟ್ರೀಯ ಮಾನವೀಯ ಕಾನೂನಿನ ''ಘೋರ ಉಲ್ಲಂಘನೆ'' ಮತ್ತು ಗಾಜಾದ ಈಗಾಗಲೇ ದುರ್ಬಲವಾಗಿರುವ ಆರೋಗ್ಯ ವ್ಯವಸ್ಥೆಯ ಮೇಲೆ ''ವ್ಯವಸ್ಥಿತ ದಾಳಿ'' ಯ ಭಾಗವಾಗಿದೆ ಎಂದು ಬಣ್ಣಿಸಿದೆ.

ನಾಗರಿಕರು ಮತ್ತು ನಾಗರಿಕ ಸಂಸ್ಥೆಗಳನ್ನು ರಕ್ಷಿಸುವ ಮಹತ್ವವನ್ನು ಒತ್ತಿಹೇಳಿದ ಸಚಿವಾಲಯವು ಹಿಂಸಾಚಾರವನ್ನು ತಕ್ಷಣ ನಿಲ್ಲಿಸುವಂತೆ ಕರೆ ನೀಡಿತು.

''ಪ್ರಸ್ತುತ ಪರಿಸ್ಥಿತಿಯು ದುರಂತ ಮಾನವೀಯ ತುರ್ತುಸ್ಥಿತಿಯನ್ನು ಪ್ರತಿನಿಧಿಸುತ್ತದೆ, ಅದು ತುರ್ತು ಗಮನವನ್ನು ಬಯಸುತ್ತದೆ'' ಎಂದು ಹೇಳಿಕೆಯಲ್ಲಿ ತಿಳಿಸಲಾಗಿದೆ.

ಆಕ್ರಮಿತ ಫೆಲೆಸ್ತೀನ್ ಭೂಪ್ರದೇಶದಲ್ಲಿ ಮತ್ತಷ್ಟು ಹದಗೆಡುವುದನ್ನು ತಡೆಗಟ್ಟುವ ಪ್ರಯತ್ನಗಳನ್ನು ತೀವ್ರಗೊಳಿಸುವಂತೆ ಮತ್ತು ಸಮಗ್ರ ಮತ್ತು ನ್ಯಾಯಯುತ ಶಾಂತಿಯನ್ನು ಸಾಧಿಸುವ ಗುರಿಯನ್ನು ಹೊಂದಿರುವ ಎಲ್ಲಾ ಉಪಕ್ರಮಗಳನ್ನು ಬೆಂಬಲಿಸುವಂತೆ ಯುಎಇ ಅಂತರರಾಷ್ಟ್ರೀಯ ಸಮುದಾಯವನ್ನು ಒತ್ತಾಯಿಸಿದೆ.

ಕಮಲ್ ಅಡ್ವಾನ್ ಆಸ್ಪತ್ರೆಯ ಕಾರ್ಯಾಚರಣೆ ಮತ್ತು ಶಸ್ತ್ರಚಿಕಿತ್ಸೆ ವಿಭಾಗಗಳು, ಪ್ರಯೋಗಾಲಯ, ನಿರ್ವಹಣಾ ಘಟಕಗಳು, ಆಂಬ್ಯುಲೆನ್ಸ್ ಘಟಕಗಳು ಮತ್ತು ಗೋದಾಮುಗಳು ಸಂಪೂರ್ಣವಾಗಿ ಸುಟ್ಟುಹೋಗಿವೆ ಎಂದು ಗಾಝಾ ಮೂಲದ ಆರೋಗ್ಯ ಅಧಿಕಾರಿಗಳು ಶುಕ್ರವಾರ ವರದಿ ಮಾಡಿದ್ದಾರೆ.

Postal Registration No.KA/BGW-1823/2019-2021, Posted at Patrika Channel, RMS Bhavan, Bengaluru PSO, Mysore Road, Bengaluru- 560020, RNI No.KARKAN/2002/08054

# ಸಸ್ಯಹಾರಿ ಚೈತ್ರಾ, ಕುಂದಾಪುರಗೆ ಮಾಂಸಾಹಾರ ತಿನ್ನಿಸಿದರೆ ಸಹ ಸ್ಪರ್ಧಿಗಳು?



ಬಿಗ್ ಬಾಸ್ ಮನೆಯಲ್ಲಿ ಊಟದ ಸಮಸ್ಯೆ ಇದ್ದಿದ್ದೆ. ಬಿಗ್ ಬಾಸ್ ಸ್ಪರ್ಧಿಗಳು ಅವರೇ ಅಡುಗೆ ಮಾಡಿಕೊಂಡು ತಿನ್ನಬೇಕಿರುತ್ತದೆ. ಕೆಲವರಿಗೆ ಅಡುಗೆ ಮಾಡಲು ಬರುತ್ತದೆ, ಕೆಲವರಿಗೆ ಬರುವುದಿಲ್ಲ ಹಾಗಾಗಿ ಸ್ಪರ್ಧಿಗಳಿಗೆ ಯಾವಾಗಲೂ ಒಳ್ಳೆಯ ಊಟ ಸಿಗುತ್ತದೆ ಎಂಬುದು ಗ್ಯಾರೆಂಟಿ ಇಲ್ಲ. ಅದರಲ್ಲಿ ಸಸ್ಯಹಾರಿಗಳಿಗಂತೂ ಬಹಳ ಸಮಸ್ಯೆ. ಲಕ್ಷುರಿ ಬಜೆಟ್ ನಲ್ಲಿ ಸ್ಪರ್ಧಿಗಳು ಮೊದಲು ನಾನ್ ವೆಜ್ ಆರ್ಡರ್ ಮಾಡಿಬಿಡುತ್ತಾರೆ, ಪನ್ನೀರು ಕೊನೆಯ ಆಯ್ಕೆ ಆಗಿರುತ್ತದೆ. ಮಾಂಸಹಾರಿಗಳು, ಸಸ್ಯಹಾರಿಗಳು ಇಬ್ಬರೂ ಇದ್ದು, ಒಂದೇ ಒಲೆಯಲ್ಲಿ ಎರಡೂ ಅಡುಗೆ ಆಗುತ್ತಿರುವಾಗ ಮಿಕ್ಸ್ ಆಗಿಬಿಡುತ್ತದೆಯೇ ಎಂಬ ಭಯ ಸಹಜವಾಗಿಯೇ ಸಸ್ಯಹಾರಿಗಳಿಗೆ ಇದ್ದೇ ಇರುತ್ತದೆ.

ಕಳೆದ ವಾರ ಬಿಗ್ ಬಾಸ್ ಮನೆಯಲ್ಲಿ ರೆಸಾರ್ಟ್ ಟಾಸ್ಕ್ ಮಾಡಲಾಗಿದೆ. ಮನೆಯ ಸ್ಪರ್ಧಿಗಳನ್ನು ಎರಡು ಗುಂಪುಗಳನ್ನಾಗಿ ಮಾಡಿ ಅತಿಥಿಗಳಾಗಿ ಮತ್ತು ಸಿಬ್ಬಂದಿಗಳಾಗಿ ಮಾಡಲಾಗಿತ್ತು. ಸಿಬ್ಬಂದಿ ಆಗಿದ್ದವರು ಅತಿಥಿಗಳಿಗೆ ಕೇಳಿದ ಅಡುಗೆ ಮಾಡಿ ಕೊಡಬೇಕಿತ್ತು. ಶನಿವಾರ ಎಪಿಸೋಡ್ ಗೆ ಬಂದಿದ್ದ ಸುದೀಪ್, ಭವ್ಯಾ ತಂಡದವರು ಸಿಬ್ಬಂದಿ ಆಗಿದ್ದಾಗ ಅತಿಥಿಗಳಿಗೆ ಮಾಡಿಕೊಟ್ಟ ಊಟವನ್ನು ಮೊದಲು ಅವರು ತಿಂದು ಆ ನಂತರವೇ ಅತಿಥಿಗಳಿಗೆ ಕೊಟ್ಟರು, ಭಾರಿ ಆತುರದಲ್ಲಿ ತಿಂಡಿಗಳನ್ನು ತಿಂದರು, ಆ ವೇಳೆ ಧನರಾಜ್, ಮಿಸ್ ಆಗಿ ಮಾಂಸಾಹಾರ ತಿಂದು ಬಿಟ್ಟರು ಎಂದರು.

ಅದನ್ನು ಧನರಾಜ್ ಸಹ ಒಪ್ಪಿಕೊಂಡರು. ಚಿಕನ್ ಪಾಪ್ ಕಾರ್ನ್ ಅನ್ನು ತಪ್ಪಿ ಬಾಯಿಗೆ ಹಾಕಿಕೊಂಡೆ ನಂತರ ಹಾಗೆಯೇ ಅದನ್ನು ಉಗಿದು ಬಿಟ್ಟೆ ಎಂದರು. ಆಗ ಚೈತ್ರಾ, ಪರವಾಗಿಲ್ಲ ಸರ್, ಗೊತ್ತಿಲ್ಲದೆ ಮಾಡಿದ ತಪ್ಪಿಗೆ ಕ್ಷಮೆ ಇರುತ್ತದೆ ಎಂದರು. ಆಗ ಸುದೀಪ್ ಹಾಗಿದ್ದರೆ ನಿಮಗೂ ಕ್ಷಮೆ ಇರುತ್ತದೆ ಬಿಡಿ ಎಂದರು. ಚೈತ್ರಾ ಶಾಕ್ ಆದರು. ಇಲ್ಲ ಸಾರ್ ನಾನು ನಾನ್ ವೆಜ್ ತಿಂದಿಲ್ಲ, ಕ್ಯಾಪ್ಸಿಕಮ್ ಮೋಮೋಸ್ ತಿಂದೆ ಅಷ್ಟೆ ಎಂದರು. ನಿಮ್ಮ ಗೆಳೆಯರು ನಿಮಗೆ ನಾನ್ ವೆಜ್ ತಿನ್ನಿಸಿಲ್ಲ ಎಂಬ ಭರವಸೆ ನಿಮಗೆ ಇದೆಯೇ ಎಂದು ಸುದೀಪ್ ಕೇಳಿದರು. ಸುದೀಪ್ ರ ಪ್ರಶ್ನೆಗೆ ಆಘಾತಕ್ಕೆ ಒಳಗಾದರು ಚೈತ್ರಾ.

'ನನಗೆ ನಾನ್ ವೆಜ್ ತಿನ್ನಿಸಿದ್ದೀರಾ ನಿಮಗೆ ಒಳ್ಳೆಯದಾಗುತ್ತಾ ' ಎಂದು ಭವ್ಯಾ ತಂಡದ ವಿರುದ್ಧ ಚೈತ್ರಾ ಗುಡುಗಿದರು. ಆದರೂ ಸುದೀಪ್ ಬಳಿ ಇಲ್ಲ ಸಾರ್ ನಾನು ನಾನ್ ವೆಜ್ ತಿಂದಿಲ್ಲ ಎಂದೇ ವಾದಿಸಿದರು. ಆಗ ಸುದೀಪ್ ನಗುತ್ತಾ, ದೋಸೆ ತಿಂದಿರಿ, ಅದರ ಜೊತೆ ಏನು ತಿಂದಿರಿ ಎಂದರು. ಆಗ ಚೈತ್ರಾ ದೋಸೆ ಜೊತೆ ಪಲ್ಯ ತಿಂದೆ ಎಂದರು. ಅದು ಆಲೂಗಡ್ಡೆ ಪಲ್ಯೆ ಅದರಲ್ಲಿ ಏನೂ ಬೆರೆತಿರಲಿಲ್ಲ ಎಂದರು. ಆಗ ಸುದೀಪ್, ಆಲೂಗಡ್ಡೆ ಪಲ್ಯೆ ಮಾಡಲು ಆಲೂಗಡ್ಡೆಯನ್ನು ಬೇಯಿಸಿದರಲ್ಲ, ಆಲೂಗಡ್ಡೆ ಬೇಯಿಸಲು ಬಳಸಿದ್ದು, ಚಿಕನ್ ಬೇಯಿಸಿದ ನೀರನ್ನು ಎಂದರು. ಅದೇ ಕಾರಣಕ್ಕೆ ನಿಮಗೆ ಆಲೂಗಡ್ಡೆ ಪಲ್ಯೆ ಉಪ್ಪು ಹೆಚ್ಚಾಗಿದೆ ಅನಿಸಿದ್ದು' ಎಂದರು ಸುದೀಪ್. ಆದರೆ ಈ ವಿಷಯವನ್ನು ಸುದೀಪ್ ತಮಾಷೆಯಾಗಿ ಹೇಳಿದರು. ನಿಜವಾಗಿಯೂ ಚಿಕನ್ ಬೇಯಿಸಿದ ನೀರಲ್ಲೇ ಆಲೂಗಡ್ಡೆ ಬೇಯಿಸಿದರಾ ಎಂಬುದರ ಬಗ್ಗೆ ಸ್ಪಷ್ಟನೆ ಸಿಗಲಿಲ್ಲ. ಎಲ್ಲರೂ ನಕ್ಕು ಆ ವಿಷಯವನ್ನು ಅಲ್ಲಿಗೆ ಕೈಬಿಟ್ಟರು.

# ಶಿವಣ್ಣನ ಮನೆ ನಾಯಿ ನೀಮೋ ನಿಧನ




**ಕರುಳು ಹಿಂಡುವ ಪತ್ರ ಬರೆದ ಗೀತಾ ಶಿವರಾಜ್ ಕುಮಾರ್**

ಸ್ಯಾಂಡಲ್‌ವುಡ್ ನಟ ಶಿವರಾಜ್ ಕುಮಾರ್ ಅವರು ಶಸ್ತ್ರಚಿಕಿತ್ಸೆ ಮಾಡಿಸಿಕೊಂಡು ಅಮೆರಿಕದಲ್ಲಿ ವಿಶ್ರಾಂತಿಯಲ್ಲಿದ್ದಾರೆ. ಈ ಹೊತ್ತಿನಲ್ಲೇ ಅವರ ಮನೆ ನಾಯಿ ನೀಮೋ ನಿಧನ ಹೊಂದಿದೆ.

ಶಿವಣ್ಣ ಅವರ ದೊಡ್ಡ ಮಗಳು ನಿರುಪಮಾ ಪತಿ ಮದುವೆಗೆ ಮೊದಲು ಆ ನಾಯಿಯನ್ನು ಗಿಫ್ಟ್ ಆಗಿ ಕೊಟ್ಟಿದ್ದರು. ನಿರುಪಮಾ ಅವರು ಡಾಕ್ಟರ್ ಆಗಿರುವ ಕಾರಣಕ್ಕೆ ಅದನ್ನು ಸಮಯಕ್ಕೆ ಸರಿಯಾಗಿ ನೋಡಿಕೊಳ್ಳಲು ಆಗೋದಿಲ್ಲ ಎಂಬ ಕಾರಣಕ್ಕೆ ಅದು ಶಿವಣ್ಣ ಅವರ ಮನೆಯಲ್ಲೇ ಇತ್ತು. ಆದ್ರೆ ಇಂದು ನಾಯಿ ನೀಮೋ ಚಿರನಿದ್ರೆಗೆ ಜಾರಿದೆ. ಈ ಬಗ್ಗೆ ಅಮೆರಿಕದಲ್ಲಿರುವ ಗೀತಾ ಶಿವರಾಜ್‌ಕುಮಾರ್ ಅವರು ತಮ್ಮ ಇನ್‌ಸ್ಟಾಗ್ರಾಮ್‌ನಲ್ಲಿ ಸುದೀರ್ಘ ಪತ್ರವೊಂದನ್ನು ಬರೆದು ಪೋಸ್ಟ್ ಮಾಡಿದ್ದಾರೆ.

ನಟ ಶಿವಣ್ಣ ಅವರು ಕಳೆದ ವಾರ ಅಮೆರಿಕಾಗೆ ಚಿಕಿತ್ಸೆಗೆ ಹೊರಡುವ ವೇಳೆ ನಾಯಿ ನೀಮೋ ಅವರ ಜೊತೆಯಲ್ಲೇ ಇದ್ದು ಬೀಳ್ಕೊಟ್ಟಿದೆ. ಆದರೆ, ಅಲ್ಲಿ ಶಿವಣ್ಣ ಅವರು ಸರ್ಜರಿ ಮುಗಿಸಿಕೊಂಡು ವಿಶ್ರಾಂತಿಯಲ್ಲಿ ಇರುವಾಗ ನೀಮೋ ಮೃತಪಟ್ಟಿದೆ. ಆ ನಾಯಿ ಬಗ್ಗೆ ಶಿವರಾಜ್ ಕುಮಾರ್, ಗೀತಾ ಶಿವರಾಜ್ ಕುಮಾರ್ ಸೇರಿದಂತೆ ಎಲ್ಲರಿಗೂ ಬಹಳಷ್ಟು ಅಟ್ಯಾಚ್‌ಮೆಂಟ್ ಇತ್ತು ಎಂಬುದು ಗೀತಾ ಅವರ ಪತ್ರದಿಂದ ತಿಳಿದುಬರುತ್ತಿದೆ. ಆ ಪತ್ರದಲ್ಲಿ ಆ ನಾಯಿ ನೀಮೋ ಮನೆಯಲ್ಲಿ ಹೇಗಿರುತ್ತಿತ್ತು, ಗೀತಾ ಅವರನ್ನು ಅದೆಷ್ಟು ಇಷ್ಟಪಡುತ್ತಿತ್ತು ಎಂಬ ಗೀತಾ ಅವರು ಬರೆದುಕೊಂಡಿದ್ದಾರೆ.

# 4 ದಿನಕ್ಕೆ 'ಮ್ಯಾಕ್ಸ್' ಸಿನಿಮಾ ₹8.50 ಕೋಟಿ ಗಳಿಕೆ

ಸುದೀಪ್ ನಟನೆಯ 'ಮ್ಯಾಕ್ಸ್' ಸಿನಿಮಾ ಉತ್ತಮ ಪ್ರದರ್ಶನ ಕಾಣುತ್ತಿದೆ. ಕ್ರಿಸ್ ಮಸ್ ಹಬ್ಬಕ್ಕೆ ಬಿಡುಗಡೆ ಆದ ಸಿನಿಮಾ, ಮೊದಲ ದಿನವೇ ಭರ್ಜರಿ ಪ್ರತಿಕ್ರಿಯೆ ಪಡೆದುಕೊಂಡಿತ್ತು. ಮೊದಲ ದಿನ ದಾಖಲೆಯ 8.50 ಕೋಟಿಗೂ ಹೆಚ್ಚು ಕಲೆಕ್ಷನ್ ಮಾಡಿದ್ದ 'ಮ್ಯಾಕ್ಸ್' ಸಿನಿಮಾ ತನ್ನ ಬಾಕ್ಸ್ ಆಫೀಸ್ ಓಟವನ್ನು ಭರ್ಜರಿಯಾಗಿ ಮುಂದುವರೆಸಿದೆ. ಮೊದಲ ದಿನದ ಬಳಿಕ ತುಸು ಕಡಿಮೆಯಾಗಿದ್ದ ಬಾಕ್ಸ್ ಆಫೀಸ್ ಕಲೆಕ್ಷನ್ ವೀಕೆಂಡ್ ನಲ್ಲಿ ಮತ್ತೆ ಹೆಚ್ಚಾಗಿದೆ. ಸಿನಿಮಾ ಬಿಡುಗಡೆ ಆದ ನಾಲ್ಕು ದಿನದಲ್ಲಿ 'ಮ್ಯಾಕ್ಸ್' ಗಳಿಸಿದ್ದೆಷ್ಟು ಇಲ್ಲಿದೆ ಮಾಹಿತಿ.



ಮೊದಲ ದಿನ 8.50 ಕೋಟಿ ಹಣ ಬಾಚಿದ್ದ 'ಮ್ಯಾಕ್ಸ್', ಎರಡನೇ ದಿನ ವಾರದ ದಿನವಾದ್ದರಿಂದ 3.85 ಕೋಟಿ ಮಾತ್ರವೇ ಗಳಿಸಿತ್ತು. ಆದರೆ ಸಿನಿಮಾದ ಬಗ್ಗೆ ಬಾಯಿ ಪ್ರಚಾರ ಹೆಚ್ಚಾಗಿ ವಾರದ ದಿನವೇ ಆಗಿದ್ದ ಶುಕ್ರವಾರದಂದು 4.70 ಕೋಟಿಗೂ ಹೆಚ್ಚು ಹಣ ಗಳಿಸಿತು. ಇದೀಗ ಮೊದಲ ವಾರಾಂತ್ಯದ ದಿನವಾದ ಶನಿವಾರ ಸಿನಿಮಾದ ಕಲೆಕ್ಷನ್ ಇನ್ನಷ್ಟು ಹೆಚ್ಚಿದ್ದು ಸಿನಿಮಾ ಐದು ಕೋಟಿಗೂ ಹೆಚ್ಚು ಹಣ ಗಳಿಸಿದೆ. ಅಲ್ಲಿಗೆ ಈ ನಾಲ್ಕು ದಿನದಲ್ಲಿ ಮ್ಯಾಕ್ಸ್ ಸಿನಿಮಾ ಬರೋಬ್ಬರಿ 22.25 ಕೋಟಿಗೂ ಹೆಚ್ಚು ಹಣ ಬಾಕ್ಸ್ ಆಫೀಸ್ ನಲ್ಲಿ ದೋಚಿಕೊಂಡಿದೆ. ಮೊದಲ ಭಾನುವಾರ ಸಿನಿಮಾದ ಕಲೆಕ್ಷನ್ ಇನ್ನಷ್ಟು ಹೆಚ್ಚಲಿದ್ದು, ಭಾನುವಾರ ಒಂದೇ ದಿನ 'ಮ್ಯಾಕ್ಸ್' ಸಿನಿಮಾ ಆರರಿಂದ ಏಳು ಕೋಟಿ ಹಣ ಗಳಿಸುವ ನಿರೀಕ್ಷೆ ಇದೆ. ಸಿನಿಮಾ ಪರಭಾಷೆಗಳಲ್ಲಿಯೂ ಉತ್ತಮ ಗಳಿಕೆ ಮಾಡುತ್ತಿದೆ. 'ಮ್ಯಾಕ್ಸ್' ಸಿನಿಮಾದ ತಮಿಳು ಹಾಗೂ ತೆಲುಗು ಆವೃತ್ತಿಗಳು ಒಟ್ಟಾಗಿ 1.50 ಕೋಟಿಗೂ ಹೆಚ್ಚು ಹಣ ಗಳಿಸಿದ್ದು, ಅಲ್ಲಿಯೂ ಸಹ ಸಿನಿಮಾದ ಗಳಿಕೆ ಹೆಚ್ಚಾಗುತ್ತಿದೆ. ಸಿನಿಮಾ ಕನ್ನಡದ ಹೊರತಾಗಿ ತೆಲುಗು ಹಾಗೂ ತಮಿಳು ಭಾಷೆಗಳಲ್ಲಿ ಮಾತ್ರವೇ ಬಿಡುಗಡೆ ಆಗಿದೆ.



# ಇನ್ಮುಂದೆ ಡೈರೆಕ್ಷನ್‌ಗೆ ಜಾಸ್ತಿ ಗ್ಯಾಪ್ ಕೊಡಲ್ಲ

ಕರ್ನಾಟಕವಷ್ಟೇ ಅಲ್ಲದೇ ದೇಶ-ವಿದೇಶದಲ್ಲೂ ಯುಐ ಸಿನಿಮಾ ಭರ್ಜರಿ ಸಕ್ಸಸ್ ಹಿನ್ನೆಲೆ ಬೆಂಗಳೂರಿನಲ್ಲಿ ಖಾಸಗಿ ಹೋಟೇಲ್‌ನಲ್ಲಿ ಸಕ್ಸಸ್ ಮೀಟ್ ಏರ್ಪಡಿಸಲಾಗಿತ್ತು. ಸಕ್ಸಸ್ ಮೀಟ್‌ನಲ್ಲಿ ರಿಯಲ್ ಸ್ಟಾರ್ ಉಪೇಂದ್ರ, ನಟಿ ರೀಷ್ಮಾ ನಾಣಯ್ಯ, ಲಹರಿ ವೇಲು, ಕೆಪಿ ಶ್ರೀಕಾಂತ್, ಜಿ ಮನೋಹರನ್ ಮುಂತಾದವ್ರು ಭಾಗಿಯಾಗಿದ್ದರು. ಈ ವೇಳೆ ಸಿನಿಮಾ ತಂಡದಿಂದ ಕೇಕ್ ಕತ್ತರಿಸಿ ಸಂಭ್ರಮ ಆಚರಿಸಲಾಯಿತು.

ನಟ, ನಿರ್ದೇಶಕ ಉಪೇಂದ್ರ, ಮಾತನಾಡಿ, ನಾನು ಅನ್ಕೊಂಡಕ್ಕಿನ್ನ ಜಾಸ್ತಿ ಡಿಕೋಡಿಂಗ್ ಮಾಡಿದ್ದಾರೆ. ಎಲ್ಲರೂ ತುಂಬಾ ಚನ್ನಾಗಿ ರಿವೀವ್ ಮಾಡಿದ್ದಾರೆ. ಕ್ರೆಡಿಟ್ ಎಲ್ಲ ಮಾಧ್ಯಮದವರಿಗೆ ಕೊಡ್ಬೇಕು. ಡೈರೆಕ್ಷನ್‌ಗೆ ಜಾಸ್ತಿ ಗ್ಯಾಪ್ ಕೊಡೊಲ್ಲ ಇನ್ಮೇಲೆ ಎಂದರು. ಮುಂದುವರಿದು, ಬ್ಲ್ಯಾಕ್ ವೈಟ್ ಡ್ರೆಸ್ ಪ್ರಶ್ನೆಗೆ ಉತ್ತರಿಸಿ, ವೈಟ್‌ನಲ್ಲಿ ಬಂದ್ರೆ ಹೊಡೆದು ಸಾಯಿಸ್ತಿರಲ್ಲ. ಸನ್ನಿಲಿಯೋನ್ ಸಿನಿಮಾದಲ್ಲಿ ಇದಾರೆ ಅಂತಾ ರೂಮರ್ಸ್ ಹಬ್ಬಿಸಿದ್ದಾರೆ ಎಂದು ಸ್ಪಷ್ಟಪಡಿಸಿದರು.

ಲಹರಿ ವೇಲು ಮಾತನಾಡಿ, ಉಪ್ಪಿ ಅವರಿಗೆ ಐದು ಮಿದುಳಿವೆ. ಒಂದು ಆಂಗಲ್‌ನಲ್ಲಿ ನಾವು ಯೋಚಿಸ್ತಿದ್ರೆ, ಉಪೇಂದ್ರ, ಐದು ಪಟ್ಟು ಮುಂದಿರ್ತಾರೆ. ಉಪ್ಪಿ ಕಂಟೆಂಟ್ ಕಿಂಗ್ ಎಂದು ಹೊಗಳಿದರು.

ಎರಡನೇ ವಾರ 1500 ಸ್ಕ್ರೀನ್‌ಗಳಲ್ಲಿ 'ಯುಐ' ಸಿನಿಮಾ ಅಬ್ಬರಿಸುತ್ತಿದೆ. ಕರ್ನಾಕವಷ್ಟೇ ಅಲ್ಲದೇ ದೇಶ-ವಿದೇಶದಲ್ಲೂ ಎರಡನೇ ವಾರವೂ ಆರ್ಭಟ ಶುರುಮಾಡಿದೆ. ಬಾಕ್ಸಾಫೀಸ್ ನಲ್ಲಿ ಹೊಸ ದಾಖಲೆ ನಿರ್ಮಿಸುತ್ತಾ ಮುನ್ನುಗ್ಗಿದೆ. ಉಪೇಂದ್ರ, ಅವರು ನಟಿಸಿ, ನಿರ್ದೇಶನ ಮಾಡಿರುವ ಸಿನಿಮಾವಿದು. 10 ವರ್ಷಗಳ ಬಳಿಕ ಡೈರೆಕ್ಟರ್ ಕ್ಯಾಪ್ ತೊಟ್ಟ ಯುಐಗೆ ನಿರೀಕ್ಷೆ ಮೀರಿ ರೆಸ್ಪಾನ್ಸ್ ಸಿಕ್ಕಿದೆ.



# ಫಲಿಸಿತು ಅಪ್ಪನ ತ್ಯಾಗ

## ಮಗನಿಗಾಗಿ ಸರ್ಕಾರಿ ಉದ್ಯೋಗ ತೊರೆದಿದ್ದ ನಿತೀಶ್ ರೆಡ್ಡಿ ತಂದೆ!



ಬಲಿಷ್ಠ ಆಸೀಸ್ ವಿರುದ್ಧ ಚೊಚ್ಚಲ ಟೆಸ್ಟ್ ಶತಕ ಸಿಡಿಸಿರುವ ನಿತೀಶ್ ಕುಮಾರ್ ರೆಡ್ಡಿ ಸದ್ಯ ಟ್ರೆಂಡಿಂಗ್‌ನಲ್ಲಿದ್ದಾರೆ. ಆಸೀಸ್ ವೇಗದ ಮತ್ತು ಸ್ಪಿನ್ ಎಸೆತಗಳನ್ನು ಸಮರ್ಥವಾಗಿ ನಿಭಾಯಿಸಿದ 21ರ ಹರೆಯದ ರೆಡ್ಡಿ 3ನೇ ದಿನದ ಅಂತ್ಯಕ್ಕೆ 105 ರನ್ ಸಿಡಿಸಿ ಟೀಂ ಇಂಡಿಯಾವನ್ನು ಫಾಲೋ ಆನ್‌ನಿಂದ ಕಾಪಾಡಿದ್ದಾರೆ. ನಿತೀಶ್ ಆಟಕ್ಕೆ ಭಾರೀ ಪ್ರಶಂಸೆಗೆ ವ್ಯಕ್ತವಾಗುತ್ತಿದೆ. ಆದ್ರೆ ನಿತೀಶ್ ರೆಡ್ಡಿಯ ಈ ಸಾಧನೆಯ ಹಿಂದೆ ಅವರ ತಂದೆಯ ಕಣ್ಣೀರಿನ ಕಥೆಯೊಂದನ್ನ ಮರೆಯುವಂತಿಲ್ಲ.

ಹೌದು. ಇನ್ನೂ 25 ವರ್ಷ ಅವಧಿಯಿದ್ದರೂ ಮಗನ ಕ್ರಿಕೆಟ್ ವೃತ್ತಿ ಜೀವನಕ್ಕಾಗಿ ನಿತೀಶ್ ರೆಡ್ಡಿ ತಂದೆ ಮುತ್ಯಾಲ್ಯ ರೆಡ್ಡಿ ಸರ್ಕಾರಿ ಉದ್ಯೋಗ ತೊರೆದರು. ಇಂದು ಮಗನ ಚೊಚ್ಚಲ ಶತಕ ಕಂಡು ಪೆವಲಿಯನ್ ನಲ್ಲಿದ್ದ ನಿತೀಶ್ ಕುಮಾರ್ ತಂದೆ ಖುಷಿಯಿಂದ ಕಣ್ಣೀರಿಟ್ಟರು. ದೇವರಿಗೆ ಅಲ್ಲಿಂದಲೇ ಕೈಮುಗಿದರು, ಕುಟುಂಬದ ಇತರ ಸದಸ್ಯರನ್ನು ತಬ್ಬಿಕೊಂಡರು. ಈ ಕುರಿತ ವಿಡಿಯೋಗಳು ಜಾಲತಾಣದಲ್ಲಿ ಹರಿದಾಡುತ್ತಿವೆ.

ಸನ್ ರೈಸರ್ಸ್ ಹೈದರಾಬಾದ್‌ನಲ್ಲಿ ನೀಡಿದ ಪ್ರದರ್ಶನಕ್ಕಾಗಿ ನಿತೀಶ್ ರೆಡ್ಡಿ ಅವರನ್ನು ಟೀಂ ಇಂಡಿಯಾಗೆ ಆಯ್ಕೆ ಮಾಡಿದ ಬಳಿಕ ಸಂದರ್ಶನವೊಂದರಲ್ಲಿ ಮಾತನಾಡುತ್ತಾ ತಮ್ಮ ತಂದೆಯ ಕೊಡುಗೆ ಬಗ್ಗೆ ಹೇಳಿದ್ದರು. ನಾನು ಇನ್ನೂ ಕೆಲವೇ ದಿನಗಳಲ್ಲಿ ಕ್ರಿಕೆಟ್ ಅಕಾಡೆಮಿಗೆ ಹೋಗಬೇಕಿತ್ತು. ಅದೇ ದಿನ ನನ್ನ ತಂದೆಗೆ ರಾಜಸ್ಥಾನಕ್ಕೆ ವರ್ಗಾವಣೆ ಆಗಿರುವುದಾಗಿ ಕರೆ ಬಂತು. ಆಗ ನನಗೆ 8 ವರ್ಷ ವಯಸ್ಸಾಗಿತ್ತು. ಅವರು ರಾಜಸ್ಥಾನಕ್ಕೆ ಹೋದರೆ, ಇಲ್ಲಿ ಎಲ್ಲವನ್ನು ಹೇಗೆ ನಿಭಾಯಿಸುತ್ತಾರೆ ಎಂದು ಆಪ್ತರು ಕೇಳಿದರು. ಇದರಿಂದ ಸರ್ಕಾರಿ ಉದ್ಯೋಗ ತೊರೆದ ನನ್ನ ತಂದೆ ನನ್ನೊಂದಿಗೆ ಉಳಿಯಲು ನಿರ್ಧರಿಸಿದರು.

ನನ್ನ ತಂದೆ ಸರ್ಕಾರಿ ಉದ್ಯೋಗ ತೊರೆದು ಆಂಧ್ರಕ್ಕೆ ಮರಳಿ ಬಂದಾಗ, ಅನೇಕರು ಟೀಕೆ ಮಾಡಿದ್ರು. ಆದ್ರೆ ನನ್ನ ತಂದೆ ಇದೆಲ್ಲವನ್ನೂ ಮೆಟ್ಟಿನಿಂತರು. ನನ್ನ ಮಗನ ದೊಡ್ಡ ಸಾಧನೆ ಮಾಡುತ್ತಾನೆ ಅಂತ ನಂಬಿದ್ದರು. ಆರ್ಥಿಕ ಸಂಕಷ್ಟದ ಸಮಯದಲ್ಲೂ ನನಗೆ ಬೇಕಾದ ಎಲ್ಲ ಸೌಲಭ್ಯಗಳನ್ನು ಒದಗಿಸಿಕೊಟ್ಟರು. ಅಂದು ಅಪಹಾಸ್ಯ ಮಾಡಿದ್ದ ಜನ, ಈಗ ನನ್ನನ್ನು ಹೊಗಳಲು ನನ್ನ ತಂದೆಗೆ ಕರೆ ಮಾಡುತ್ತಾರೆ, ಊಟಕ್ಕೆ ಕರೆಯುತ್ತಾರೆ. ಕಳೆದು ಹೋದ ಗೌರವ ಮರಳಿ ಪಡೆಯುತ್ತಿರುವುದು ನನಗೆ ತುಂಬಾ ಸಂತೋಷವಾಗಿದೆ ಎಂದು ನಿತೀಶ್ ಭಾವುಕರಾದರು.

ನಿತೀಶ್ ಕುಮಾರ್ ರೆಡ್ಡಿ ಚೊಚ್ಚಲ ಶತಕವನ್ನು ಸಿಡಿಸಿ ದಾಖಲೆ ನಿರ್ಮಿಸಿದ್ದು ಒಂದು ಕಡೆ. ಇನ್ನೊಂದು ಕಡೆ, ಒಂದೇ ಸರಣಿಯಲ್ಲಿ ಆಸ್ಟ್ರೇಲಿಯಾದ ವಿರುದ್ಧ ಅತಿಹೆಚ್ಚು ಸಿಕ್ಸರ್ (8) ಸಿಡಿಸಿದ ದಾಖಲೆಯನ್ನೂ ಬರೆದ್ದಾರೆ. ಅಲ್ಲದೇ ಎಂಸಿಜಿಯಲ್ಲಿ ನಡೆದ ಬಾಕ್ಸಿಂಗ್ ಡೇ ಟೆಸ್ಟ್‌ನಲ್ಲಿ ಶತಕ ಬಾರಿಸಿದ 5ನೇ ಭಾರತೀಯ ಬ್ಯಾಟರ್ ಎಂಬ ಹೆಗ್ಗಳಿಕೆಯನ್ನೂ ತಮ್ಮ ಹೆಗಲಿಗೇರಿಸಿಕೊಂಡರು.

# 147 ವರ್ಷಗಳ ಇತಿಹಾಸದ ದಾಖಲೆ ಮುರಿದ ಬುಮ್ರಾ

ಮೆಲ್ಬೋರ್ನ್ ನಲ್ಲಿ ನಡೆಯುತ್ತಿರುವ ಆಸ್ಟ್ರೇಲಿಯಾ ವಿರುದ್ಧದ 4ನೇ ಟೆಸ್ಟ್ ಪಂದ್ಯದ ಮೊದಲ ಇನಿಂಗ್ಸ್ ನಲ್ಲಿ 4 ವಿಕೆಟ್ ಕಬಳಿಸಿದ್ದ ಟೀಮ್ ಇಂಡಿಯಾ ವೇಗಿ ಜಸ್ ಪ್ರೀತ್ ಬುಮ್ರಾ, ಇದೀಗ ದ್ವಿತೀಯ ಇನಿಂಗ್ಸ್ ನಲ್ಲಿ ಮತ್ತೆ 4* ವಿಕೆಟ್ ಉರುಳಿಸಿದ್ದಾರೆ. ಈ 8 ವಿಕೆಟ್ ಗಳೊಂದಿಗೆ ಬುಮ್ರಾ ಟೆಸ್ಟ್ ಕ್ರಿಕೆಟ್ ನಲ್ಲಿ 200* ವಿಕೆಟ್ ಗಳನ್ನು ಪೂರೈಸಿದ್ದಾರೆ.

ಈ ಮೂಲಕ ಟೆಸ್ಟ್ ಕ್ರಿಕೆಟ್ ಇತಿಹಾಸದಲ್ಲೇ ಅತ್ಯುತ್ತಮ ಅವರೇಜ್ ನಲ್ಲಿ 200 ವಿಕೆಟ್ ಕಬಳಿಸಿದ ಬೌಲರ್ ಎಂಬ ವಿಶ್ವ ದಾಖಲೆಯನ್ನು ಜಸ್ ಪ್ರೀತ್ ಬುಮ್ರಾ ತಮ್ಮದಾಗಿಸಿಕೊಂಡಿದ್ದಾರೆ. ಟೀಮ್ ಇಂಡಿಯಾ ಪರ ಈವರೆಗೆ 44 ಟೆಸ್ಟ್ ಪಂದ್ಯಗಳನ್ನಾಡಿರುವ ಬುಮ್ರಾ 8494* ಎಸೆತಗಳನ್ನು ಎಸೆದಿದ್ದು ಈ ಮೂಲಕ ಒಟ್ಟು 202* ವಿಕೆಟ್ ಕಬಳಿಸಿದ್ದಾರೆ.



ಅದು ಕೂಡ ಕೇವಲ 19.38 ರನ್ ಸರಾಸರಿಯಲ್ಲಿ ಎಂಬುದು ವಿಶೇಷ. ಈ ಮೂಲಕ 147 ವರ್ಷಗಳ ಟೆಸ್ಟ್ ಕ್ರಿಕೆಟ್ ಇತಿಹಾಸದಲ್ಲಿ 20 ಕ್ಕಿಂತ ಕಡಿಮೆ ಅವರೇಜ್ ನಲ್ಲಿ 200 ವಿಕೆಟ್ ಕಬಳಿಸಿದ ವಿಶ್ವದ ಏಕೈಕ ಬೌಲರ್ ಎಂಬ ಹೊಸ ದಾಖಲೆಯನ್ನು ಜಸ್ ಪ್ರೀತ್ ಬುಮ್ರಾ ತಮ್ಮದಾಗಿಸಿಕೊಂಡಿದ್ದಾರೆ.

ಇದಕ್ಕೂ ಮುನ್ನ ವೆಸ್ಟ್ ಇಂಡೀಸ್ ನ ಜೋಯಲ್ ಗಾರ್ನರ್ 20.34 ರ ಸರಾಸರಿಯಲ್ಲಿ 200 ವಿಕೆಟ್ ಕಬಳಿಸಿದ್ದು ಟೆಸ್ಟ್ ನಲ್ಲಿ ಶ್ರೇಷ್ಠ ಸಾಧನೆಯಾಗಿತ್ತು. ಇದೀಗ ದಾಖಲೆ ಮುರಿದು ಹೊಸ ಇತಿಹಾಸ ನಿರ್ಮಿಸುವಲ್ಲಿ ಜಸ್ ಪ್ರೀತ್ ಬುಮ್ರಾ ಯಶಸ್ವಿಯಾಗಿರುವುದು ವಿಶೇಷ.

ಇದೀಗ ಟೆಸ್ಟ್ ಕ್ರಿಕೆಟ್ ನಲ್ಲಿ 85 ಇನಿಂಗ್ಸ್ ಗಳಲ್ಲಿ 1415* ಓವರ್ ಗಳನ್ನು ಎಸೆದಿರುವ ಜಸ್ ಪ್ರೀತ್ ಬುಮ್ರಾ ಒಟ್ಟು 202* ವಿಕೆಟ್ ಕಬಳಿಸಿದ್ದು, ಈ ಮೂಲಕ 200+ ವಿಕೆಟ್ ಪಡೆದ ಭಾರತದ 12ನೇ ಬೌಲರ್ ಎನಿಸಿಕೊಂಡಿದ್ದಾರೆ. ಹಾಗೆಯೇ ಈ ಸಾಧನೆ ಮಾಡಿದ ವಿಶ್ವದ 82ನೇ ಬೌಲರ್ ಎಂಬ ಹೆಗ್ಗಳಿಕೆಗೂ ಪಾತ್ರರಾಗಿದ್ದಾರೆ.

# ಸಾರಿಗೆ ನೌಕರರ ಹೋರಾಟಕ್ಕೆ ಬಿಜೆಪಿ ಸಂಪೂರ್ಣ ಬೆಂಬಲ: ಪಿ.ರಾಜೀವ್

**ಬೆಂಗಳೂರು:** ಸಾರಿಗೆ ಇಲಾಖೆಗೆ ಬಾಕಿ ಕೊಡದ ಹಿನ್ನೆಲೆಯಲ್ಲಿ ಸರ್ಕಾರದ ವಿರುದ್ಧ ಸಾರಿಗೆ ನೌಕರರು ಮಾಡ್ತಿರೋ ಹೋರಾಟಕ್ಕೆ ಬಿಜೆಪಿ ಸಂಪೂರ್ಣವಾಗಿ ಬೆಂಬಲ ನೀಡಲಿದೆ ಎಂದು ಬಿಜೆಪಿ ಪ್ರಧಾನ ಕಾರ್ಯದರ್ಶಿ ಪಿ.ರಾಜೀವ್ ತಿಳಿಸಿದರು.

ಬಿಜೆಪಿ ಕಚೇರಿಯಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಸರ್ಕಾರ ಸಾರಿಗೆ ಇಲಾಖೆಗೆ 7401 ಬಾಕಿ ಕೊಡಬೇಕು. ಬಾಕಿ, ಬಡ್ಡಿ ಸೇರಿ 7401 ಕೋಟಿ ಬಾಕಿ ಉಳಿಸಿಕೊಂಡಿದೆ. ಶಕ್ತಿ ಯೋಜನೆಗೆ ಸರ್ಕಾರ 1788 ಕೋಟಿ ಬಾಕಿ ಉಳಿಸಿಕೊಂಡಿದೆ. ಸಿದ್ದರಾಮಯ್ಯ ಜಾತ್ರೆ ಮಾಡ್ತಿದ್ದಾರೆ. ಆ ಯೋಜನೆ ತಂದೆ ಈ ಯೋಜನೆ ತಂದೆ ಅಂತಾರೆ. ಇಷ್ಟು ಬಾಕಿ ಕೊಡದ ಸಿಎಂ ಹೇಗೆ ಸಾಧನೆ ಮಾಡಿದ್ದಾರೆ. ಇಂತಹ ಸಾರಿಗೆ ಮಂತ್ರಿ, ಇರೋರು ಈ ರಾಜ್ಯದ ದುರ್ದೈವ ಎಂದು ಕಿಡಿಕಾರಿದರು.

ಇತ್ತೀಚೆಗೆ ಸಿಎಸ್ ಶಾಲಿನಿ ರಜನೀಶ್ ನೇತೃತ್ವದಲ್ಲಿ ನಡೆದ ಪರಿಶೀಲನೆ ಸಭೆಯಲ್ಲಿ ಚರ್ಚೆ ಆಗಿದೆ. ಸುಮಾರು 3650 ಸಾವಿರ ಕೋಟಿ ನಿಯಮಕ್ಕೆ ನಷ್ಟ ಆಗಿದೆ ಅಂತ ಸಭೆಯಲ್ಲಿ ಚರ್ಚೆ ಆಗಿದೆ. ಹೀಗಾಗಿ 15% ಪ್ರಯಾಣ ದರ ಹೆಚ್ಚಳಕ್ಕೆ ಸಭೆ ನಿರ್ಧಾರ ಮಾಡಿದ್ದಾರೆ. ಬಸ್ ಪ್ರಯಾಣ ದರ ಹೆಚ್ಚಳಕ್ಕೂ ಈ ಸಭೆಯಲ್ಲಿ ನಿರ್ಧಾರ ಮಾಡಲಾಗಿದೆ. ಇದಲ್ಲದೆ ನಿಯಮದಲ್ಲಿ 250 ಎಕರೆ ಜಾಗ ಇದ್ದು ಆದಾಯ ಕ್ರೋಢೀಕರಿಸಲು ಬಳಕೆ ಮಾಡಿಕೊಳ್ಳಿ ಎಂದು ಸಿಎಸ್ ಸಭೆಯಲ್ಲಿ ಸಲಹೆ ಕೊಟ್ಟಿದ್ದಾರೆ ಎಂದು ತಿಳಿಸಿದರು.



ಎರಡೂವರೆ ಈ ಸರ್ಕಾರ ಇರುತ್ತೆ. ಸಾರಿಗೆ ಇಲಾಖೆ ಹಾಳು ಮಾಡುತ್ತದೆ. ಈ ಸರ್ಕಾರ ದಿವಾಳಿ ಆಗಿದೆ. 1 ಲಕ್ಷ 5 ಸಾವಿರ ಕೋಟಿ ಸಾಲ ಮಾಡಿದೆ. ಇಷ್ಟಾದ್ರು ನಿಗಮಗಳಿಗೆ ಹಣ ಕೊಟ್ಟಿಲ್ಲ. ಸಾಲದ ಸುಳಿಯಲ್ಲಿ ಈ ಸರ್ಕಾರ ಸುಲುಕಿದೆ ಎಂದು ಕಿಡಿಕಾರಿದರು.

ಬೊಮ್ಮಾಯಿ ಸರ್ಕಾರದಲ್ಲಿ ಪಿಎಫ್ ಡ್ಯೂ ಇತ್ತು ಅದಕ್ಕೆ 1,200 ಕೋಟಿ ಬಿಡುಗಡೆ ಮಾಡಿದ್ದರು. ಡಿಸೇಲ್ ಬಾಕಿಗೆ 800 ಕೋಟಿ ರಿಲೀಸ್ ಮಾಡಿದ್ರು. ಬಿಜೆಪಿ ಸರ್ಕಾರದಲ್ಲಿ 500 ಕೋಟಿ ಬಸ್ ಖರೀದಿಗೆ ಅನುಮತಿ ಕೊಟ್ಟಿತ್ತು. ಇವರು ದುಡ್ಡು ರಿಲೀಸ್ ಮಾಡಿದ್ದಾರೆ. ಆದರೆ ಅದಕ್ಕೆ ಅನುಮೋದನೆ ಕೊಟ್ಟಿದ್ದು ಬಿಜೆಪಿ. ರಾಜ್ಯದಲ್ಲಿ ಈಗ ಯಾರದ್ದೋ ಮದುವೆಯಲ್ಲಿ ಉಂಡವನೇ ಜಾಣ ಅಂತ ಆಗಿದೆ. ರಾಜ್ಯದ ಜನ ಹೇಗೆ ಇದ್ದರು ಪರವಾಗಿಲ್ಲ ನಮ್ಮ ನಾಟಕ ನಾವು ಮಾಡೋಣ ಅಂತ ಈ ಸರ್ಕಾರದವರು ನಿರ್ಧಾರ ಮಾಡಿದ್ದಾರೆ. ಹಾಲಿನ ಪ್ರೋತ್ಸಾಹ ಧನ ಕಡಿತ ಮಾಡಿದ್ದಾರೆ. ರೈತರ ಪಂಪ್ ಸೆಟ್‌ಗೆ ಕೊಡ್ತಿದ್ದ 25 ಸಾವಿನ ಸಬ್ಸಿಡಿ ಕಟ್ ಮಾಡಿದ್ದಾರೆ. ಕರೆಂಟ್ ಬಿಲ್, ಹಾಲಿನ ರೇಟ್, ಬಾಂಡ್ ಪೇಪರ್ ಹೆಚ್ಚಾಗಿದೆ. ಆಹಾರ ಪದಾರ್ಥಗಳು ಎಲ್ಲವೂ ಹೆಚ್ಚು ಮಾಡಿದ್ದಾರೆ. ಆದರು ಸಾರಿಗೆ ನಿಗಮಕ್ಕೆ ಹಣ ಕೊಟ್ಟಿಲ್ಲ. ಸಾರಿಗೆ ನೌಕರರ ಹೋರಾಟಕ್ಕೆ ಬಿಜೆಪಿ ಸಂಪೂರ್ಣ ಬೆಂಬಲ ಕೊಡಲಿದೆ. ಕೂಡಲೇ ಬಾಕಿ ಹಣ ಸರ್ಕಾರ ಬಿಡುಗಡೆ ಮಾಡಬೇಕು ಎಂದು ಆಗ್ರಹಿಸಿದರು.

## ಡಿ.ಕೆ ಸುರೇಶ್ ತಂಗಿ ಅಂತ ಹೇಳ್ಕೊಂಡು ವಂಚನೆ ಕೇಸ್

# ಆರೋಪಿ ಐಶ್ವರ್ಯ ಗೌಡ, ಪತಿ ಹರೀಶ್ ಅರೆಸ್ಟ್

**ಬೆಂಗಳೂರು:** ಕಾಂಗ್ರೆಸ್ ಮಾಜಿ ಸಂಸದ ಡಿ.ಕೆ ಸುರೇಶ್ ಸಹೋದರಿ ಅಂತ ಹೇಳಿಕೊಂಡು 14.600 ಕೆಜಿಯಷ್ಟು ಚಿನ್ನಾಭರಣ ಖರೀದಿಸಿ ವಂಚನೆ ಮಾಡಿರುವ ಪ್ರಕರಣದಲ್ಲಿ ಇಬ್ಬರು ಆರೋಪಿಗಳನ್ನ ಚಂದ್ರಲೇಔಟ್ ಪೊಲೀಸರು ಬಂಧಿಸಿದ್ದಾರೆ.

ಆರ್.ಆರ್ ನಗರದ ನಿವಾಸಿ ಐಶ್ವರ್ಯಗೌಡ ಹಾಗೂ ಪತಿ ಹರೀಶ್ ಬಂಧಿತ ಆರೋಪಿಗಳು. ಅಲ್ಲದೇ ನಟ ಧರ್ಮೇಂದ್ರ ಅವರಿಗೂ ವಿಚಾರಣೆಗೆ ಹಾಜರಾಗುವಂತೆ ನೋಟಿಸ್ ನೀಡಿದ್ದಾರೆ.

ಸದ್ಯ ಬಂಧಿತ ಐಶ್ವರ್ಯ ಗೌಡ, ಪತಿ ಹರೀಶ್ ಇಬ್ಬರನ್ನೂ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಮೆಡಿಕಲ್ ಟೆಸ್ಟ್‌ಗೆ ಕರೆದೊಯ್ಯಲಾಗಿದೆ. ವೈದ್ಯಕೀಯ ಪರೀಕ್ಷೆ ಮುಕ್ತಾಯಗೊಂಡ ಬಳಿಕ 4ನೇ ಎಸಿಎಂಎಂ ಕೋರ್ಟ್‌ಗೆ ಹಾಜರುಪಡಿಸಲಿದ್ದಾರೆ. ಐಶ್ವರ್ಯಗೌಡರನ್ನ ಕಸ್ಟಡಿಗೆ ನೀಡುವಂತೆ ಕೇಳಲು ರಿಮಾಂಡ್ ಅಪ್ಲಿಕೇಷನ್ ಸಹ ಸಿದ್ದತೆ ಮಾಡಿಕೊಳ್ಳಲಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.



**ಏನಿದು ಪ್ರಕರಣ?:** ಐಶ್ವರ್ಯ ಗೌಡ ಕಳೆದ ಜನವರಿಯಿಂದ ಇಲ್ಲಿಯವರೆಗೂ ವಾರಾಹಿ ವರ್ಲ್ಡ್ ಆಫ್ ಗೋಲ್ಡ್ ಶಾಪ್‌ನಲ್ಲಿ 14 ಕೆಜಿ 600 ಗ್ರಾಂ.ನಷ್ಟು ಚಿನ್ನಾಭರಣ ಖರೀದಿಸಿದ್ದಳು. ಹಣ ಕೊಡದೇ ಇದ್ದಾಗ, ಡಿಕೆ ಸುರೇಶ್ ಕಡೆಯಿಂದ ಮಾಲೀಕರಿಗೆ ಕರೆ ಮಾಡಿಸೋದಾಗಿ ಬೆದರಿಕೆ ಹಾಕಿದ್ದರು. ಈ ವೇಳೆ ಸಿನಿಮಾ ನಟ ಧರ್ಮೇಂದ್ರ, ಎಂಬುವವರಿಂದ ಐಶ್ವರ್ಯಗೌಡ ಕರೆ ಮಾಡಿಸಿ, ಬೆದರಿಕೆ ಹಾಕಿದ್ದಾರೆ ಅನ್ನೋ ಆರೋಪವೂ ಕೇಳಿಬಂದಿದೆ.

ಧರ್ಮೇಂದ್ರ, ಡಿ.ಕೆ ಸುರೇಶ್ ವಾಯ್ಸ್‌ನಲ್ಲಿ ಕರೆ ಮಾಡಿದ್ದ ಧರ್ಮೇಂದ್ರ, ಮಾಲೀಕರಾದ ವನಿತಾ ಐತಾಳ್‌ಗೆ ಕರೆ ಮಾಡಿ ಸಮಯ ಕೇಳಿದ್ದರು. ಕೊನೆಗೆ ತಾನೇ ಧರ್ಮೇಂದ್ರನನ್ನ ಕಳುಹಿಸಿ ಕೊಲೆ ಮಾಡಿಸುವುದಾಗಿಯೂ ಬೆದರಿಕೆ ಹಾಕಿದ್ದರು. ಅವಾಚ್ಯ ಶಬ್ಧಗಳಿಂದ ಬೈದು, ಜೀವ ಬೆದರಿಕೆ ಹಾಕಿದ್ದರು ಎಂದು ಆರೋಪಿಸಲಾಗಿದೆ. ಈ ಕುರಿತು ಜ್ಯುವೆಲರಿ ಮಾಲೀಕಾರದ ವನಿತಾ ಆರ್.ಆರ್ ನಗರ ಪೊಲೀಸ್ ಠಾಣೆಗೆ ದೂರು ನೀಡಿದ್ದರು, ವನಿತಾ ಐತಾಳ್ ನೀಡಿದ ದೂರಿನ ಮೇರೆಗೆ ಎಫ್ ಐಆರ್ ದಾಖಲಿಸಿಕೊಂಡಿದ್ದ ಪೊಲೀಸರು ಇಂದು ಆರೋಪಿಗಳಿಬ್ಬರನ್ನ ಬಂಧಿಸಿದ್ದಾರೆ.

Printed, Published & Owned by N.Venugopal Krishna, Printed at DASHAPRAMATHI MUDRANALAYA, No.433/1, Chikkavitalenahalli Village, Thagachagere Post, Kasaba Hobli, Channapatna Taluk, Ramanagar District, Pin-562160. Published at No.15, Ground Floor, 12th Block, 5th Main, Kumara Park (West), Behind BDA Head Office, Bengaluru-560020. Editor: N.Venugopal Krishna, Mobile No.+91 94835 89085, email: sanjemugilu@gmail.com